ಜುಲೈ 13, 2025

41ನೇ ವರ್ಷದಲ್ಲಿ

www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1993

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹20/-

## ಮನಸ್ಸಿಗೆ ನೋವಾಗಿದ್ರೆ ಕ್ಷಮಿಸಿ.....



## ದಕ್ಷ ಪೊಲೀಸ್ ಅಧಿಕಾರಿ ಭರಮನಿ ಕ್ಷಮೆ ಕೇಳಿದ ಸಿದ್ದು!

## ಐದು ವರ್ಷ ನಾನೇ ಸಿಎಂ! ಡಿಕೆಶಿ ಮುಂದಿನ ನಡೆ...?!



## ಲಿವಿಂಗ್ ಟುಗೆದರ್ ಸಖಿಯ ಕೊಂದು ಮೂಟೆ ಕಟ್ಟಿದ!



## ಹೆಂಡ್ತೀನ ಕೊಂದು ತಾನೂ ಸೂಸೈಡ್ ಮಾಡಿಕೊಂಡ!



## ಅಮ್ಮ-ಮಗನ ಮಧ್ಯೆ ಬಿರುಕು!





## ಇನ್ಫೋಸಿಸ್‌ನ ಕಾಮುಕ ಟೆಕ್ಕಿ ಶೌಚಾಲಯದಲ್ಲಿ....?!

# ಐದು ವರ್ಷ ನಾನೇ ಸಿಎಂ! ಡಿಕೆಶಿ ಮುಂದಿನ ನಡೆ...?!



ಕಾಂಗ್ರೆಸ್ ಸರ್ಕಾರದಲ್ಲಿ ಆಗಾಗ 'ಮುಖ್ಯಮಂತ್ರಿ' ಬದಲಾವಣೆ ಚರ್ಚೆ ಮುನ್ನಲೆಗೆ ಬರುತ್ತಲೇ ಇದೆ! ಕಾಂಗ್ರೆಸ್ ನಾಯಕತ್ವ ಬದಲಾವಣೆ ಚರ್ಚೆ ಕೂಡ ಜೋರಾಗಿ ನಡೆಯುತ್ತಿದೆ! ಇತ್ತ ರಾಮನಗರ ಶಾಸಕ ಹಾಗೂ ಡಿಕೆಶಿ ಅವರ ಶಿಷ್ಯ ಇಕ್ಬಾಲ್ ಹುಸೇನ್ ರಾಜ್ಯಕ್ಕೆ ಸಿಎಂ ಬದಲಾವಣೆ ಅಗತ್ಯವಿದೆ ಎಂದು ಮೊನ್ನೆ ಮೊನ್ನೆ ಒತ್ತಾಯಿಸಿದ್ದಾರೆ!

**ಸಿದ್ದು ಲಕ್ಕಿ ಮ್ಯಾನ್, ಲಾಟರಿ ಹೊಡೆದುಬಿಟ್ಟ!**

ಇನ್ನು, ಕಾಂಗ್ರೆಸ್‌ನ ಹಿರಿಯ ಶಾಸಕ ಬಿ.ಆರ್. ಪಾಟೀಲ್ ಅವರು, ಸಿದ್ದರಾಮಯ್ಯ ಲಕ್ಕಿ ಮ್ಯಾನ್, ಲಾಟರಿ ಹೊಡೆದುಬಿಟ್ಟ.... ಅವನ ಗ್ರಹಚಾರ ಚೆನ್ನಾಗಿತ್ತು... ಅದಕ್ಕೆ ಸಿಎಂ ಆಗಿ ಬಿಟ್ಟ... ಎಂದು ಹೇಳಿರುವ ವಿಡಿಯೋ ವೈರಲ್ ಆಗಿದ್ದು, ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿದೆ!



ಇದರ ಬೆನ್ನಲ್ಲೇ ಚಿಕ್ಕಬಳ್ಳಾಪುರದ ನಂದಿ ಹಿಲ್ಸ್‌ನಲ್ಲಿ ಸಂಪುಟ ಸಭೆ ನಡೆದಾಗ, ಡಿ.ಕೆ. ಶಿವ ಕುಮಾರ್ ಅವರ ಪಕ್ಕದಲ್ಲೇ ಕೂರಿಸಿಕೊಂಡು ಮಾಧ್ಯಮ ಗಳೊಂದಿಗೆ ಮಾತನಾಡಿದ್ದ ಸಿದ್ದರಾಮಯ್ಯ, ಐದು ವರ್ಷ ನಾನೇ ಸಿಎಂ ಆಗಿ ರ್ತೀನಿ ಕಣ್ರೀ, ನಿಮಗೇಕೆ ಅನುಮಾನ? ಎಂದಿದ್ದು ಬ್ರೇಕಿಂಗ್ ನ್ಯೂಸ್ ಆಗಿತ್ತು!

ಈ ಬಿಜೆಪಿಯವರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು. ಸತ್ಯ ಹೇಳುವುದು ಗೊತ್ತೇ ಇಲ್ಲ ಅವರಿಗೆ. ಅವರು ನಂಬುತ್ತಾರಾ ಬಿಡುತ್ತಾರಾ ಗೊತ್ತಿಲ್ಲ, ನಾವು ಎಲ್ಲ ಒಟ್ಟಾಗಿದ್ದೇವೆ. ನಮ್ಮ ಸರ್ಕಾರದ ಬಗ್ಗೆ ಈಗಾಗಲೇ ಮೈಸೂರಲ್ಲಿ ಹೇಳಿದ್ದೀವಿ. ಐದು ವರ್ಷ ನಾನೇ ಅಧಿಕಾರದಲ್ಲಿರುತ್ತೇನೆ. ಕಲ್ಲುಬಂಡೆ ತರಹ ನಮ್ಮ ಸರ್ಕಾರ ಗಟ್ಟಿಯಾಗಿರುತ್ತದೆ. ಬಿಜೆಪಿಯವರು ಹಗಲು ಗನಸು ಕಾಣುತ್ತಿದ್ದಾರೆ. ಅವರು ಅಧಿಕಾರದಲ್ಲಿ ಇದ್ದಾಗ ಏನೂ ಮಾಡಲಿಲ್ಲ, ಯಾವುದಾದರೂ ಕೆಲಸ ಮಾಡಿದ್ದೇವೆ ಎಂಬುದನ್ನು ಹೇಳಲಿ ನೋಡೋಣ... ತಮ್ಮ ಕಾಲು ಎಳೆಯೋ ಕೆಲ ಬಿಜೆಪಿ ವರಿಷ್ಟರ ವಿರುದ್ಧ ಹರಿ ಹಾಯ್ದಿದ್ದರು ಸಿದ್ದರಾಮಯ್ಯ!

**ಕಷ್ಟಪಟ್ಟು ಕೆಲಸ ಮಾಡಿದ್ದಾರೆ!**

ಅವತ್ತು ಸಿದ್ದು ಪಕ್ಕದಲ್ಲೇ ಕುಳಿತಿದ್ದ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ತುಟಿಕ್ ಪಿಟಿಕ್ ಎಂದಿರಲಿಲ್ಲ! ಮಾಧ್ಯಮದವರು ಡಿಕೆಶಿ ಅವರ ಮುಖ ನೋಡಿಕೊಂಡೆ ಸಿದ್ದರಾಮಯ್ಯ ಬಳಿ ಕೆಲ ಪ್ರಶ್ನೆಗಳನ್ನು ಕೇಳಿದ್ದರು. ಮುಖ್ಯವಾಗಿ, ಡಿ.ಕೆ. ಶಿವಕುಮಾರ್ ಅವರನ್ನು ಬೆಂಬಲಿಸುವ ಶಾಸಕರು ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಬೇಕೆಂದು ಒತ್ತಾಯಿಸುತ್ತಿದ್ದಾರಲ್ಲ, ಇದಕ್ಕೇನು ಹೇಳ್ತೀರಿ...? ಎಂಬ ಪ್ರಶ್ನೆ ಎದ್ದಿತ್ತು!

ಅದಕ್ಕೆಲ್ಲ ಆರಾಮವಾಗಿ ಉತ್ತರಿಸಿದ್ದ ಸಿದ್ದರಾಮಯ್ಯ, ಪಕ್ಷಕ್ಕಾಗಿ ಡಿ.ಕೆ. ಶಿವಕುಮಾರ್ ಕಷ್ಟಪಟ್ಟು ದುಡಿದಿದ್ದಾರೆ ಎಂದು ಹೋಗಳಿ, ಡಿಕೆಶಿ ಅವರ ಶ್ರಮವನ್ನು ವಿಶೇಷವಾಗಿ ಉಲ್ಲೇಖಿಸಿ... ಎಲ್ಲರೂ ಕಷ್ಟಪಟ್ಟು ಕೆಲಸ ಮಾಡಿದ್ದಾರೆ.



ನನ್ನಂತೆಯೇ ನೂರಾರು ಜನರು ಕಷ್ಟಪಟ್ಟು ಕೆಲಸ ಮಾಡಿದ್ದಾರೆ. ನಾನು ಒಬ್ಬಂಟಿಯಲ್ಲ, ಪಕ್ಷದ ಲಕ್ಷಾಂತರ ಕಾರ್ಯಕರ್ತರು ಕಷ್ಟಪಟ್ಟು ಕೆಲಸ ಮಾಡಿದ್ದಾರೆ. ನಾವು ಮೊದಲು ಅವರ ಬಗ್ಗೆ ಯೋಚಿಸಬೇಕು ಎಂದು ಬಿಟ್ಟರು!!

ನಿಮಗೂ ಗೊತ್ತಿರಬೇಕು, ಇತ್ತೀಚೆಗೆ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ದೆಹಲಿಗೆ ಹೋಗಿ ಹೈಕಮಾಂಡ್ ಭೇಟಿಯಾಗಿ ಬಂದಿದ್ದಾರೆ. ಇದರ ಬೆನ್ನಲ್ಲೇ ಸರ್ಕಾರದಲ್ಲಿ ಸೆಪ್ಟೆಂಬರ್ ನಂತರ ಕ್ರಾಂತಿ ನಡೆಯಲಿದೆ ಎಂದೂ ಸಿಎಂ ಬದಲಾವಣೆ ಅಥವಾ ಸಚಿವರ ಬದಲಾವಣೆ ಆಗಲಿದೆ ಎಂದೂ ಕಲರ್ ಫುಲ್ ಚರ್ಚೆ ನಡೆಯುತ್ತಿರೋದು!

ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಡುವಿನ ಅಧಿಕಾರ ಹಂಚಿಕೆ ಒಪ್ಪಂದವನ್ನು ಉಲ್ಲೇಖಿಸಿ ಈ ವರ್ಷದ ಕೊನೆಯಲ್ಲಿ ಮುಖ್ಯಮಂತ್ರಿ ಬದಲಾವಣೆಯ ಬಗ್ಗೆ ರಾಜಕೀಯ ವಲಯಗಳಲ್ಲಿ, ವಿಶೇಷವಾಗಿ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಕೆಲವು ಊಹಾಪೋಹಗಳು ನಡೆಯುತ್ತಿವೆ!

**ನಮ್ಮಲ್ಲಿ ಭಿನ್ನಾಭಿಪ್ರಾಯ ವಿಲ್ಲ!**

ಈ ನಡುವೆ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಡಿಸಿಎಂ ಡಿ.ಕೆ. ಶಿವಕುಮಾರ್, ನಾಯಕತ್ವ ಬದಲಾವಣೆಯ ಬಗ್ಗೆ ಯಾವುದೇ ಚರ್ಚೆ ಇಲ್ಲ, ಸಿಎಂ ಸಿದ್ದರಾಮಯ್ಯ ಮತ್ತು ಪಕ್ಷದ ಕೈ ಬಲಪಡಿಸುವ ಬಗ್ಗೆ ಒತ್ತಿ ಹೇಳಿದ್ದರು!

ಮುಖ್ಯಮಂತ್ರಿಯನ್ನು ಬದಲಾಯಿಸಲಾಗುವುದು ಎಂದು ಬಿಜೆಪಿ ಮತ್ತು ಜೆಡಿಎಸ್ ನಾಯಕರು ಹೇಳುತ್ತಾರಲ್ಲಾ.... ಎಂದು ಕೇಳಿದ್ದಕ್ಕೆ, ತಕ್ಷಣ ಕೋಪಗೊಂಡ ಡಿ.ಕೆ. ಶಿವಕುಮಾರ್, ಅವರು ನಮ್ಮ ಹೈಕಮಾಂಡ್, ಆರ್. ಅಶೋಕ್, ಬಿ.ವೈ. ವಿಜಯೇಂದ್ರ, ಚಲವಾದಿ ನಾರಾಯಣಸ್ವಾಮಿ ಆ ರೀತಿ ಹೇಳಿದರೆ ನೀವು ಬರೆದು ಬಿಡುವುದೇ? ನೀವು ಪರಿಶೀಲಿಸಬೇಕಲ್ಲವೇ....? ಎಂದು ಮಾಧ್ಯಮಗಳಿಗೆ ಚುಚ್ಚಿದ್ದರು! ನಂತರ ಸಮಾಧಾನ ಮಾಡಿಕೊಂಡು, ಆಡಳಿತಾರೂಢ ಕಾಂಗ್ರೆಸ್ ಸರ್ಕಾರದಲ್ಲಿ ಯಾವುದೇ ಅಸಮಾಧಾನವಿಲ್ಲ, ಸಿದ್ದರಾಮಯ್ಯ ನಾಯಕತ್ವದ ವಿಷಯದಲ್ಲಿ ಯಾವುದೇ ಭಿನ್ನಾಭಿಪ್ರಾಯದ ಅಗತ್ಯವಿಲ್ಲ ಎಂದು ಹೇಳಿದ್ದರು!

**ನೋಟೀಸ್ ಎಚ್ಚರಿಕೆ!**

ಏನೇ ಆದರೂ ಮಾಧ್ಯಮಗಳು ಸುಮ್ನೆ ಇರೋಲ್ಲ, ಡಿಕೆಶಿ ಸಿಕ್ಕಿದಾಗ ಮತ್ತೆ ಮತ್ತೆ ಅದೇ ಪ್ರಶ್ನೆ ಕೇಳುತ್ತವೆ! ಅವರೂ ಹೇಳ್ತಾನೆ ಇದ್ದಾರೆ. ರಾಜ್ಯ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಡಿ.ಕೆ. ಶಿವಕುಮಾರ್, ನಾಯಕತ್ವ ಬದಲಾವಣೆಯ ಬಗ್ಗೆ ಯಾವುದೇ ಚರ್ಚೆ ಇಲ್ಲ, ರಾಜ್ಯದಲ್ಲಿ ಸಿಎಂ ಸಿದ್ದರಾಮಯ್ಯ ಮತ್ತು ಪಕ್ಷದ ಸರ್ಕಾರದ ಕೈಗಳನ್ನು ಬಲಪಡಿಸುವ ಬಗ್ಗೆ ಒತ್ತಿ ಹೇಳಿದರು.



ಪಕ್ಷದ ಶಿಸ್ತು ಮುಖ್ಯ, ತಮ್ಮನ್ನು ಮುಖ್ಯಮಂತ್ರಿಯನ್ನಾಗಿ ಮಾಡಲು ಯಾರನ್ನೂ ಕೇಳಿಲ್ಲ ನಾಯಕತ್ವ ಬದಲಾವಣೆಯ ವಿಷಯದ ಬಗ್ಗೆ ಸಾರ್ವಜನಿಕ ಹೇಳಿಕೆಗಳನ್ನು ನೀಡುವ ನಾಯಕರಿಗೆ ನೋಟಿಸ್ ನೀಡಲಾಗುವುದು ಎಂದು ಎಚ್ಚರಿಸಿದ್ದಾರೆ! ಈ ಮಧ್ಯೆ, ಕರ್ನಾಟಕದ ಉಸ್ತುವಾರಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲಾ ಅವರು ಸತತ ಮೂರನೇ ದಿನವೂ ಪಕ್ಷದ ಶಾಸಕರೊಂದಿಗೆ ತಮ್ಮ ಏಕದಿನ ಸಭೆಗಳನ್ನು ಮುಂದುವರೆಸಿದ್ದಾರೆ.

ಸುರ್ಜೆವಾಲಾ ಅವರ ಸಭೆಗಳು ಪಕ್ಷದಲ್ಲಿನ ಅಸಮಾಧಾನವನ್ನು ಶಮನಗೊಳಿಸುತ್ತವೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, ಪಕ್ಷದಲ್ಲಿ ಯಾವುದೇ ಅಸಮಾಧಾನವಿಲ್ಲ, ಪಕ್ಷ ಮತ್ತು ಸಂಘಟನೆಗೆ ಸಂಬಂಧಿಸಿದ ವಿಷಯಗಳು ಮತ್ತು ಚುನಾವಣೆಗೆ ಹೇಗೆ ತಯಾರಿ ನಡೆಸಬೇಕು ಎಂಬುದರ ಕುರಿತು ಸುರ್ಜೆವಾಲಾ ಈಗಿನಿಂದಲೇ ಹೊಣೆಗಾರಿಕೆಯನ್ನು ನಿಗದಿಪಡಿಸುತ್ತಿದ್ದಾರೆ ಎಂದು ಹೇಳಿದ್ದಾರೆ.

ಅಂದಹಾಗೆ, ಮೇ 2023ರಲ್ಲಿ ವಿಧಾನಸಭಾ ಚುನಾವಣಾ ಫಲಿತಾಂಶ ಘೋಷಣೆಯ ನಂತರ ಮುಖ್ಯಮಂತ್ರಿ ಹುದ್ದೆಗೆ ಸಿದ್ದರಾಮಯ್ಯ ಮತ್ತು ಶಿವಕುಮಾರ್ ನಡುವೆ ತೀವ್ರ ಪೈಪೋಟಿ ಇತ್ತು, ಆಗ ಪರ್ಯಾಯ ಮುಖ್ಯಮಂತ್ರಿ ಸೂತ್ರದ ಆಧಾರದ ಮೇಲೆ ಇಬ್ಬರ ನಡುವೆ ರಾಜಿ ಸಂಧಾನವಾಗಿತ್ತು, ಅದರ ಪ್ರಕಾರ ಎರಡೂವರೆ ವರ್ಷಗಳ ಬಳಿಕ ಡಿ.ಕೆ. ಶಿವಕುಮಾರ್ ಸಿಎಂ ಆಗುತ್ತಾರೆ ಎಂಬ ಊಹಾಪೋಹಗಳಿವೆ! ಆದರೆ ಪಕ್ಷದಿಂದ ಈ ಬಗ್ಗೆ ಅಧಿಕೃತ ಮಾಹಿತಿ ಹೊರ ಬಿದ್ದಿಲ್ಲ.... ಎಲ್ಲವೂ ಗಪ್‌ಚುಪ್ ಆಗಿ ನಡೆಯುತ್ತಿದೆ! ಡಿಕೆ ಪಾಳೆಯದಲ್ಲಿ ಮೋಡ ಮುಸುಕಿದ ವಾತಾವರಣವಿದ್ದು ಯಾವಾಗ ಸಿಡಿಲು ಬಡಿಯುತ್ತೋ.... ಸಿದ್ದು ಕುರ್ಚಿ ಉರುಳುತ್ತೋ ಹೇಳಲಿಕ್ಕಾಗದು ಮಾರ್ರೆ...!!

## ಬೇರೆ ದಾರಿಯೆ ಇಲ್ಲ!

ಮುಖ್ಯಮಂತ್ರಿ ಸಿದ್ದರಾಮಯ್ಯ, ನಂದಿ ಹಿಲ್ಸ್‌ನಲ್ಲಿ ಡಿಸಿಎಂ ಡಿಕೆಶಿಯವರನ್ನು ಪಕ್ಕದಲ್ಲಿ ಕೂರಿಸಿಕೊಂಡೇ, ಐದು ವರ್ಷ ನಾನೇ ಕರ್ನಾಟಕದ ಮುಖ್ಯಮಂತ್ರಿಯಾಗಿರುತ್ತೇನೆ, ನಿಮಗ್ಯಾಕ್ರಿ ಅನುಮಾನ?! ಎಂದ ಬಗ್ಗೆ ಮಾಧ್ಯಮಗಳು ಅವತ್ತೇ ಡಿ.ಕೆ. ಶಿವಕುಮಾರ್ ಬಳಿ, ಈ ಬಗ್ಗೆ ಪಿಟೀಲು ಕುಯ್ದಾಗ... ಕನಕಪುರದ ಹೆಬ್ಬಂಡೆ ನಿಜಕ್ಕೂ ಧೃತಿಗೆಟ್ಟಂತೆ ಕಂಡಿದ್ದು ಸುಳ್ಳಲ್ಲ! ಅವರ ಮಾತಿನಲ್ಲಿ ಅಸಹಾಯಕತೆ ಕೂಡ ಇತ್ತು.

ಇದಕ್ಕೆ ನನ್ನ ಅಭ್ಯಂತರವೂ ಇಲ್ಲ, ಆಕ್ಷೇಪವೂ ಇಲ್ಲ... ನನಗೂ ಬೇರೆ ಆಯ್ಕೆಯೂ ಇಲ್ಲ! ಕಾಂಗ್ರೆಸ್ ಹೈಕಮಾಂಡ್ ಏನು ಹೇಳುತ್ತದೋ ಅದನ್ನು ಪಾಲಿಸುವುದು ನನ್ನ ಕರ್ತವ್ಯ. ಅವರ ಬೆಂಬಲಕ್ಕೆ ನಿಲ್ಲುತ್ತೇನೆ ಎಂದಿದ್ದರು! ಇಷ್ಟಕ್ಕೂ ಸುಮ್ಮನಿರದ ತೀಟೆ ಸುಬ್ಬರು, ಡಿಸಿಎಂ ಅವರೇ, ಕೆಲವರು ನಿಮ್ಮನ್ನು ಮುಖ್ಯಮಂತ್ರಿಯಾಗಬೇಕೆಂದು ಒತ್ತಾಯಿಸುತ್ತಿದ್ದಾರಲ್ಲಾ? ಎಂದು ಇನ್ನೊಂದು ಪ್ರಶ್ನೆ ತಿವಿದಿದ್ದರು! ಈ ಪ್ರಶ್ನೆಗೆ, ನಾನು ಏನನ್ನೂ ಚರ್ಚಿಸಲು ಬಯಸುವುದಿಲ್ಲ, ಲಕ್ಷಾಂತರ ಕಾರ್ಯಕರ್ತರು ಕಾಂಗ್ರೆಸ್ ಸರ್ಕಾರ ತರಲು ಶ್ರಮ ಪಟ್ಟಿದ್ದಾರೆ. ಡಿ.ಕೆ. ಶಿವಕುಮಾರ್ ಮಾತ್ರ ಕಷ್ಟಪಟ್ಟಿಲ್ಲ ಅವರ ಬಗ್ಗೆಯೂ ಯೋಚಿಸಬೇಕಿದೆ...ಎಂದು ಮಾರ್ಮಿಕವಾಗಿ ನುಡಿದಿದ್ದರು ಡಿಕೆ ಸಾಹೇಬ್ರು! ☯

## ಹೌದು, ನಾನು ಲಕ್ಕಿನೇ...

ಆಳಂದದ ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ್ ಅವರು ಕೆ.ಆರ್. ಪೇಟೆಗೆ ಬಂದಿದ್ದಾಗ, ಯಾರ ಜೊತೆಗೊ ಮೊಬೈಲ್ ಸಂಭಾಷಣೆ ನಡೆಸುತ್ತ, ಸಿದ್ದರಾಮಯ್ಯ ಲಕ್ಕಿ ಮ್ಯಾನ್, ಲಾಟರಿ ಹೊಡೆದುಬಿಟ್ಟ! ಅವನ ಗ್ರಹಚಾರ ಚೆನ್ನಾಗಿತ್ತು, ಅದಕ್ಕೆ ಸಿಎಂ ಆಗಿ ಬಿಟ್ಟ... ಹೇಳಿರುವ ವಿಡಿಯೋ ವೈರಲ್ ಆಗಿದ್ದು, ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿದೆ!

ಆಳಂದದ ಶಾಸಕ ಬಿ.ಆರ್. ಪಾಟೀಲ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ, ಹೌದು, ನಾನು ಅದೃಷ್ಟಶಾಲಿ. ಅದಕ್ಕಾಗಿಯೇ ನಾನು ಮುಖ್ಯಮಂತ್ರಿಯಾದೆ. ನಾನು ಅವರು ಒಟ್ಟೊಟ್ಟಿಗೆ ಶಾಸಕರಾಗಿದ್ದು, ಅದಕ್ಕೇ ಹಾಗೆ ಹೇಳಿರಬಹುದು! ಅದಕ್ಕೆ ನಾನೇನು ಮಾಡಲಿ? ಎಂದು ವ್ಯಂಗ್ಯವಾಗಿ ನುಡಿದಿದ್ದರು ಸಿದ್ದರಾಮಯ್ಯ!

ಅಂದಹಾಗೆ, ಜೆಡಿ(ಎಸ್) ತೊರೆದು ಕಾಂಗ್ರೆಸ್ ಸೇರಿದ ಎಂಟು ಶಾಸಕರಲ್ಲಿ ನಾನೂ ಒಬ್ಬ, ಕೆಲವರು ಶಾಸಕರಾಗಿದ್ದರೆ, ಇನ್ನು ಕೆಲವರು ಸಚಿವರಾಗಿದ್ದಾರೆ. ಪಾಟೀಲರು ಹೇಳಿದಂತೆ, ಸಿದ್ದರಾಮಯ್ಯ ಲಕ್ಕಿ ಮ್ಯಾನ್, ಮುಖ್ಯಮಂತ್ರಿಯಾಗಿದ್ದಾರೆ! ☯

# ಸಿಎಂ ಸಿದ್ದರಾಮಯ್ಯ ಮಾಡಿದ ಅವಮಾನ! ಎಎಸ್ಪಿ ಭರಮನಿ ಸ್ವಯಂ ನಿವೃತ್ತಿ ಕೋರಿ ಪತ್ರ!!






28-04-2025ರಂದು ಬೆಳಗಾವಿಯಲ್ಲಿ ನಡೆದಿದ್ದ ಒಂದು ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಧಾರವಾಡ ಹೆಚ್ಚುವರಿ ಎಸ್‌ಪಿ ನಾರಾಯಣ ಭರಮನಿ ಅವರ ಮೇಲೆ ಸಾರ್ವಜನಿಕವಾಗಿ ಕೈಎತ್ತಿ ಹೊಡೆಯಲು ಮುಂದಾಗಿದ್ದರಿಂದ ಮನ ನೊಂದ ಭರಮನಿ ಸರ್ ಇದೀಗ ಸ್ವಯಂ ನಿವೃತ್ತಿಗೆ ಮನವಿ ಮಾಡಿ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ! ಪತ್ರದಲ್ಲಿ ಅವರು, ಇಲಾಖೆ ಜತೆ ತಾವು ಹೊಂದಿದ್ದ ಬಾಂಧವ್ಯದ ಬಗ್ಗೆ ಅತ್ಯಂತ ಭಾವುಕರಾಗಿ ಉಲ್ಲೇಖಿಸಿದ್ದಾರೆ....

**ನಾರಾಯಣ ಭರಮನಿ ಪತ್ರದಲ್ಲೇನಿದೆ?**

ಮಾನ್ಯ ಮುಖ್ಯಮಂತ್ರಿಗಳಿಂದಾದ ಅವಮಾನದಿಂದ ಮನನೊಂದು ಸ್ವಯಂ ನಿವೃತ್ತಿ ಸಲ್ಲಿಸಲು ಮುಂದಾಗಿದ್ದೇನೆ. ನಾನು, ಎನ್.ವಿ. ಭರಮನಿ, ಹೆಚ್ಚುವರಿ ಪೊಲೀಸ್ ಅಧೀಕ್ಷಕರು, ಧಾರವಾಡ. 1994ನೇ ಸಾಲಿನಲ್ಲಿ ಪಿಎಸ್‌ಐ ಆಗಿ ನೇಮಕಗೊಂಡು ಕಳೆದ 31 ವರ್ಷಗಳಿಂದ ರಾಜ್ಯ ಪೊಲೀಸ್ ಇಲಾಖೆಯಲ್ಲಿ ರಾಜ್ಯದ ವಿವಿಧ ಸ್ಥಳಗಳಲ್ಲಿ ಪಿಎಸ್‌ಐ ಯಿಂದ ಹೆಚ್ಚುವರಿ ಪೊಲೀಸ್ ಅಧೀಕ್ಷಕರವರೆಗೆ ವಿವಿಧ ಹುದ್ದೆಗಳಲ್ಲಿ ಕಾನೂನು ಬದ್ಧ ಕಾರ್ಯನಿರ್ವಹಿಸುತ್ತ ಬಂದಿರುತ್ತೇನೆ. ದಿನಾಂಕ : 28/04/2025ರಂದು ಕೇಂದ್ರ ಸರ್ಕಾರದ ಬೆಲೆ ಏರಿಕೆ ನೀತಿ ವಿರೋಧಿಸಿ ಕಾಂಗ್ರೆಸ್ ಪಕ್ಷದ ವತಿಯಿಂದ ಶ್ರೀ ಸಿದ್ದರಾಮಯ್ಯ. ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ರಾಜ್ಯ ರವರ ನೇತೃತ್ವದಲ್ಲಿ ಬೆಳಗಾವಿಯಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆಯ ಬಂದೋಬಸ್ತ್ ಕರ್ತವ್ಯಕ್ಕೆ ಮೇಲಾಧಿಕಾರಿಗಳು ನನ್ನನ್ನು ನಿಯೋಜಿಸಿ ವೇದಿಕೆಯ ಉಸ್ತುವಾರಿ ವಹಿಸಿದರು'' ಎಂದು ಪತ್ರದಲ್ಲಿ ಭರಮನಿ ಉಲ್ಲೇಖಿಸಿದ್ದಾರೆ.

ಮುಂದುವರಿದು, ನೀಡಲಾದ ಜವಬ್ದಾರಿಯನ್ನು ಯಾವುದೇ ಲೋಪವಾಗದಂತೆ ನನ್ನ ಅಧೀನ ಅಧಿಕಾರಿಗಳು ಮತ್ತು ಸಿಬ್ಬಂದಿಗಳೊಂದಿಗೆ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸುತ್ತಿದ್ದವನು. ವೇದಿಕೆಯ ಮೇಲೆ ರಾಜ್ಯ ಸರ್ಕಾರದ ಅನೇಕ ಮಂತ್ರಿಗಳು, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಧುರೀಣರು ಜನರನ್ನುದ್ದೇಶಿಸಿ ಭಾಷಣ ಮಾಡಿದರು. ತದನಂತರ ಪ್ರತಿಭಟನಾ ಕಾರ್ಯಕ್ರಮವನ್ನು ಉದ್ದೇಶಿಸಿ ಸಿದ್ದರಾಮಯ್ಯರವರು ಭಾಷಣ ಮಾಡಲು ಪ್ರಾರಂಭಿಸಿದರು. ಭಾಷಣ ಮುಂದುವರೆಸಿದ ಸುಮಾರು 10 ನಿಮಿಷಗಳ ನಂತರ ಸಾರ್ವಜನಿಕರು/ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಕುಳಿತು ಕೊಂಡಿದ್ದ ಸಭಾ ಸ್ಥಳದಲ್ಲಿ ಬೇರೊಬ್ಬ ಎಸ್‌ಪಿ ಮಟ್ಟದ ಅಧಿಕಾರಿ ಉಸ್ತುವಾರಿಯಲ್ಲಿದ್ದು, ಆ ಸ್ಥಳದಲ್ಲಿ ಯಾರೋ ನಾಲ್ಕೈದು ಮಹಿಳೆಯರು ಕಪ್ಪು ಬಾವುಟ ತೋರಿಸಿ ಘೋಷಣೆ ಕೂಗಿದಾಗ, ಭಾಷಣ ಮಾಡುತ್ತಾ ಇದ್ದ ಮಾನ್ಯ ಮುಖ್ಯಮಂತ್ರಿಗಳು ಭಾಷಣ ನಿಲ್ಲಿಸಿ ನನ್ನ ಕಡೆ ಕೈ ಮಾಡಿ 'ಏಯ್ ಯಾವನೋ ಇಲ್ಲಿ ಎಸ್‌ಪಿ ಬಾರಯ್ಯ ಇಲ್ಲಿ' ಎಂದು ಏರುಧ್ವನಿಯಲ್ಲಿ ಅಬ್ಬರಿಸಿದಾಗ ಅಲ್ಲಿ ಸ್ಥಳೀಯ ಎಸ್‌ಪಿಯಾಗಲಿ ಅಥವಾ ಡಿಸಿಪಿಯಾಗಲಿ ಇರದೇ ಇದ್ದುದ್ದರಿಂದ, ಅವರ ಕರೆಗೆ ಓಗೊಟ್ಟು ವೇದಿಕೆ ಮೇಲೆ ಹೋದೆನು ಮತ್ತು ಮಾನ್ಯರಿಗೆ ಗೌರವಸೂಚಕವಾಗಿ ಅತೀ ವಿನಮ್ರತೆಯಿಂದ ವಂದಿಸಿ ನಿಂತುಕೊಂಡೆನು. ತಕ್ಷಣ ಏನೂ ಮಾತನಾಡದೆ ಏಕಾಏಕಿ ಕೈ ಎತ್ತಿ ನನಗೆ 'ಕಪಾಳ ಮೋಕ್ಷ' ಮಾಡಲು ಬಂದರು. ಕೂಡಲೇ ನಾನು ಒಂದು ಹೆಜ್ಜೆ ಹಿಂದೆ ಸರಿದು ಸಾರ್ವಜನಿಕವಾಗಿ ಆಗಬಹುದಾಗಿದ್ದ ಕಪಾಳಮೋಕ್ಷದಿಂದ ತಪ್ಪಿಸಿಕೊಂಡೆನು. ನಾ ಮಾಡದ ತಪ್ಪಿಗೆ ಅವಮಾನಿತನಾಗಿದ್ದೆ ಈ ಘಟನೆಯನ್ನು ನಿರಂತರವಾಗಿ ಟಿವಿ ದೃಶ್ಯ ಮಾಧ್ಯಮಗಳಲ್ಲಿ ಎರಡು ದಿನಗಳ ಕಾಲ ಬಿತ್ತರಿಸಿದ್ದನ್ನು ತಾವೂ ಕೂಡ ಗಮನಿಸಿರುತ್ತೀರಿ ಎಂದು ಭಾವಿಸಿದ್ದೇನೆ'' ಎಂದು ಭರಮನಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.ಆ ಕಪಾಳಮೋಕ್ಷದಿಂದ ತಪ್ಪಿಸಿಕೊಂಡೆ, ಆದರೆ ಅವಮಾನದಿಂದಲ್ಲ; ಭರಮನಿ.




ಸಾರ್ವಜನಿಕವಾಗಿ ಮಾನ್ಯ ಮುಖ್ಯಮಂತ್ರಿಗಳಿಂದ ಕಪಾಳ ಮೋಕ್ಷ ತಪ್ಪಿಸಿಕೊಂಡಿದ್ದೇನೋ ಸರಿ. ಆದರೆ ಸಾರ್ವಜನಿಕವಾಗಿ ಆದ ಅವಮಾನದಿಂದಲ್ಲ ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ. ಅದೇ ವೇದಿಕ ಮೇಲೆ ರಾಜ್ಯದ ಎಲ್ಲಾ ಕಡೆಯಿಂದ ಬಂದ ರಾಜಕೀಯ ಮುಖಂಡರು ಹಾಗೂ ಕಾರ್ಯಕ್ರಮಕ್ಕೆ ಆಗಮಿಸಿದ್ದ ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಇದ್ದರು. ಅಲ್ಲದೇ ರಾಜ್ಯಾದ್ಯಂತ ಸುದ್ದಿ ಬಿತ್ತರಿಸುವ ದೃಶ್ಯ ಮಾಧ್ಯಮ ಮತ್ತು ಪತ್ರಿಕಾ ವರದಿಗಾರರು ಇದ್ದರು. ಅದೂ ಅಲ್ಲದೇ ನನ್ನ ಇಲಾಖೆಯ ಮತ್ತು ಇತರ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿ ಜನರಿದ್ದರು. ಅವರೆಲ್ಲರ ಮುಂದೆ ಅವಮಾನಕ್ಕೊಳಗಾದರೂ ಇಲಾಖೆ ಮೇಲಿನ ಗೌರವದಿಂದಾಗಿ ಮತ್ತು ಮಾನ್ಯ ಮುಖ್ಯ ಮಂತ್ರಿಗಳ ಪದವಿಗೆ ಚ್ಯುತಿ ಬಾರದಿರಲಿ ಎಂಬ ಕಾರಣಕ್ಕಾಗಿ ಮರು ಮಾತಾಡದ ವೇದಿಕೆಯಿಂದ ಕೆಳಗಿಳಿದು ಬಂದಿದ್ದೆ ಎಂದು ಭರಮನಿ ಉಲ್ಲೇಖಿಸಿದ್ದಾರೆ.

ಸಮವಸ್ತ್ರದಲ್ಲಿದ್ದ ನನಗೆ ಸಾರ್ವಜನಿಕವಾಗಿ ಅವಮಾನಿಸಿ ನನ್ನ ಮತ್ತು ನನ್ನ ಇಲಾಖೆಯ ಅಧಿಕಾರಿಗಳ ಆತ್ಮಸ್ಥೈರ್ಯ ಕುಗ್ಗಿಸಿದ ಮಾನ್ಯ ಮುಖ್ಯ ಮಂತ್ರಿಗಳ ವರ್ತನೆಯನ್ನು ಇಡೀ ರಾಜ್ಯದಲ್ಲಿ ದೃಶ್ಯಮಾಧ್ಯಮಗಳ ಮೂಲಕ ಬಿತ್ತರಿಸಲಾಗಿತ್ತು. ಘಟನೆಯಿಂದ ಮನಸ್ಸಿಗೆ ಆಘಾತವಾಗಿ, ಯಾರಲ್ಲಿ ಏನನ್ನೂ ಪ್ರಸ್ತಾಪಿಸದೆ ಮನೆಗೆ ಹೋದೆನು. ಮನೆಯಲ್ಲಿ ಸ್ಮಶಾನ ಮೌನ. ನನ್ನನ್ನು ನೋಡಿದ ಮಡದಿ ಮತ್ತು ಮಕ್ಕಳ ದುಃಖ ಕಟ್ಟೆಯೊಡೆದು ಬೋರ್ಗರೆಯಿತು. ಇಡೀ ದಿನ ಮೌನವೇ ಮಾತಾಯಿತು. ನನಗೆ ಮತ್ತು ಮಡದಿಗೆ ಹಿತೈಷಿಗಳಿಂದ ಬಂದ ದೂರವಾಣಿ ಕರೆಗಳಿಗೆ ಉತ್ತರಿಸಲಾಗದಷ್ಟು ದುಃಖಿತರಾಗಿದ್ದೆವು. ಇದರಿಂದಾಗಿ ನಾನು ಮತ್ತು ನನ್ನ ಕುಟುಂಬ ಮನೋವ್ಯಾಕುಲತೆಗೆ ಒಳಗಾದೆವು. ಇಷ್ಟಾದರೂ ಮಾನ್ಯ ಮುಖ್ಯಮಂತ್ರಿಗಳಾಗಲಿ ಅಥವಾ ಅವರ ಪರವಾಗಿ ಸರ್ಕಾರ ಮಟ್ಟದ ಅಧಿಕಾರಿಗಳಾಗಲಿ ಅಥವಾ ನಮ್ಮ ಇಲಾಖೆಯ ನೆಚ್ಚಿನ ಹಿರಿಯ ಅಧಿಕಾರಿಗಳಾಗಲಿ ನನ್ನನ್ನು ಸಾಂತ್ವಾನಿಸುವ ಪ್ರಯತ್ನ ಮಾಡಲಿಲ್ಲ.

ಅಲ್ಲದೇ ನನ್ನ ಸಹೋದ್ಯೋಗಿಗಳು ಕೂಡ ನನಗಾದ ಅವಮಾನವನ್ನು ಪ್ರತಿಭಟಿಸಿ ನೈತಿಕ ಬೆಂಬಲ ವ್ಯಕ್ತಪಡಿಸಲೂ ಇಲ್ಲಾ. ಇದರಿಂದಾಗಿ ಮತ್ತಷ್ಟು ಮಾನಸಿಕ ವೇದನೆ ಹೆಚ್ಚಾಯಿತು ಎಂದು ಭರಮನಿ ಅಳಲು ತೋಡಿಕೊಂಡಿದ್ದಾರೆ.

ನನ್ನಷ್ಟಕ್ಕೆ ನಾನು ಧೈರ್ಯ ತುಂಬಿಕೊಂಡು ಇದರಿಂದ ಹೊರಬರಲು ಕರ್ತವ್ಯಕ್ಕೆ ಹಾಜರಾದೆನು. ಇಲ್ಲಿ ಸಮಸ್ಯೆಗಳನ್ನು ಹೇಳಿಕೊಂಡು ಬರುವ ನೊಂದ ಜನರೂ ಕೂಡ ಸಾರ್ ತಮ್ಮಂತೋರಿಗೆ ಹೀಗಾದರೆ ನಮ್ಮಂತ ಜನ ಸಾಮಾನ್ಯರ ಸ್ಥಿತಿ ಏನು ಎಂದು ಅಸಹಾಯಕತೆ ವ್ಯಕ್ತಪಡಿಸುತ್ತಿದ್ದರು. ಇದು ಇಷ್ಟಕ್ಕೆ ನಿಲ್ಲದೇ ಇಲಾಖೆಯ ಸಭೆಗಳಲ್ಲಿ, ಬೇರೆ ಇಲಾಖೆಯೊಂದಿಗಿನ ಸಭೆಗಳಲ್ಲಿಯೂ ಇದು ಮಾರ್ದನಿಸುತ್ತಿತ್ತು. ಪ್ರತಿನಿತ್ಯ ಸಮವಸ್ತ್ರ ಧರಿಸುವಾಗ ಯಾರದೋ ತಪ್ಪಿಗೆ ನನ್ನನ್ನು ದಂಡಿಸಿದರಲ್ಲಾ ಎಂದು ಆ ಘಟನೆ ನನ್ನನ್ನು ಸದಾ ಕಾಡುತ್ತಿದೆ. ಒಂದು ರಾಜ್ಯದ ಮುಖ್ಯಮಂತ್ರಿ ನನ್ನನ್ನು ಸಾರ್ವಜನಿಕವಾಗಿ ನಿಂದಿಸಿ, ಅವಮಾನಿಸಿ ಸಾಂತ್ವನಿಸದೆ ಇದ್ದುದು ನನ್ನನ್ನು ವಿಚಲಿತಗೊಳಿಸಿದೆ. ನನ್ನಷ್ಟಕ್ಕೆ ನಾನು ನ್ಯಾಯ ಪಡೆದುಕೊಳ್ಳಲು ಆಗದವನು ಪರರಿಗೆ ನ್ಯಾಯ ಕೊಡಿಸಲಾದೀತೇ ಎಂಬ ಕೊರಗು ನನ್ನಲ್ಲಿ ಕಾಡತೊಡಗಿದೆ ಎಂದು ಅವರು ಬರೆದುಕೊಂಡಿದ್ದಾರೆ.

ಕಳೆದ 31 ವರ್ಷಗಳಿಂದ ರಾಜ್ಯ ಪೊಲೀಸ್ ಇಲಾಖೆಯಲ್ಲಿ ವಿವಿಧ ಸ್ತರಗಳಲ್ಲಿ ಶಿಸ್ತಿನ ಸಿಪಾಯಿಯಾಗಿ, ನೊಂದು ಬರುವ ಸಾರ್ವಜನಿಕರ ಅಹವಾಲುಗಳಿಗೆ ಅಂತಃಕರಣದಿಂದ ಸ್ಪಂದಿಸಿ ಅವರ ಗೌರವಕ್ಕೆ ಪಾತ್ರನಾಗಿ ಇಲಾಖೆಯಲ್ಲಿ ಹೆಮ್ಮೆಯಿಂದ ಕರ್ತವ್ಯ ನಿರ್ವಹಿಸಿರುತ್ತೇನೆ. ಇಲಾಖೆ ಹಾಗೂ ಸಮಾಜದಲ್ಲಿ ಗೌರವ ಮಾನ ಸನ್ಮಾನ ನೀಡಿದ ಸಮವಸ್ತ್ರದೊಂದಿಗಿನ ಸಂಬಂಧ ನನ್ನ ಹೆತ್ತ ತಾಯಿಯೊಂದಿಗಿರುವಷ್ಟೇ ಭಾವನಾತ್ಮಕ ಸಂಬಂಧ ಹೊಂದಿದ್ದೇನೆ. ಸರ್ಕಾರವನ್ನು ಪ್ರತಿನಿಧಿಸುವ ಸರ್ಕಾರಿ ನೌಕರರಿಗೆ ಪ್ರತಿ ಹಂತದಲ್ಲೂ ಸವಾಲುಗಳ ಸಾಲೇ ಇರುತ್ತವೆ. ತನ್ನೆಲ್ಲಾ ವೈಯಕ್ತಿಕ ಹಿತಾಸಕ್ತಿಗಳನ್ನು ಬದಿಗಿಟ್ಟು, ಅವಮಾನಗಳನ್ನು ಸಹಿಸುತ್ತಾ, ಸರ್ಕಾರದ ಹಿತಾಸಕ್ತಿಗೆ ಟೊಂಕಕಟ್ಟಿ ನಿಂತು ಸೇವೆ ಸಲ್ಲಿಸುತ್ತಿರುವ ಎಲ್ಲಾ ಸರ್ಕಾರಿ ನೌಕರರಿಗೆ ಆತ್ಮಸ್ಥೈರ್ಯವನ್ನು ತುಂಬಬೇಕಾದ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ವರ್ತನೆಯಿಂದ ನನ್ನ ಮತ್ತು ರಾಜ್ಯದ ಇತರ ಸರ್ಕಾರಿ ನೌಕರರ ಆತ್ಮಸ್ಥೈರ್ಯ ಕುಂದಿಸಿರುತ್ತಾರೆ. ಈ ಘಟನೆಯಿಂದಾಗಿ ನಾನು ಮತ್ತು ನನ್ನ ಪರಿವಾರ ಇನ್ನಿಲ್ಲದಂತೆ ಮಾನಸಿಕವಾಗಿ ಕುಗ್ಗಿ, ಮನೋವೇದನೆಯಿಂದ ಮನೋವ್ಯಾಕುಲತೆಗೆ ಒಳಗಾಗಿದ್ದೇವೆ. ಇದು ನನ್ನೊಬ್ಬನ ಅಳಲಲ್ಲ, ರಾಜ್ಯದ ಸಮವಸ್ತ್ರಧರಿಸುವ ಕೆಳಸ್ತರದ ಅಧಿಕಾರಿ ಸಿಬ್ಬಂದಿಗಳದ್ದಷ್ಟೇ ಅಲ್ಲ, ಸಮಸ್ತ ಸರ್ಕಾರಿ ನೌಕರರ ಅಳಲು ಎಂದು ಅವರು ಹೇಳಿದ್ದಾರೆ.

ಸಾರ್ವಜನಿಕ ವೇದಿಕೆಯ ಮೇಲೆ ಮಾನ್ಯ ಮುಖ್ಯ ಮಂತ್ರಿಗಳ ವರ್ತನೆಯಿಂದ ನಾನು ಮಾಡದೇ ಇರುವ ತಪ್ಪಿಗೆ ಸಾರ್ವಜನಿಕವಾಗಿ ನಿಂದನೆಗೆ ಒಳಗಾಗಿ, ಅವಮಾನಗೊಂಡ ನನಗೆ ಅನ್ಯಮಾರ್ಗವಿಲ್ಲದೇ ಸ್ವಯಂ ನಿವೃತ್ತಿ ಸಲ್ಲಿಸುತ್ತಿದ್ದು ಮಾನ್ಯರು ಇದನ್ನು ಅಂಗೀಕರಿಸಬೇಕೆಂದು ವಿನಂತಿ ಎಂದು ನಾರಾಯಣ ಭರಮನಿ ಸರ್ ಪತ್ರದಲ್ಲಿ ಮನವಿ ಮಾಡಿದ್ದಾರೆ!

ಇಂತಿಪ್ಪ ಪತ್ರವು ಸರ್ಕಾರಕ್ಕೆ ತಲುಪಿ, ಅದು ಸಿಎಂ ಸಿದ್ದು ಕಿವಿಗೆ ಬಿದ್ದು, ಅವರ ಮನಸ್ಸು ಕಸಿವಿಸಿ ಅನುಭವಿಸಿರಬೇಕು. ಇಬ್ಬರೂ ಹಿರೀಕರು. ತಕ್ಷಣ ಕರೆ ಮಾಡಿ ಭರಮನಿಯವರಿಗೆ ಸಾಂತ್ವಾನ ಹೇಳಿದ್ದಾರೆ!

## ನೋವಾಗಿದ್ದರೆ ಕ್ಷಮಿಸಿ!

ದಕ್ಷ ಪೊಲೀಸ್ ಆಫೀಸರ್ ನಾರಾಯಣ ಭರಮನಿ ಅವರ ಪತ್ರ, ಸಿಎಂ ಸಿದ್ದರಾಮಯ್ಯನವರ ಗಮನಕ್ಕೆ ಬಂದಿದ್ದು, ಅವರು ಭರಮನಿ ಅವರಿಗೆ ಫೋನ್ ಕರೆ ಮಾಡಿ ಮಾತನಾಡಿಸಿದ್ದಾರೆ.

ನಾನೇನು ಬೇಕು ಅಂತ ಹಾಗೆ ಮಾಡಲಿಲ್ಲ ಕಣ್ರೀ. ಬಿಜೆಪಿಯವರು ಸಮಾರಂಭಕ್ಕೆ ಅಡ್ಡಿಪಡಿಸ್ತಾ ಇದ್ರು. ಆ ಕೋಪಕ್ಕೆ ಹಾಗೆ ನಡೆದುಕೊಂಡೆ. ಅದು ಉದ್ದೇಶಪೂರ್ವಕವಾಗಿ ಮಾಡಿದ ತಪ್ಪಲ್ಲ ಕಣ್ರೀ. ನಿಮ್ಮ ಮನಸ್ಸನ್ನು ನೋಯಿಸಬೇಕು ಅಂತ ಮಾಡಿದ್ದಲ್ಲ, ನೋವಾಗಿದ್ರೆ ಕ್ಷಮಿಸಿ! ನಿಮ್ಮ ರಾಜಿನಾಮೆ ಪತ್ರ ಏನಿದೆಯೋ ಅದನ್ನ ವಾಪಸ್ ತಗೊಂಡು ಡ್ಯೂಟಿಗೆ ಹಾಜರಾಗಿ... ಆಯ್ತಾ... ಹೀಗೆ ಮಾತನಾಡಿ ಭರಮನಿ ಅವರಿಗೆ ಸಾಂತ್ವಾನ ಹೇಳಿ ಸಮಾಧಾನಗೊಳಿಸಿದ್ದಾರಂತೆ ಸನ್ಮಾನ್ಯ ಸಿದ್ದರಾಮಯ್ಯನವರು!

ಹೀಗಾಗಿ, ಎಎಸ್ಪಿ ನಾರಾಯಣ ಭರಮನಿ ಅವರು ಕರ್ತವ್ಯಕ್ಕೆ ಮರಳಿದ್ದಾರೆ! ಹುಬ್ಬಳ್ಳಿ ಧಾರವಾಡ ಎಸ್ಪಿ ಡಾ.ಗೋಪಾಲ್ ಬ್ಯಾಕೋಡ ಅವರಿಗೆ ವಿಚಾರ ಮುಟ್ಟಿಸಿ ಸಮಾಧಾನದಿಂದಲೇ ಡ್ಯೂಟಿಗೆ ಹಾಜರ್ ಆಗಿದ್ದಾರೆ, ಭರಮನಿ!! ☯

# ಲಿವಿಂಗ್ ಟುಗೆದರ್ ಸಖಿ ಆಶಾಳನ್ನು ಕೊಂದು ಮೂಟೆ ಕಟ್ಟಿದ ನಯವಂಚಕ ಸಂಶುದ್ದೀನ್!



ಆರೋಪಿ ಮೊಹಮ್ಮದ್ ಸಂಶುದ್ದೀನ್

**ಬೆಂಗಳೂರಿನ ಚನ್ನಮ್ಮನಕೆರೆ ಅಚ್ಚುಕಟ್ಟು ಪೊಲೀಸ್‌ಠಾಣಾ ವ್ಯಾಪ್ತಿಯ ಸ್ಕೇಟಿಂಗ್ ಗ್ರೌಂಡ್ ಬಳಿ ನಿಲ್ಲಿಸಿದ್ದ ಕಸದ ಲಾರಿಯಲ್ಲಿ ಹಾಕಿದ್ದ ಮೂಟೆಯಲ್ಲಿ ಮಹಿಳೆಯೊಬ್ಬಳ ಶವ ಪತ್ತೆಯಾಗಿತ್ತು! ಇದೀಗ ಈ ಪ್ರಕರಣಕ್ಕೆ ರೋಚಕ ತಿರುವು ಸಿಕ್ಕಿದ್ದು, ಲಿವಿಂಗ್ ಟುಗೆದರ್ ನಲ್ಲಿದ್ದ ವ್ಯಕ್ತಿಯೊಬ್ಬ ಇಟ್ಟುಕೊಂಡವಳನ್ನು ಹತ್ಯೆ ಮಾಡಿರುವುದು ಪೊಲೀಸರ ತನಿಖೆಯಿಂದ ಬಯಲಾಗಿದೆ. ಕೊಲೆಯಾದ ಮಹಿಳೆಯನ್ನು ಆಶಾ ಎಂದು ಗುರುತಿಸಲಾಗಿದೆ. ಆಕೆಯ ಜೊತೆಗೆ ಲಿವಿಂಗ್ ಟುಗೆದರ್ ನಲ್ಲಿದ್ದ ಮೊಹಮ್ಮದ್ ಸಂಶುದ್ದೀನ್‌ನನ್ನು ಪೊಲೀಸರು ಬಂಧಿಸಿದ್ದಾರೆ....**



ಕೊಲೆಯಾದ ಆಶಾ

ಶನಿವಾರ ರಾತ್ರಿ ಬೆಂಗಳೂರಿನ ಚನ್ನಮ್ಮನಕೆರೆ ಅಚ್ಚುಕಟ್ಟು ಪೊಲೀಸ್‌ಠಾಣಾ ವ್ಯಾಪ್ತಿಯ ಸ್ಕೇಟಿಂಗ್ ಗ್ರೌಂಡ್ ಬಳಿ ಬಿಬಿಎಂಪಿ ಕಸದ ಲಾರಿ ನಿಂತಿತ್ತು. ಬೆಳಿಗ್ಗೆ ಅದರ ಚಾಲಕ ಮತ್ತು ಸಿಬ್ಬಂದಿ ಡ್ಯೂಟಿಗೆ ಬಂದಾಗ, ಮೂಟೆಯೊಂದನ್ನು ನೋಡಿ ಹೌಹಾರಿ ಚೀಲದ ಮೇಲೆ ಕಾಣಿಸಿದ್ದ ಜುಟ್ಟನ್ನು ಬಿಡಿಸಿದಾಗ, ಅದು ಮಹಿಳೆಯೊಬ್ಬಳ ಶವ ಎಂದು ಗೊತ್ತಾಗಿತ್ತು!

ಈ ಸಿಬ್ಬಂದಿಗೂ ಮುನ್ನ ಬೆಳಿಗ್ಗೆ ಕಸ ಹಾಕಲು ಬಂದಿದ್ದ ಸ್ಥಳೀಯರಿಗೆ ಕಸದ ಲಾರಿಯಲ್ಲಿದ್ದ ಚೀಲ ಹಾಗೂ ಯುವತಿಯ ತಲೆ ಕೂದಲು ಕಾಣಿಸಿ ಭಯಭೀತರಾಗಿ ಏರಿಯಾದಲ್ಲೆಲ್ಲ ಸುದ್ದಿ ಪಸರ್ ಆಗಿತ್ತು. ಆಮೇಲೆ ಬಿಬಿಎಂಪಿ ಸಿಬ್ಬಂದಿ ಬಂದು ಹೌಹಾರಿ ತಕ್ಷಣವೇ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದರು.

**ಸಿಸಿ ಫುಟೇಜ್ ಶೋಧ**

ಸದರಿ ಸ್ಥಳ ಚನ್ನಮ್ಮನಕೆರೆ ಅಚ್ಚುಕಟ್ಟು ಪೊಲೀಸ್‌ಠಾಣಾ ವ್ಯಾಪ್ತಿಗೆ ಬರುತ್ತಿದ್ದು, ಅಲ್ಲಿನ ಘಟನಾ ಸ್ಥಳಕ್ಕೆ ಆಗಮಿಸಿ ಶವವಿದ್ದ ಮೂಟೆಯನ್ನು ಪರಿಶೀಲಿಸಿ, ಪ್ರಕರಣ ದಾಖಲಿಸಿಕೊಂಡು ಆರೋಪಿಗಾಗಿ ಶೋಧ ನಡೆಸಿದ್ದರು. ಅಲ್ಲಿದ್ದ ಸಿಸಿಟಿವಿ ದೃಶ್ಯಾವಳಿಗಳನ್ನು ಗಮನಿಸಿ ಕಾರ್ಯಾಚರಣೆ ನಡೆಸಿದ ಪೊಲೀಸರ ಕೈಗೆ ಕಡೆಗೂ ಹಂತಕ ಸಿಕ್ಕಿಬಿದ್ದು,ಈ ನಿಗೂಢ ಕೊಲೆ ರಹಸ್ಯ ಬಯಲಾಗಿದೆ!



ಚೀಲದಲ್ಲಿದ್ದ ಆಶಾಳ ಶವ


ಮಹಿಳೆಯನ್ನು ಕೊಂದು ಮೂಟೆ ಕಟ್ಟಿ ಲಾರಿಗೆ ಎಸಿದಿದ್ದ ಆರೋಪಿ ಮೊಹಮ್ಮದ್ ಸಂಶುದ್ದೀನ್! 33ರ ಪ್ರಾಯದ ಈತ ಅಸ್ಸಾಂ ಮೂಲದವನು. ಸುಮಾರು ಒಂದೂವರೆ ವರ್ಷಗಳಿಂದ ಆಶಾ (40) ಎಂಬ ಆಂಟಿ ಜೊತೆ ಅಕ್ರಮ ಸಂಬಂಧ ಹೊಂದಿದ್ದ! ಇಬ್ಬರೂ ಹುಳಿಮಾವಿನ ಬಾಡಿಗೆ ಮನೆಯೊಂದರಲ್ಲಿ ಒಟ್ಟಿಗೆ ವಾಸಿಸುತ್ತಿದ್ದರು. ಇವರಿಬ್ಬರಿಗೂ ಬೇರೆ ಬೇರೆ ವ್ಯಕ್ತಿಗಳೊಡನೆ ಮದುವೆಯಾಗಿ ತಲಾ ಇಬ್ಬಿಬ್ಬರು ಮಕ್ಕಳಿದ್ದಾರೆ!

**ಆಶಾಗೆ ಗಂಡ ಇಲ್ಲ!**

ಸಂಶುದ್ದಿನ್‌ಗೆ ಕಟ್ಟು ಮಸ್ತಾದ ಪತ್ನಿ ಇದ್ದಾಳೆ. ಅವಳು ಮಕ್ಕಳೊಡನೆ ಅಸ್ಸಾಂನಲ್ಲೇ ಇದ್ದಾಳೆ. ಇಲ್ಲಿ ಒಂಟಿಯಾಗಿದ್ದ ಸಂಶುದ್ದೀನ್ ಜಂಟಿಯಾಗಲು ಒಂದು ಹೆಣ್ಣು ಬೇಕಿತ್ತು. ನಲವತ್ತರ ಪ್ರಾಯದ ಆಶಾಳಿಗೆ ಗಂಡ ಇರಲಿಲ್ಲ! ಅದೇನು ಬಿಟ್ಟು ಹೋಗಿದ್ದಾನೋ ಅಥವಾ ಸತ್ತೇ ಹೋಗಿದ್ದಾನೋ ಗೊತ್ತಿಲ್ಲ, ಒಟ್ಟಾರೆ, ಅವಳಿಗೆ ಗಂಡ ಇರಲಿಲ್ಲ, ಹೇಗೋ ಮಾಡಿ ಅವಳನ್ನು ಬುಟ್ಟಿಗೆ ಹಾಕಿಕೊಂಡ ಸಂಶುದ್ದೀನ್, ಮಜಾ ಮಾಡಿಕೊಂಡು ಆರಾಮಾಗಿದ್ದ. ಹುಳಿಮಾವು ಪ್ರದೇಶದಲ್ಲಿ ಬಾಡಿಗೆ ಮನೆ ಮಾಡಿಕೊಂಡು, ಮನೆ ಓನರ್ ಜೊತೆ ಗಂಡ -ಹೆಂಡತಿ ಅಂತಲೇ ಹೇಳಿಕೊಂಡು ವಾಸಿಸುತ್ತಿದ್ದರು.



ಡಿಸಿಪಿ ಲೋಕೇಶ್ ಬಿ. ಜಗಲಾಸರ



ಇನ್ಸ್‌ಪೆಕ್ಟರ್ ಗಿರೀಶ್ ನಾಯ್ಕ್

**ಇಬ್ಬರ ನಡುವೆ ಕಲಹ**

ಆಶಾ ಬೆಂಗಳೂರು ನಗರದ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಳು. ಇವನೂ ದುಡಿಯುತ್ತಿದ್ದ. ಮೊದಲಿಗೆ ಎಲ್ಲವೂ ಚನ್ನಾಗಿಯೇ ಇತ್ತು. ಇಬ್ಬರೂ ಸಂತೋಷವಾಗಿದ್ದು ಮಜಾ ಮಾಡಿಕೊಂಡಿದ್ದರು. ಕಾಲಕ್ರಮೇಣ ಪ್ರೇಮ ಹಳಸಲಾಗಿ... ಈಗೀಗ ಜಗಳ ಸ್ಟಾರ್ಟ್ ಆಗಿತ್ತು. ಸಂಶುದ್ದಿನ್ ರಾತ್ರಿ ಎಣ್ಣೆ ಹಾಕೊಂಡು ಬಂದು ಆಶಾಗೆ ಹೊಡೆಯುತ್ತಿದ್ದ. ಅಸ್ಸಾಂ ನಲ್ಲಿದ್ದ ಹೆಂಡತಿ ಮಕ್ಕಳಿಗೆ ದುಡ್ಡು ಕಳಿಸೋ ವಿಚಾರದಲ್ಲಿ ಮನಸ್ತಾಪ ಉಂಟಾರಬಹುದು. ಹೀಗೇ, ಇಬ್ಬರ ನಡುವೆ ಉಂಟಾದ ಜಗಳ ಆಶಾಳ ಕೊಲೆಯಲ್ಲಿ ಅಂತ್ಯ ಕಂಡಿದೆ!

ಅಂದು ರಾತ್ರಿ ಅವಳನ್ನ ಕುತ್ತಿಗೆ ಹಿಸುಕಿ ಕೊಲೆ ಮಾಡಿ ಶವವನ್ನು ಮೂಟೆ ಕಟ್ಟಿ ಬೈಕ್ ಮೇಲಿಟ್ಟುಕೊಂಡು ಸ್ಕೇಟಿಂಗ್ ಗ್ರೌಂಡ್ ಕಡೆ ತೆರಳಿ, ಅಲ್ಲಿ ನಿಂತಿದ್ದ ಬಿಬಿಎಂಪಿ ಕಸದ ಲಾರಿ ಒಳಗೆ ಎಸೆದಿರುವುದಾಗಿ ಸಂಶುದ್ದೀನ್ ಒಪ್ಪಿಕೊಂಡಿದ್ದಾನೆಂದು ಡಿಸಿಪಿ ಲೋಕೇಶ್ ಬಿ. ಜಗಲಾಸರ ತಿಳಿಸಿದ್ದಾರೆ.

ಅಂದಹಾಗೆ, ಈ ನಿಗೂಢ ಕೊಲೆ ಪ್ರಕರಣವನ್ನು ಯಶಸ್ವಿಯಾಗಿ ಭೇದಿಸಿ ತಲೆಮರೆಸಿಕೊಂಡಿದ್ದ ಹಂತಕನನ್ನು ಪತ್ತೆಹಚ್ಚಿ ಬಂಧಿಸಿದವರು ದಕ್ಷ ಪೊಲೀಸ್ ಇನ್ಸ್‌ಪೆಕ್ಟರ್ ಗಿರೀಶ್ ನಾಯ್ಕ್. ಇವರ ಬಗ್ಗೆ ನಿಮಗೆ ಈಗಾಗಲೇ ಗೊತ್ತಿರಬಹುದು. ನಟ ದರ್ಶನ್ ವರ್ಷದ ಹಿಂದೆ ಚಿತ್ರದುರ್ಗದ ಅಡ್ಡಕಸುಬಿ ರೇಣುಕಾಸ್ವಾಮಿಯ ಕೊಲೆ ಕೇಸ್‌ನಲ್ಲಿ ತಗುಲಿಕೊಂಡಿದ್ದಾಗ, ಈ ಪ್ರಕರಣ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದು, ಅಲ್ಲಿನ ಪೊಲೀಸ್ ಅಧಿಕಾರಿಗಳ ನಂಬಿಕೆ ಇಲ್ಲದೆ ಕಮೀಷನರ್ ದಯಾನಂದರು ಬೇರೊಂದು ತನಿಖಾ ತಂಡದವರನ್ನು ನೇಮಿಸಿದ್ದಾಗ ಎಸಿಪಿ ಚಂದನ್ ಜೊತೆ ಇದೇ ಗಿರೀಶ್ ನಾಯ್ಕ್ ಯಶಸ್ವಿಯಾಗಿ ತನಿಖೆ ನಡೆಸಿದ್ದರು! ಇವತ್ತು ಕೂಡಾ ಅತ್ಯಂತ ಯಶಸ್ವಿಯಾಗಿ ಈ ನಿಗೂಢ ಕೊಲೆ ಪ್ರಕರಣವನ್ನು ಭೇದಿಸಿ ಆರೋಪಿಯನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ. ☯

## ಮೊದಲು ನೋಡಿದ್ದು ಮುಸ್ತಫಾ...

ಎಲೆಕ್ಟ್ರಾನಿಕ್ ಸಿಟಿಯ ಬ್ಯೂಲರ್ ಇಂಡಿಯಾ ಸಾಫ್ಟ್‌ವೇರ್ ಕಂಪನಿಯಲ್ಲಿ ಐ.ಟಿ ಸಪೋರ್ಟರ್ ಆಗಿ ಕೆಲಸ ಮಾಡಿಕೊಂಡಿರುವ ಮುಸ್ತಫಾ, ಎಂಬ ಟೆಕ್ಕಿ, ತ್ಯಾಗರಾಜ ನಗರದ ಮೂರನೇ ಬ್ಲಾಕ್‌ನಲ್ಲಿ ಬೈರಪ್ಪ ನಗರದಲ್ಲಿ ವಾಸಿಸುತ್ತಾರೆ. ಅವರು ದಿನಾಂಕ 29-06-2015 ತಡ ರಾತ್ರಿ ಸುಮಾರು 1.45 ಗಂಟೆಯಲ್ಲಿ ಕಸ ಇಡಲೆಂದು ಲಾರಿ ಬಳಿಗೆ ತೆರಳಿದ್ದು, ಆತನೇ ಮೊದಲಿಗೆ ಚೀಲದಲ್ಲಿದ್ದ ಹೆಣವನ್ನು ನೋಡಿದ್ದು! ಅವರ ಪತ್ನಿ ಕೋರಮಂಗಲದಲ್ಲಿ ಲ್ಯಾಬ್ ಟೆಕ್ನಿಸಿಯನ್. ಈ ದಂಪತಿ ಬೆಳಿಗ್ಗೆ 6ಗಂಟೆಗೆ ಡ್ಯೂಟಿಗೆ ಹೊರಟರೆ ಮತ್ತೆ ರಾತ್ರಿ ಹಿಂತಿರುಗುತ್ತಾರೆ. ಬಿಬಿಎಂಪಿ ಕಸದ ವಾಹನ ಮನೆ ಬಳಿ ಬರೋತನಕ ಅವರು ಮನೆಯಲ್ಲಿರೋದಿಲ್ಲ. ಹೀಗಾಗಿ,ಮನೆಯ ಕಸವನ್ನು ಎರಡು ದಿವಸಕ್ಕೊಮ್ಮೆ ಸದರಿ ಜಾಗದಲ್ಲಿ ಲಾರಿಗೆ ಹಾಕುತ್ತಾರೆ. ಇದೇ ರೀತಿ ಅಂದು ಮುಸ್ತಫಾ ಅವರು ಕಸ ಸುರಿಯಲು ಬಿಬಿಎಂಪಿ ಲಾರಿ ಬಳಿಗೆ ತೆರಳಿದ್ದು, ಬಿಳಿ ಬಣ್ಣದ ಚೀಲವೊಂದರಲ್ಲಿ ರಕ್ತದ ಕರೆ ಕಾಣಿಸಿ, ಮೊಬೈಲ್ ಟಾರ್ಚ್ ಬೆಳಕು ಬಿಟ್ಟು ಸೂಕ್ಷ್ಮವಾಗಿ ಗಮನಿಸಿದಾಗ, ಹೆಂಗಸಿನ ತಲೆ ಜುಟ್ಟು ಕಾಣಿಸಿತ್ತು! ಅವರು ಕೂಡಲೇ ಪೊಲೀಸ್‌ಸ್ಟೇಷನ್‌ಗೆ ತೆರಳಿ ಈ ಮಾಹಿತಿಯನ್ನು ತಿಳಿಸಿದ್ದು, ಪೊಲೀಸರು ಮುಸ್ತಫಾ ಕೈಯಿಂದಲೇ ದೂರು ಬರೆಸಿಕೊಂಡು' (ಕ್ರೈಂ.ನಂ.0151/25) ತನಿಖೆ ಆರಂಭಿಸಿದ್ದರು. ಒಂದು ವೇಳೆ ಸಾಫ್ಟ್‌ವೇರ್ ಇಂಜಿನಿಯರ್ ಮುಸ್ತಫಾ ಅವರು ತಮಗ್ಯಾಕೆ? ಅಂದುಕೊಂಡು ತಮ್ಮ ಪಾಡಿಗೆ ತಾವು ಕಸ ಎಸೆದು ಹೋಗಿದ್ದರೆ, ಈ ಕೇಸ್ ಏನಾಗುತ್ತಿತ್ತೋ ಏನೋ! ☯



ಇದೇ ಲಾರಿಯಲ್ಲಿ ಹೆಣದ ಮೂಟೆ ಸಿಕ್ಕಿದ್ದು




# ಫೇಸ್‌ಬುಕ್‌ನಲ್ಲಿ ಹೆಣ್ಮಕ್ಕಳಿಗೆ ಮೇಸೇಜ್ ಮಾಡ್ತೀರಾ? ಹುಷಾರ್!

**ಸಾಮಾಜಿಕ ಜಾಲತಾಣಗಳ ಜಮಾನದಲ್ಲಿ ಸೈಬರ್ ಕ್ರೈಂ ಹೆಚ್ಚಾಗುತ್ತಿದ್ದು, ಪುಂಡ ಪೋಕರಿಗಳಿಗೆ ಇದು ಟೈಂಪಾಸ್ ಮಾಡುವ ಮತ್ತು ಹೆಣ್ಣುಮಕ್ಕಳಿಗೆ ಅಶ್ಲೀಲ ಮೆಸೇಜ್ ಕಳಿಸಿ ವಿಕೃತ ಖುಷಿ ಪಡುವ ಮತ್ತು ಹಣವಂತರನ್ನು ಬಲೆಗೆ ಕೆಡವಿಕೊಂಡು ಕಾಸು ಕೀಳುವ, ಒಳ್ಳೆಯದಕ್ಕಿಂತ ಹೆಚ್ಚಾಗಿ ಕೆಟ್ಟವಿಚಾರಗಳಿಗೆ ದುರ್ಬಳಕೆ ಮಾಡಿಕೊಳ್ಳುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಮೋಸ ಮಾಡುವವರು ಹಾಗೂ ಮೋಸ ಹೋಗುವವರು ಹೀಗೆ ತರಾವರಿ ಜನರಿದ್ದು, ಕೆಲವರು ಹೆಣ್ಮಕ್ಕಳಿಗೆ ಮೆಸೇಜ್ ಮಾಡಿಯೋ, ಇನ್ನೇನೋ ಕಳಿಸಿ ತಗಲಾಕಿಕೊಳ್ಳುತ್ತಿರುವುದು, ಸಂಸಾರದಲ್ಲಿ ಜಟಾಪಟಿಗಳು ನಡೆಯುತ್ತಿರುವುದು ಗುಟ್ಟಾಗಿಯೇನೂ ಉಳಿದಿಲ್ಲ.**


ಆರೋಪಿ ಸಂಗೀತಾ

ಸಾಮಾಜಿಕ ಜಾಲತಾಣಗಳನ್ನು ಒಳ್ಳೆಯ ಉದ್ದೇಶದಿಂದ ಮಾಡಿದ್ದರೂ ಅದನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಇದರಿಂದ ಸಂಸಾರಗಳು ಒಡೆದು ಹೋಗಿವೆ, ಕೊಲೆಗಳಾಗಿವೆ ಹಲವರು ಜೈಲ್ ಸೇರಿದ್ದರೆ, ಮತ್ತೊಂದಷ್ಟು ಜನರು ಮಾನಮರ್ಯಾದೆ ಕಳೆದುಕೊಂಡಿದ್ದಾರೆ. ಅದರಾಚೆಗೆ ಲಕ್ಷಾಂತರ ಹಣವನ್ನು




ಕಳೆದುಕೊಂಡವರು ಇಲ್ಲದಿಲ್ಲ. ಇಷ್ಟೇ ಅಲ್ಲದೆ ಹನಿಟ್ರ್ಯಾಪ್‌ಗೆ ಒಳಗಾಗಿ ಪ್ರಾಣ ಕಳೆದುಕೊಂಡವರು, ಮಾನ ಮರ್ಯಾದೆ ಹರಾಜು ಹಾಕಿಕೊಂಡವರು ಒಬ್ಬರೇ ಇಬ್ಬರೇ ಬೇಕಾದಷ್ಟು ಮಂದಿಯಿದ್ದಾರೆ. ಇದೆಲ್ಲದರ ನಡುವೆ ಸಾಮಾಜಿಕ ಜಾಲವನ್ನು ಸದುದ್ದೇಶಕ್ಕೆ ಬಳಸಿಕೊಂಡು ಬದುಕು ಕಟ್ಟಿಕೊಂಡವರ ಪಟ್ಟಿಯೂ ದೊಡ್ಡದಾಗಿದೆ.

ಇಲ್ಲಿ ನೀವು ಸಾಮಾಜಿಕ ಜಾಲವನ್ನು ಯಾವ ಉದ್ದೇಶದಿಂದ ಬಳಸುತ್ತಿದ್ದೀರಿ ಎನ್ನುವುದು ಮುಖ್ಯವಾಗಿದ್ದು, ಕೆಟ್ಟದಕ್ಕೆ ಬಳಸಿದರೆ ಕೆಟ್ಟದ್ದೇ ಆಗುತ್ತದೆ ಎನ್ನುವುದು ಅಷ್ಟೇ ಸತ್ಯ. ಇವತ್ತು ಸಾಮಾಜಿಕ ಜಾಲತಾಣಗಳಲ್ಲಿ ಏನನ್ನು ಹುಡುಕುತ್ತೀರೋ ಅದೇ ಸಿಗುತ್ತದೆ. ಒಳ್ಳೆಯದನ್ನು ಹುಡುಕುತ್ತಾ ಹೋದರೆ ಒಳ್ಳೆಯದೇ ನಿಮ್ಮ ಮುಂದೆ ತೆರೆದುಕೊಳ್ಳುತ್ತದೆ. ಕೆಟ್ಟದನ್ನು ಹುಡುಕುತ್ತಾ ಹೋದರೆ ಅದೇ ಕಾಣಿಸುತ್ತದೆ. ಹೀಗಾಗಿ ರಾತ್ರಿ ಹಗಲು ಎನ್ನದೆ ಸಾಮಾಜಿಕ ಜಾಲತಾಣಗಳಲ್ಲಿ ಸಮಯ ಕಳೆಯುವವರು ಕೆಲವೊಮ್ಮೆ ತಗಲಾಕಿಕೊಳ್ಳುವುದು ನಡೆಯುತ್ತಿರುತ್ತದೆ.


ಎಸ್ಪಿ ಕೆ. ರಾಮರಾಜನ್

ಸಾಮಾಜಿಕ ತಾಲತಾಣಗಳಲ್ಲಿ ಎಲ್ಲ ರೀತಿಯ ಮನಸ್ಥಿತಿಯವರು ಸಿಗುತ್ತಾರೆ. ಟೈಂಪಾಸ್‌ಗಾಗಿ ಇಲ್ಲಿಗೆ ಬರುವವರು ಏನೇನೋ ಪೋಸ್ಟ್‌ಗಳನ್ನು ಹಾಕಿ ವಿಕೃತ ಸುಖಪಡುತ್ತಿರುತ್ತಾರೆ. ಅಪ್ಪಿತಪ್ಪಿ ಇಂತಹವರನ್ನು ನೀವೇನಾದರೂ ಫ್ರೆಂಡ್ಸ್ ಮಾಡಿಕೊಂಡರೆ ಕಥೆ ಮುಗಿದಂತೆಯೇ. ಇಂತಹವರಿಂದಲೇ ಬಹಳಷ್ಟು ಮನೆಗಳು, ಮನಸ್ಸುಗಳು ಹಾಳಾಗಿವೆ. ಇಲ್ಲಿ ಸುಧಾರಣೆ ತರುವುದು ಕಷ್ಟವೇ. ಇದನ್ನು ಬಳಸುವವರು ಎಚ್ಚರಿಕೆ ವಹಿಸುವುದು ಒಳ್ಳೆಯದು. ಇನ್ನು ಕೆಲವರು ಹೆಣ್ಣು ಮಕ್ಕಳ ಹೆಸರಲ್ಲಿ ಅಕೌಂಟ್ ಓಪನ್ ಮಾಡಿ ಥೇಟ್ ಹೆಣ್ಮಕ್ಕಂತೆ ಚಾಟ್ ಮಾಡಿ, ಗಂಡಸರನ್ನು ಪರಿಚಯಿಸಿಕೊಂಡು ಅವರ ಬ್ಯಾಕ್ ರೌಂಡ್ ತಿಳಿದುಕೊಂಡು ಹಣವಿದೆ ಎನ್ನುವುದು ಗೊತ್ತಾದರೆ ಖೆಡ್ಡಾಕ್ಕೆ ಕೆಡವಲು ಹಲವು ಮಸಲತ್ತು ಮಾಡುತ್ತಾರೆ.

ಇಂತಹ ಖತರ್‌ನಾಕ್‌ಗಳು ದೊಡ್ಡಮಟ್ಟದಲ್ಲಿಯೇ ಇದ್ದಾರೆ. ಇನ್ನು ಕೆಲವು ಪ್ರಕರಣಗಳಲ್ಲಿ ಕೆಲವು ಮಹಿಳೆಯರೇ ಇದರಲ್ಲಿ ಭಾಗಿಯಾಗಿ ದುಷ್ಟಕೂಟಗಳನ್ನು ಕಟ್ಟಿಕೊಂಡು ಹನಿಟ್ರ್ಯಾಪ್ ಮಾಡುತ್ತಾರೆ. ಆ ಮಹಿಳೆಯ ಬಣ್ಣದ ಮಾತು, ಒನಪು ವಯ್ಯಾರಕ್ಕೆ ಬೆರಗಾಗಿ ಚಾಟ್ ಮಾಡಲು ಶುರುಮಾಡಿದರೆ ಆತನ ಕಥೆ ಮುಗಿದಂತೆಯೇ. ಇಂತಹ ಹೆಂಗಸರಿಗೆ ತನ್ನೊಂದಿಗೆ ಚಾಟ್ ಮಾಡುವವನು ಎಂಥವನು ಎಂಬುದು ಗೊತ್ತಾಗಿ ಬಿಡುತ್ತದೆ. ಒಂದು ವೇಳೆ ಜೊಲ್ಲು ಪಾರ್ಟಿ ಎಂದು ಗೊತ್ತಾದರೆ ಅವನನ್ನು ಸುಲಭವಾಗಿ ಬಗಲಿಗೆ ಬೀಳಿಸಿಕೊಂಡು ತುಂಬಾ ಕ್ಲೋಸ್ ಆಗಿ ಮುಂದುವರೆದು ಅವನಿಗೆ ಮುಹೂರ್ತ ಫಿಕ್ಸ್ ಮಾಡಿಬಿಡುತ್ತಾರೆ.

ಮೋಸ, ವಂಚನೆ, ಅನೈತಿಕ ವಿಚಾರಗಳಿಗೆ ಬಹಳಷ್ಟು ಮಂದಿ ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಇದು ನಿಜಕ್ಕೂ ದುರಂತವೇ. ಇದನ್ನು ಸಜ್ಜನರು ಸದುಪಯೋಗಪಡಿಸಿಕೊಂಡರೆ ದುಷ್ಟರು ತಮ್ಮ ಕೆಟ್ಟ ಕೃತ್ಯಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಇಲ್ಲಿ ಎಚ್ಚರಿಕೆಯ ಹೆಜ್ಜೆಯಿಡದೆ ಹೋದರೆ ಸಂಕಷ್ಟವಂತು ತಪ್ಪಿದಲ್ಲ, ದುಷ್ಟ ಜನರ ಕೈಗೆ ಸಿಕ್ಕಿಕೊಂಡು ನಲುಗಿದ ಬಹಳಷ್ಟು ಮಂದಿಯಿದ್ದಾರೆ. ಇತ್ತೀಚೆಗೆ ಯಾವುದೋ ಹೆಂಗಸಿಗೆ ಮೆಸೇಜ್ ಮಾಡಿದ ತಪ್ಪಿಗೆ ವ್ಯಕ್ತಿಯೊಬ್ಬ ಏಳು ಲಕ್ಷ ಕಕ್ಕಿದಲ್ಲದೆ, ಪದೇ ಪದೇ ಫೋನ್ ಮಾಡಿ ಹಣಕ್ಕಾಗಿ ಪೀಡಿಸಿದಾಗ ಅನ್ಯ ಮಾರ್ಗವಿಲ್ಲದೆ ಪೊಲೀಸರಿಗೆ ದೂರು ನೀಡಿದ್ದರಿಂದ ಹೀಗೂ ನಡೆಯುತ್ತದೆ? ಎಂಬ ವಿಚಾರ ಬೆಳಕಿಗೆ ಬಂದಿದೆ.

ಇಲ್ಲಿ ವ್ಯಕ್ತಿಯಿಂದ ವಸೂಲಿ ಮಾಡಿದ ಖತರ್ ನಾಕ್ ಗ್ಯಾಂಗ್‌ನಲ್ಲಿ ಹೆಂಗಸೊಬ್ಬಳು ಇದ್ದಳು ಎನ್ನುವುದು ಗಮನದಲ್ಲಿರಬೇಕಾದ ಸಂಗತಿಯಾಗಿದೆ. ಗಂಡ ಹೆಂಡತಿ ಇಬ್ಬರು ಸೇರಿ ಬ್ಲಾಕ್ ಮೇಲ್ ಮಾಡಿ ಹಣ ವಸೂಲಿ ಮಾಡುತ್ತಿದ್ದರು ಎನ್ನುವುದು ಅಷ್ಟೇ ಸತ್ಯ. ಹಣ ಸಂಪಾದನೆಗಾಗಿ ಸುಲಭದ ಮಾರ್ಗ ಕಂಡುಕೊಂಡಿದ್ದು, ಕೆಲವು ಗಂಡಸರು ಮಾನಮರ್ಯಾದೆಗೆ ಹೆದರಿ ಕೇಳಿದಷ್ಟು ಹಣ ನೀಡಿ ಬಿಡುತ್ತಾರೆ. ಜತೆಗೆ ಪೊಲೀಸರಿಗೂ ದೂರು ನೀಡುವುದಿಲ್ಲ. ಇದನ್ನು ಚೆನ್ನಾಗಿ ಅರಿತ ವಂಚಕರು ಹೆಣ್ಣು ಮಕ್ಕಳ ಮೂಲಕವೇ ಡೀಲ್ ಮಾಡುತ್ತಾರೆ. ವಂಚನೆಗೊಳಗಾದವರು ಬಾಯಿ ಬಿಡದ ಕಾರಣದಿಂದಾಗಿ ಮತ್ತೆ ಮತ್ತೆ ಅದನ್ನೇ ಮಾಡುತ್ತಿರುತ್ತಾರೆ.


ಇದೀಗ ಸಾಮಾಜಿಕ ಜಾಲತಾಣದಲ್ಲಿ ಹೇಗೆಲ್ಲ


ಆರೋಪಿಗಳಾದ ಇಬ್ರಾಹಿಂ ಬಾದ್‌ಷಾ, ರಾಘವೇಂದ್ರ ಹಾಗೂ ಚರಣ್

ವಂಚಿಸುತ್ತಾರೆ ಎಂಬುದನ್ನು ಖತರ್‌ನಾಕ್ ಗ್ಯಾಂಗ್ ನ್ನು ಬಂಧಿಸಿ ಜೈಲಿಗೆ ಅಟ್ಟುವ ಮೂಲಕ ಕುಶಾಲನಗರ ಟೌನ್ ಪೊಲೀಸರು ಬಯಲು ಮಾಡಿದ್ದಾರೆ. ಅಷ್ಟೇ ಅಲ್ಲದೆ ಸಾಮಾಜಿಕ ಜಾಲತಾಣವನ್ನು ಬಳಸುವಾಗ ಎಚ್ಚರವಾಗಿರಿ ಎಂಬ ಸಂದೇಶವನ್ನು ಸಮಾಜಕ್ಕೆ ರವಾನಿಸಿದ್ದಾರೆ. ಇಷ್ಟಕ್ಕೂ ಆಗಿದ್ದೇನು ಎಂಬುದನ್ನು ಕೆದಕುತ್ತಾ ಹೋದರೆ ಫೇಸ್‌ಬುಕ್ ಕಹಾನಿಯೊಂದು ತೆರೆದುಕೊಳ್ಳುತ್ತದೆ. ಎಲ್ಲರೂ ಬಳಸುವಂತೆ, ಮೆಸೇಜ್ ಮಾಡುವಂತೆ ಕುಶಾಲನಗರ ಟೌನ್ ಪೊಲೀಸ್ ಠಾಣಾ ವ್ಯಾಪ್ತಿಯ ಮಾದಪಟ್ಟಣ ನಿವಾಸಿಯಾದ ಪರಶಿವಮೂರ್ತಿ ಎಂಬುವವರು ಕೂಡ ಮಾಡಿದ್ದರು.

**ಕೊಡಗು**

**✍ಬಿ.ಎಂ. ಲವಕುಮಾರ್**



ಇವರಿಗೆ ಫೇಸ್‌ಬುಕ್‌ನಲ್ಲಿ ಪರಿಚಯವಾದ ಮಹಿಳೆ (ಮಹಿಳೆ ಹೆಸರಿನಲ್ಲಿದ್ದ)ಗೆ ಮೆಸೇಜ್ ಮಾಡುತ್ತಿದ್ದರು. ಆ ಕಡೆಯಿಂದಲೂ ಮೆಸೇಜ್‌ಗಳು ಬರುತ್ತಿದ್ದವು. ಗುಡ್ ಮಾರ್ನಿಂಗ್, ತಿಂಡಿ ಆಯಿತಾ? ಊಟ ಆಯಿತಾ ಹೀಗೆ ಮಾತುಕತೆಗಳು ಆರಂಭವಾಗಿದ್ದು ಆ ಮೂಲಕ ಸ್ವಲ್ಪ ಮಟ್ಟಿಗೆ ಕ್ಲೋಸ್ ಆಗಿ ಬಿಟ್ಟರು. ಅಷ್ಟೇ ಆಗಿದ್ದರೆ ಏನೂ ಆಗುತ್ತಿರಲಿಲ್ಲವೇನೋ ಅದೊಂದು ಕೆಟ್ಟಗಳಿಗೆಯೋ ಏನೋ? 2024ನೇ ಅಕ್ಟೋಬರ್ ತಿಂಗಳಿನಲ್ಲಿ ಕಾಮೆಂಟ್ ಹಾಕಿ ಮೆಸೇಜ್‌ನಲ್ಲಿ ಖುಷಿಯಿಂದ ಐ ಲವ್ ಯೂ ಎಂದು ಬಿಟ್ಟಿದ್ದರು. ಅಷ್ಟೇ ಅಲ್ಲಿಗೆ ಅವರ ದೆಸೆಯೇ ವಕ್ರವಾಗಿ ಬಿಟ್ಟಿತು.

02-11-2024ರಂದು ಪರಶಿವಮೂರ್ತಿಯ ಮೊಬೈಲ್ ಸಂಖ್ಯೆಗೆ ಫೋನ್ ಬಂದಿತ್ತು. ಏರು ಧ್ವನಿಯಲ್ಲಿಯೇ ಅತ್ತಕಡೆಯಿಂದ ಮಾತನಾಡಿದ ವ್ಯಕ್ತಿ ನಾವು ಪಿರಿಯಾಪಟ್ಟಣ ಸೈಬರ್ ಪೊಲೀಸ್ ಮಾತಾಡುತ್ತಿರೋದು ಏನ್ರಿ ಫೇಸ್‌ಬುಕ್‌ನಲ್ಲಿ ಕಂಡ, ಕಂಡ, ಹೆಂಗಸರು, ಹುಡುಗಿಯರಿಗೆ ಅಶ್ಲೀಲ ಮೆಸೇಜ್, ಕಾಮೆಂಟ್ ಮಾಡುತ್ತಿದ್ದೀರಂತೆ? ನಮಗೆ ಕಂಪ್ಲೆಂಟ್ ಬಂದಿದೆ ಎಲ್ಲಿದ್ದೀರಾ? ಈಗಲೇ ಬನ್ನಿ ಇಲ್ಲಾಂದ್ರೆ ಮನೆ ಹತ್ತಿರ ಬಂದು ಎತ್ತಾಕಿಕೊಂಡು ಬಂದು ಜೈಲಿಗೆ ತಳ್ಳುತ್ತೇವೆ ಎಂದು ಗದರಿದ್ದಾನೆ. ಆ ಮಾತಿಗೆ ಪರಶಿವಮೂರ್ತಿ ನಡುಗಿ ಹೋಗಿದ್ದಾರೆ. ಮೆಸೇಜ್ ಮಾಡಿದ್ದು ನಿಜವಾಗಿದ್ದರಿಂದ ಅತ್ತ ಕಡೆಯಿಂದ ಮಾತನಾಡುತ್ತಿರುವವರು ನಿಜವಾದ ಪೊಲೀಸರೇ ಎಂದು ಬಲವಾಗಿ ನಂಬಿದ್ದರು.

ಒಂದು ವೇಳೆ ಪೊಲೀಸರು ಮನೆ ಬಳಿಗೆ ಬಂದರೆ ನನ್ನ ಕಥೆ ಮುಗಿದಂತೆಯೇ. ಏಕೆಂದರೆ ಅದಾಗಲೇ ಪವಿತ್ರ ಗೌಡಗೆ ಕೆಟ್ಟದಾಗಿ ಕಾಮೆಂಟ್ ಮಾಡಿ ರೇಣುಕಾಸ್ವಾಮಿ ಹತ್ಯೆಯಾಗಿದ್ದು, ನಟ ದರ್ಶನ್ ಜೈಲ್ ಸೇರಿದ್ದು ಈ ವಿಚಾರಗಳು ದೊಡ್ಡಮಟ್ಟದಲ್ಲಿ ಸುದ್ದಿಯಲ್ಲಿತ್ತು. ಹೀಗಾಗಿ ಒಂದು ವೇಳೆ ಇದು ಬೆಳಕಿಗೆ ಬಂದರೆ ನನ್ನ ಕಥೆ ಮುಗಿದಂತೆಯೇ ಎಂದು ಹೆದರಿ ಹೋಗಿದ್ದರು. ಹೀಗಾಗಿ ಫೋನ್ ಮಾಡಿದವರನ್ನು ಬೇಡಿಕೊಂಡು ತಪ್ಪಾಯ್ತು ಸರ್ ಯಾವತ್ತೂ ಹಾಗೆ ಮಾಡಲ್ಲ ಎಂದೆಲ್ಲ ಗೋಗರೆದಿದ್ದಾರೆ. ಈ ವೇಳೆ ಸರಿ ದುಡ್ಡು ಕೊಟ್ಟು ಸರಿ ಮಾಡಿಕೊಳ್ಳಿ ಎಂದಿದ್ದಾರೆ.

ಆ ನಂತರ ಆಗಾಗ್ಗೆ ಫೋನ್ ಮಾಡಿ ಬೆದರಿಸುತ್ತಾ ಸುಮಾರು ಏಳು ಲಕ್ಷ ಹಣವನ್ನು ಪೀಕಿದ್ದಾರೆ. ಮಾನ ಮರ್ಯಾದೆಗೆ ಅಂಜಿದ ಪರಶಿವಮೂರ್ತಿ ಸಾಲ ಮಾಡಿ ಹಣ ತಂದುಕೊಟ್ಟಿದ್ದಾರೆ. ಆದರೆ ಖತರ್‌ನಾಕ್‌ಗಳಿಗೆ ಇದು ಹಾಲು ಕೊಡುವ ಹಸು ಎನ್ನುವುದು ಗೊತ್ತಾಗಿದೆ. ಬೆದರಿಸಿದರೆ ಇನ್ನೊಂದಷ್ಟು ಹಣ ಕಿತ್ತುಕೊಳ್ಳಬಹುದು

☞13

# ಮಾಜಿ ಶಾಸಕ ಸಿ.ಎಂ. ಲಿಂಗಪ್ಪಗೆ ಮಕ್ಮಲ್ ಟೋಪಿ!



ಮಾಜಿ ಶಾಸಕ ಸಿ.ಎಂ. ಲಿಂಗಪ್ಪ

**ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರ ಕ್ಷೇತ್ರದ ಮಾಜಿ ಶಾಸಕ (ಎಂಎಲ್‌ಸಿ) ಸಿ.ಎಂ. ಲಿಂಗಪ್ಪರವರು ಹಿರಿಯ ಮುತ್ಸದ್ದಿ ಎಂದರೆ ತಪ್ಪಾಗಲಾರದು. ಇಂತಹವರಿಗೆ ಭೂ ಪರಿಹಾರದ ಹಣ ನೀಡುವುದಾಗಿ ನಂಬಿಸಿ, ಆಗುಂತಕನೊಬ್ಬ ಮಕ್ಮಲ್ ಟೋಪಿ ಹಾಕಿದ್ದಾನೆ. ಅದರಲ್ಲೂ ಜಿಲ್ಲಾ ಕೇಂದ್ರ ಸ್ಥಾನದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿಯಲ್ಲೇ ಹಣ ಪಡೆದು ವಂಚಿಸಿರುವ ಘಟನೆಯಿದು. ಜಿಲ್ಲೆಯ ಹಿರಿಯ ಕಾಂಗ್ರೆಸ್ ನಾಯಕರಾಗಿರುವ ಹಾಗೂ ಮಾಜಿ ಶಾಸಕ ಸಿ.ಎಂ. ಲಿಂಗಪ್ಪರವರನ್ನೇ ದಾರಿ ತಪ್ಪಿಸಿರುವ ಅನಾಮಿಕ ವ್ಯಕ್ತಿ ಇವರಿಂದ ಬರೋಬ್ಬರಿ ಒಂದು ಲಕ್ಷದ ಮೂವತ್ತೇಳು ಸಾವಿರ ರೂಪಾಯಿ (1.37) ಹಣ ಪಡೆದು ಉಂಡೇನಾಮ ಹಾಕಿದ್ದಾನೆ. ಈ ಆರೋಪಿಯು ಜಿಲ್ಲಾಧಿಕಾರಿ ಕಛೇರಿ ಸಂಕೀರ್ಣದಲ್ಲೇ ಹಣ ಪಡೆದು ಎಸ್ಕೇಪ್ ಆಗಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಈ ಸಂಬಂಧದ ಪ್ರಕರಣವು ರಾಮನಗರ ಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.**

**ರಾಮನಗರ**

ಶಾಂತರಾಜು ಜಿ. ಕಲ್ಲಹಳ್ಳಿ

### ಏನಿದು ಘಟನೆ...?

ಅನಾಮಿಕ ವಂಚಕನೊಬ್ಬ ಮಾಜಿ ಶಾಸಕ ಸಿ.ಎಂ. ಲಿಂಗಪ್ಪರವರಿಗೆ ದೂರವಾಣಿ ಕರೆ ಮಾಡಿ ನಾನು ಬಿಡದಿ ಪುರಸಭೆ ಅಧಿಕಾರಿ ನಟರಾಜ್ ಎಂದು ಹೇಳಿದ್ದಾನೆ. ನಂತರ ನಿಮ್ಮ ಜಮೀನು ಸ್ವಾಧೀನ ವಾಗಿರುವುದಕ್ಕೆ ಸಂಬಂಧಿಸಿದಂತೆ ಆ ಜಮೀನಿಗೆ ಪರಿಹಾರವಾಗಿ ನಿಮಗೆ ಇಪ್ಪತ್ತು ಮೂರು ಲಕ್ಷದ ಮೂವತ್ತೈದು ಸಾವಿರ (23.35 ಲಕ್ಷ ರೂ.) ರೂಪಾಯಿ ಹಣ ಬಂದಿದೆ. ಮೂರು ತಿಂಗಳ ಹಿಂದೆಯೇ ಜಿಲ್ಲಾ ಖಜಾನೆಯಲ್ಲಿ ನಿಮ್ಮ ಹಣ ಜಮೆಯಾಗಿದೆ. ನಾನು ಜಿಲ್ಲಾಧಿಕಾರಿ ಕಚೇರಿಯಲ್ಲೇ ಕಾಯುತ್ತಿರುತ್ತೇನೆ. ನೀವು ತಕ್ಷಮ ಒಂದು ಲಕ್ಷದ ಮೂವತ್ತೇಳು ರೂಪಾಯಿ ಬಾಂಡ್ ತೆಗೆದುಕೊಂಡು ಬಂದರೆ ನಿಮಗೆ ಪರಿಹಾರದ ಹಮ ಕೊಡಿಸುವುದಾಗಿ ಹೇಳಿದ್ದಾನೆ. ಇದನ್ನೇ ನಂಬಿಕೊಂಡು ತಕ್ಷಣ ಮಾಜಿ ಶಾಸಕ ಸಿ.ಎಂ. ಲಿಂಗಪ್ಪ ತಮ್ಮ ಆಪ್ತ ಬಿ.ಎನ್. ಗಂಗಾಧರಯ್ಯ ಹಾಗೂ ಅವರ ಜೊತೆ ಚಾಲಕ ಹನುಮಯ್ಯ ಎಂಬುವವರನ್ನು ಜಿಲ್ಲಾಧಿಕಾರಿಗಳ ಕಚೇರಿಗೆ ಬಂದಿದ್ದಾರೆ. ಮಾರ್ಗ ಮಧ್ಯೆ ಇವರುಗಳು ಬರುತ್ತಿರುವಾಗಲೇ ಎರಡು ಮೂರು ಬಾರಿ ಕರೆ ಮಾಡಿ ಬರುತ್ತಿರುವುದನ್ನು ವಂಚಕ ಖಚಿತಪಡಿಸಿಕೊಂಡಿದ್ದಾನೆ. ಅಲ್ಲದೇ ಅವರಿಂದ ಹೇಗೆ ಹಣವನ್ನು ಎಗರಿಸಬೇಕೆಂದು ಬಲೆ ಬೀಸಿರುವ ಐನಾತಿ ಚಾಣಕ್ಯ ವಂಚಕ ದಾರಿ ತಪ್ಪಿಸಿ ಹಣ ಲಪಟಾಯಿಸುವ ಸ್ಕೆಚ್ ಸಿದ್ದಪಡಿಸಿಕೊಂಡಿದ್ದಾನೆ.



ಜಿಲ್ಲಾ ಎಸ್ಪಿ ಎಸ್. ಶ್ರೀನಿವಾಸಗೌಡ



ಡಿವೈಎಸ್ಪಿ ಬಿ.ಎನ್. ಶ್ರೀನಿವಾಸ್

ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣದಲ್ಲಿರುವ ಭೂಸ್ವಾಧೀನಾಧಿಕಾರಿ ಕಚೇರಿಗೆ ಹೋಗಿ ಸಿ.ಎಂ. ಲಿಂಗಪ್ಪ ರವರು ವಂಚಕ ನಟರಾಜ್‌ಗೆ ಕರೆ ಮಾಡಿದ್ದಾರೆ. ಆಗ ವಂಚಕ ಕಾಲ್ ರಿಸೀವ್ ಮಾಡಿ ನಾನು ಜಿಲ್ಲಾಧಿಕಾರಿಗಳ ಕೊಠಡಿಯಲ್ಲಿ ಸಭೆಯಲ್ಲಿ ಇದ್ದೇನೆ. ಕೊಠಡಿ ಸಂಖ್ಯೆ ಹತ್ತರ ಬಳಿ ಜಗದೀಶ್ ಎಂಬುವರು ಇರುತ್ತಾರೆ. ಅವರು ನಿಮಗೆ ಖಜಾನೆಯಲ್ಲಿ ಕೆಲಸ ಮಾಡಿಕೊಡುತ್ತಾರೆ. ಬಾಂಡ್ ತಂದಿದ್ದೀರಾ ಎಂದು ಕೇಳಿದ್ದಾನೆ. ಆಗ ಇವರು ಬಾಂಡ್ ಯಾರ ಹೆಸರಿಗೆ ಬಾಂಡ್ ತರಬೇಕು ಎಂದಾಗ, ನಿಮ್ಮ ಗುರುತಿನ ಚೀಟಿಗೆ ಸಹಿ ಹಾಕಿ ನಿಮ್ಮ ಸಹಾಯಕರ ಕೈಯಲ್ಲಿ ಹಣ ಕಳುಹಿಸಿ, ಜಗದೀಶ್‌ರವರೇ ಬಾಂಡ್ ಖರೀದಿ ಮಾಡುತ್ತಾರೆ ಎಂದು ನಂಬಿಕೆ ಬರುವ ಹಾಗೆ ಮಾತನಾಡಿದಾಗ, ವಂಚಕ ನಟರಾಜ್‌ನ ಮಾತು ನಂಬಿ ಸಿ.ಎಂ. ಲಿಂಗಪ್ಪರವರು ಮೊದಲು ಆಪ್ತ ಗಂಗಾಧರ್ ಕೈಯಲ್ಲಿ ಒಂದು ಲಕ್ಷ ರೂಪಾಯಿ ಹಣ ಕಳುಹಿಸಿದ್ದಾರೆ. ಆಗ ಜಗದೀಶ್ ನಟರಾಜುರವರು ಒಂದು ಲಕ್ಷದ ಮೂವತ್ತೇಳು ಸಾವಿರ ರೂಪಾಯಿ ಹಣ ಕೊಡು ವಂತೆ ಹೇಳಿದ್ದಾರೆ ಎಂದು ಹೇಳಿ ಪೂರ್ತಿ ಹಣವನ್ನು ಪಡೆದು ಕೊಂಡಿದ್ದಾನೆ. ಇದಾದ ಬಳಿಕ ನಿಮ್ಮ ಬ್ಯಾಂಕ್ ಖಾತೆಗೆ ಹಣ ಜಿಲ್ಲಾ ಖಜಾನೆಯಿಂದ ನೇರವಾಗಿ ಜಮೆಯಾಗುತ್ತದೆ ಎಂದು ಹೇಳಿ, ನೀವು ಮನೆಗೆ ಹೋಗಿ ಎಂದು ಕಳುಹಿಸಿದ್ದಾನೆ. ಇದನ್ನೇ ನಂಬಿ ಕೊಂಡು ಮನೆಗೆ ಹಿಂದಿರುಗಿ ಬಂದ ಮಾಜಿ ಶಾಸಕ ಸಿ.ಎಂ. ಲಿಂಗಪ್ಪರವರಿಗೆ ಆಗ ಅನುಮಾನ ಮೂಡಿದೆ. ಆ ಕ್ಷಣ ಕೂಡಲೇ ನಟರಾಜ್ ಎಂಬುವರ ಮೊಬೈಲ್ ನಂಬರಿಗೆ ಕರೆ ಮಾಡಿದಾಗ ನಾಟ್ ರೀಚಬಲ್ ಬಂದಿದೆ. ಬಳಿಕ ವಂಚನೆ ನಡೆದಿರುವುದು ಖಾತರಿಪಡಿಸಿಕೊಂಡು ರಾಮನಗರ ಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಿಸಿದ್ದಾರೆ.



ಬೆಂಗಳೂರು ದಕ್ಷಿಣ ಜಿಲ್ಲಾಧಿಕಾರಿಗಳ ಕಛೇರಿ

ಸಾಮಾನ್ಯವಾಗಿ ಸಚಿವ ಶಾಸಕ, ಮಾಜಿ ಶಾಸಕರ ಸಂಬಂಧಿ ಎಂದೋ ಅಥವಾ ಅವರ ಆಪ್ತ ಸಹಾಯಕ ಅಂತನೋ ಮೋಸ ಮಾಡುವ ಪ್ರಕರಣಗಳು ಸಾಕಷ್ಟಿವೆ. ಆದರೆ ಇಲ್ಲಿ ಮಾಜಿ ಶಾಸಕರಿಗೆ ಮಕ್ಮಲ್ ಟೋಪಿ ಹಾಕಿರುವ ಐನಾತಿ ವಂಚಕ ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣದಲ್ಲೇ ತನ್ನ ಕರಾಮತ್ತು ತೋರಿದ್ದಾನೆ. ಇನ್ನು ಭೂಸ್ವಾಧೀನಾಧಿ ಕಾರಿ ಕಚೇರಿಯಲ್ಲಿ ಸಿ.ಎಂ. ಲಿಂಗಪ್ಪರವರ ಭೂಸ್ವಾಧೀನ ವಿಚಾರ ಸೋರಿಕೆಗೊಂಡಿರ ಬೇಕು, ಇಲ್ಲವೇ ಕಚೇರಿಯ ಸಿಬ್ಬಂದಿ, ಈ ವಂಚನೆ ಪ್ರಕರಮದಲ್ಲಿ ಶಾಮೀಲಾ ಗಿರಬೇಕು ಎಂದು ಅನುಮಾನಗಳು ವ್ಯಕ್ತವಾಗುತ್ತಿದೆ. ದೂರು ದಾಖಲಿಸಿ ಕೊಂಡಿರುವ ರಾಮನಗರ ಪುರ ಪೊಲೀಸ್ ಠಾಣೆಯ ಪೊಲೀಸರು ಈ ಪ್ರಕರಣದ ತನಿಖೆ ಚುರುಕುಗೊಳಿಸಿ ದ್ದಾರೆ. ಜಿಲ್ಲಾಧಿಕಾರಿಯ ಕಚೇರಿಯಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಪರಿಶೀಲನೆ ಮಾಡಿದ್ದು, ವಂಚಕರ ಸುಳಿವು ಪತ್ತೆಹಚ್ಚಲು ಎಲ್ಲಾ ರೀತಿಯ ಕ್ರಮವನ್ನು ಕೈಗೊಂಡಿದ್ದಾರೆ.

ಇನ್ನು ನಟರಾಜ್ ಎಂದು ಹೇಳಿಕೊಂಡು ಮಾಜಿ ಶಾಸಕ ಸಿ.ಎಂ. ಲಿಂಗಪ್ಪರವರಿಗೆ ಕರೆ ಮಾಡಿದ್ದ ವ್ಯಕ್ತಿಯ ದೂರವಾಣಿ ಸಂಖ್ಯೆಗೆ ವಂಚನೆಯಾದ ನಂತರ ಕರೆ ಮಾಡಿದಾಗ ಚಂದಾದಾರರು ಸಂಪರ್ಕಕ್ಕೆ ಸಿಗುತ್ತಿಲ್ಲ ಎಂಬ ಮಾಹಿತಿ ತೆಲುಗಿನಲ್ಲಿ ಬಂದಿದೆ ಎನ್ನಲಾಗಿದೆ. ಹೀಗಾಗಿ ತೆಲಂಗಾಣ ಅಥವಾ ಆಂಧ್ರಪ್ರದೇಶದಲ್ಲಿ ವಂಚಕ ತಲೆ ಮರೆಸಿಕೊಂಡಿರಬಹುದು ಎಂಬ ಅನುಮಾನ ವ್ಯಕ್ತವಾಗಿದೆ.

### ಭೂಸ್ವಾಧೀನಾಧಿಕಾರಿ ಕಚೇರಿ ಮಾಹಿತಿ ಸೋರಿಕೆಯಾಗಿದ್ದು ಹೇಗೆ?

ಮಾಜಿ ಶಾಸಕ ಸಿ.ಎಂ. ಲಿಂಗಪ್ಪರವರಿಗೆ ಸೇರಿದ್ದ ಆಸ್ತಿ ಭೂಸ್ವಾಧೀನಗೊಂಡಿದ್ದು, ಅವರಿಗೆ ಈ ಭೂ ಪರಿಹಾರ ಬರಬೇಕಿತ್ತು. ಪರಿಹಾರದ ಹಣವನ್ನು ಪಡೆಯಲು ಇಂತಿಷ್ಟು ಮೊತ್ತದ ಹಣವನ್ನು ಸರಕಾರಕ್ಕೆ ಬಾಂಡ್ ಮೂಲಕ ಪಾವತಿ ಮಾಡಬೇಕಿತ್ತು. ಈ ಎಲ್ಲಾ ವಿಚಾರವನ್ನು ತಿಳಿದಿದ್ದ ವ್ಯಕ್ತಿಯೇ ವಂಚನೆ ಮಾಡಿದ್ದಾನೆ. ಜಿಲ್ಲಾಧಿಕಾರಿ ಕಚೇರಿಗೆ ಸಿ.ಎಂ. ಲಿಂಗಪ್ಪರವರು ಹೋದಾಗ ಜಿಲ್ಲಾಧಿಕಾರಿ ಪ್ರಮುಖ ಸಭೆಯಲ್ಲಿ ಇದ್ದರು. ಈ ಕಾರಣದಿಂದಾಗಿ ಡಿಸಿ ಕಚೇರಿಯ ಸಿಬ್ಬಂದಿ ಸಿ.ಎಂ. ಲಿಂಗಪ್ಪರವರನ್ನು ವೀಕ್ಷಕರ ಕೊಠಡಿಯಲ್ಲಿ ಕುಳ್ಳಿರಿಸಿದ್ದರು. ಇಡೀ ವಂಚನೆ ಪ್ರಕರಣ ಜಿಲ್ಲಾಧಿಕಾರಿ ಕಚೇರಿಯಲ್ಲೇ ನಡೆದಿರುವುದು ಅಚ್ಚರಿಯ ಸಂಗತಿಯಾಗಿದೆ. ಇನ್ನು ಸಿ.ಎಂ. ಲಿಂಗಪ್ಪರವರಿಗೆ ಭೂ ಪರಿಹಾರ ಬರಬೇಕಿದ್ದ ವಿಚಾರ ಸೋರಿಕೆಯು ಹೇಗಾಯ್ತು, ವಿಶೇಷ ಭೂ ಸ್ವಾಧೀನಾಧಿಕಾರಿ ಕಾರ್ಯಾಲಯ ಸಿಬ್ಬಂದಿ ಮಾಹಿತಿ ಸೋರಿಕೆ ಮಾಡಿರಬೇಕು ಥವಾ ಈ ವಂಚನೆ ಪ್ರಕರಣದಲ್ಲಿ ಶಾಮೀಲು ಆಗಿರುವ ಅನುಮಾನ ವ್ಯಕ್ತಪಡಿಸಿರುವ ಸಾರ್ವಜನಿಕರು ಅಚ್ಚರಿಪಡುತ್ತಿದ್ದಾರೆ.




ರಾಮನಗರ ಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲು

ಇತ್ತ ವಂಚಕ ನಟರಾಜ್‌ನನ್ನು ಬಿಡದಿ ಪುರಸಭೆಯಲ್ಲಿ ವಿಚಾರ ಮಾಡಿದಾಗ ಅಲ್ಲಿ ನಟರಾಜ್ ಎಂಬಾತ ನೌಕರ ಇರುವುದು ಸತ್ಯ. ಅವರನ್ನು ವಿಚಾರಿಸಿದಾಗ ನಾನು ಅವರಿಗೆ ಕರೆ ಮಾಡಿಲ್ಲ ಎಂದಿದ್ದಾರೆ. ಅಲ್ಲದೇ ಅವರ ದೂರವಾಣಿ ಸಂಖ್ಯೆ ಬೇರೆ. ಮೊದಲೇ ಊಹಿಸಿದ್ದ ನಕಲಿ ನಟರಾಜ್ ಅಲ್ಲಿರುವ ನಟರಾಜನ ಹೆಸರು ಬಳಸಿಕೊಂಡು ನಟೋರಿಯಸ್ ಆಗಿ ಗೇಮ್ ಆಡಿದ್ದಾನೆ. ಈ ವಂಚಕ ನಟರಾಜನ ಪತ್ತೆಗೆ ಪೊಲೀಸರು ಶೋಧ ನಡೆಸುತ್ತಿದ್ದಾರೆ. ಏನೇ ಆಗಲೀ ನಕಲಿ ನಟರಾಜ ಸಿಕ್ಕಿದ ಮೇಲೆ ಸತ್ಯಾಸತ್ಯತೆಯನ್ನು ಪೊಲೀಸರು ಹೊರ ಬೀಳಿಸಬೇಕಿದೆ.



ಬಿಡದಿಯಲ್ಲಿರುವ ಸಿ.ಎಂ. ಲಿಂಗಪ್ಪರ ಜ್ಞಾನ ವಿಕಾಸ ವಿದ್ಯಾ ಸಂಸ್ಥೆ

# ಹೆಂಡತಿಯನ್ನು ಬಸ್ ನಿಲ್ದಾಣದಲ್ಲಿ ಕೂರಿಸಿ ಅತ್ತೆ ಜೊತೆ ಪರಾರಿಯಾದ ಐನಾತಿ ಅಳಿಯ!



ಐನಾತಿ ಅಳಿಯ ಗಣೇಶ

**ದಾವಣಗೆರೆ ಜಿಲ್ಲೆಯಲ್ಲಿ 25 ವರ್ಷದ ಐನಾತಿ ಅಳಿಯನೊಬ್ಬ ತನ್ನ ಪತ್ನಿಯ ತಾಯಿ/55 ವರ್ಷದ ಅತ್ತೆಯೊಂದಿಗೆ ಎಸ್ಕೇಪ್ ಆಗಿರುವ ಘಟನೆ ಬೆಳಕಿಗೆ ಬಂದಿದೆ! ಸಾಮಾನ್ಯವಾಗಿ ಇಂತಹ ಪ್ರಕರಣಗಳು ಉತ್ತರ ಭಾರತದ ರಾಜ್ಯಗಳಲ್ಲಿ ನಡೆಯುವುದನ್ನು ಟಿವಿಗಳಲ್ಲಿ ನೋಡಿದ್ದೇವೆ. ಮಹದಚ್ಚರಿ! ಎಂಬಂತೆ ಕರ್ನಾಟಕದಲ್ಲಿ ಇಂತಹದ್ದೊಂದು ಪ್ರಕರಣ ನಡೆದಿತ್ತು. ಗಂಡ ಮತ್ತು ಅಮ್ಮನಿಂದ ವಂಚನೆಗೀಡಾಗಿರುವ ನತದೃಷ್ಟೆ, ಗಂಡನ ಮೊಬೈಲ್‌ನಲ್ಲಿ ಅತ್ತೆ ಅಳಿಯನ ಸರಸ ಸಲ್ಲಾಪ ನೋಡಿ ಶಾಕ್ ಆಗಿದ್ದಳು! ಇದೀಗ ನಾಪತ್ತೆಯಾಗಿದ್ದ ಅತ್ತೆ ಊರಿಗೆ ವಾಪಸ್ಸಾಗಿ ಏನೇನೋ ಕಥೆ ಹೇಳುತ್ತಿದ್ದಾಳೆ!**



ತಾಟಗಿತ್ತಿ ಅತ್ತೆ ಶಾಂತ

ಇದೆಂಥ ಕೇಡು ಗಾಲ ಬಂತಯ್ಯ... 25 ವರ್ಷದ ಅಳಿಯನೋರ್ವ 55 ವರ್ಷದ ಅತ್ತೆಯೊಂದಿಗೆ ಓಡಿ ಹೋಗಿರುವ ಘಟನೆ ಬೆಣ್ಣೆನಗರಿ ದಾವಣಗೆರೆಯಲ್ಲಿ ನಡೆದಿದೆ! ಗಣೇಶ್ ಎಂಬಾತ ಕಟ್ಟಿಕೊಂಡ ಹೆಂಡತಿ ಹೇಮಾಳನ್ನ ಚನ್ನಗಿರಿ ಬಸ್ ನಿಲ್ದಾಣದಲ್ಲಿ ಬಿಟ್ಟು, ದಂಪತಿಗೆ ಬೀಳ್ಕೊಡಲು ಬಂದಿದ್ದ ಅತ್ತೆ ಶಾಂತಾಳನ್ನು ಹಾರಿಸಿಕೊಂಡು ಎಸ್ಕೇಪ್ ಆಗಿದ್ದಾನೆ!! ಅಳಿಯ ಗಣೇಶ 25 ವರ್ಷ ವಯಸ್ಸಿನವನಾಗಿದ್ದರೆ, ಅತ್ತೆ ಶಾಂತ ಗಣೇಶನಿಗಿಂತ 30 ವರ್ಷ ಹಿರಿಯವಳು. ಅವಳಿಗೀಗ ಜಸ್ಟ್ 55 ವರ್ಷ!

**ಮದುವೆಯಾಗಿ ಎರಡೇ ತಿಂಗಳಿಗೆ....**

ಹೇಮಾ ಮತ್ತು ಗಣೇಶನ ಮದುವೆಯಾಗಿ ಕೇವಲ ಎರಡು ತಿಂಗಳು ಆಗಿತ್ತು. ಮದುವೆಯಾದ ಎರಡೇ ತಿಂಗಳಿಗೆ ಪತಿ, ತನ್ನ ತಾಯಿ ಶಾಂತ ಜೊತೆ ಎಸ್ಕೇಪ್ ಆಗಿರುವುದಕ್ಕೆ ಪತ್ನಿ ಹೇಮಾ ಕಣ್ಣೀರಿಟ್ಟಿದ್ದಾಳೆ. ಅಳಿಯನೊಂದಿಗೆ ಎಸ್ಕೇಪ್ ಆಗಿರುವ ಶೋಭಾ ಮುದ್ದೇನಹಳ್ಳಿ ಗ್ರಾಮದ ನಾಗರಾಜ್ ಎಂಬುವರ ಎರಡನೇ ಪತ್ನಿ. ನಾಗರಾಜ್‌ಗೆ ಮೊದಲು ನಾಬಿಯಾ ಎಂಬ ಮಹಿಳೆಯೊಂದಿಗೆ ಮದುವೆಯಾಗಿದ್ದು, ಗಂಡ-ಹೆಂಡತಿ ಬೇರ್ಪಟ್ಟಿದ್ದರು. ಆನಂತರವೇ ನಾಗರಾಜ್ ಶಾಂತಳನ್ನು ಎರಡನೇ ಮದುವೆಯಾಗಿದ್ದ.



ಎಸ್ಪಿ ಉಮಾ ಪ್ರಶಾಂತ್

ನಾಗರಾಜ್ ಅವರ ಮೊದಲ ಪತ್ನಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಮಗನಿದ್ದಾನೆ. ತಂದೆ ನಾಗರಾಜ್ ಜೊತೆ ವಾಸವಿದ್ದ ಹಿರಿಯ ಮಗಳು ಹೇಮಾಳನ್ನ, ಈಗ್ಗೆ ಎರಡು ತಿಂಗಳ ಹಿಂದಷ್ಟೇ ಗಣೇಶನಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಎರಡು ತಿಂಗಳ ಕಾಲ ಹೇಮಾಳನ್ನು ಕಾಯಿ ಕಡುಬಿನ ಹಾಗೆ ಚೆನ್ನಾಗಿ ತಿಂದುಂಡ ಗಣೇಶ, ಇದೀಗ ಕೈ ಹಿಡಿದ ಹೆಂಡ್ತಿಗೆ ಕೈಕೊಟ್ಟು ಮಿಟುಕಲಾಡಿ ಮಾನಗೇಡಿ ಅತ್ತೆಯೊಂದಿಗೆ ಪರಾರಿಯಾಗಿದ್ದ!

**ಮನೆ ಅಳಿಯನಾಗಿ ಇರ್ತಾನೆ ಅಂತ ನಂಬಿಸಿದ್ದಳು...**



ಗಣೇಶ್-ಹೇಮಾ

ಗಮನೀಯ ಸಂಗತಿ ಏನೆಂದರೆ, ಶಾಂತಳಿಗೂ ಗಣೇಶನಿಗೂ ಎರಡು ವರ್ಷಗಳ ಹಿಂದೆಯೇ ಪರಿಚಯ ಇತ್ತಂತೆ! ಸಣ್ಣ ವಯಸ್ಸಿನ ಹುಡುಗನಿಂದ ಹಡಿಸಿಕೊಳ್ಳುತ್ತಿದ್ದ ಶಾಂತ, ಕೆಲ ಮಾಸಗಳ ಹಿಂದೆ ಗಣೇಶನನ್ನು ತನ್ನ ಮನೆಗೆ ಕರೆದುಕೊಂಡು ಬಂದು, ಎಲ್ಲರಿಗೂ ಪರಿಚಯಿಸಿ, ಈತ ಒಳ್ಳೆ ಹುಡುಗ, ಹೇಮಾಳನ್ನು ಕೊಟ್ಟು ಮದುವೆ ಮಾಡಿದರೆ, ಮನೆ ಅಳಿಯನಾಗಿ ಇಲ್ಲೇ ಇರ್ತಾನೆ ಎಂದು ನಂಬಿಸಿದ್ದಳಂತೆ! ಅದರಂತೆ, ಎರಡು ತಿಂಗಳ ಹಿಂದೆ ಗಣೇಶನ ಜೊತೆ ಮಗಳು ಹೇಮಾಳ ಮದುವೆಯನ್ನು ಬಲು ಅದ್ದೂರಿಯಾಗಿ ಮಾಡಲಾಗಿತ್ತು! ಹಾಗೆ, ಮನೆ ಅಳಿಯನ ಮಾಡಿಕೊಂಡ ಐನಾತಿ ಅತ್ತೆ ಶಾಂತ, ಗಣೇಶನೊಂದಿಗೆ ಆಗಾಗ ತನ್ನ ಮನೆಯೊಳಗೆಯೇ ಸೆಕ್ಸ್ ಮಾಡಿಕೊಂಡಿದ್ದಳು. ಈ ಕಾಮ ಕಾರ್ಕೋಟಕ ಸಂಗತಿ ಆ ಕುಟುಂಬಕ್ಕೆ ಗೊತ್ತಿರಲೇ ಇಲ್ಲಾ!

ಹೀಗಿರುವಾಗ, ಮದುವೆ ಆದ 15 ದಿನಕ್ಕೆ ಗಣೇಶನ ಗೇಮ್ ಹೇಮಾಗೆ ಗೊತ್ತಾಗಿ ಹೋಗಿತ್ತು! ಗಣೇಶ ತನ್ನ ಅತ್ತೆ ಜೊತೆ ಸೆಕ್ಸ್ ಆಟ ಆಡುವಾಗ, ಅದನ್ನು ತನ್ನ ಮೊಬೈಲ್‌ನಲ್ಲಿ ಶೂಟಿಂಗ್ ಮಾಡುತ್ತಿದ್ದ! ಹಿಂದಿನ ದಿನಗಳಲ್ಲಿ ಅತ್ತೆ ಜೊತೆ ಅಶ್ಲೀಲವಾಗಿ ಮಸೇಜ್ ಮಾಡಿರುವುದೆಲ್ಲ ಇನ್‌ಬಾಕ್ಸ್‌ನಲ್ಲಿ ಮಲಗಿತ್ತಂತೆ! ಏನೋ ಅನುಮಾನ ಬಂದು ಪತ್ನಿ ಹೇಮಾ ಅವನ ಮೊಬೈಲ್ ಎತ್ತಿಕೊಂಡು ನೋಡಿದ್ದಾಳೆ! ಅಲ್ಲಿದ್ದ ಮೆಸೇಜ್, ಕಿಸ್ಸಿಂಗ್, ಫಕಿಂಗ್ ಫೋಟೋಸ್ ವೀಡಿಯೋಸ್ ನೋಡಿ ಶಾಕ್ ಆಗಿದ್ದಾಳೆ!! ತಕ್ಷಣ ಅದೆಲ್ಲ ಮೆಸೇಜ್‌ಗಳನ್ನು ತನ್ನ ತಂದೆ ನಾಗರಾಜ್‌ಗೆ ಫಾರ್ವರ್ಡ್ ಮಾಡಿದ್ದಾಳೆ ಕೂಡ! ವಯೋವೃದ್ಧ ನಾಗರಾಜ್, ಅಳಿಯ ಗಣೇಶ ಹಾಗೂ ಪತ್ನಿ ಶಾಂತಳ ಸರಸ ಕಂಡು ಶಾಕ್ ಆಗಿ ಹಲ್ಲು ಮಸೆದಿರಬೇಕು.

**ಹಣ, ಆಭರಣ ಎತ್ತಿಕೊಂಡು ಎಸ್ಕೇಪ್!**

ಯಾವಾಗ ಇವರಿಬ್ಬರ ಬಣ್ಣ ಬಯಲಾಯಿತೋ, ಇಬ್ಬರೂ ಇಂಗು ತಿಂದ ಮಂಗನಂತೆ ಮೂಲೆ ಸೇರಿಕೊಂಡು ಮುಖ ಮುಚ್ಚಿಕೊಂಡು ಮಲಗಿದ್ದಾರೆ. ಅವಾಗ ನಾಗರಾಜ್ ಅವರು ಇಬ್ಬರಿಗೂ ಬುದ್ದಿ ಹೇಳಿ, ಇನ್ಮುಂದೆ ಹಲ್ಕಾ ಕೆಲಸವನ್ನು ಮುಂದುವರೆಸದಂತೆ ತಿಳಿ ಹೇಳಿದ್ದಲ್ಲದೆ, ಗಣೇಶನಿಗೆ ಗಂಟು ಮೂಟೆ ಕಟ್ಕೊಂಡು ನಿನ್ನ ಹೆಂಡತಿಯನ್ನು ಕರೆದುಕೊಂಡು ಜಾಗ ಖಾಲಿ ಮಾಡುವಂತೆ ಆದೇಶಿಸಿದ್ದಾರೆ. ಹೇಮಾ ತಂದೆ ಮಾತಿಗೆ ಬೆಲೆ ಕೊಟ್ಟು ಒಲ್ಲದ ಮನಸ್ಸಿನಿಂದಲೇ ಗಂಡನೊಡನೆ ಹೊರಟಿದ್ದಾಳೆ. ಐನಾತಿ ಮಮ್ಮಿ ಶಾಂತಳಿಗೆ ಹೀಗೇ ಆಗುತ್ತೆ ಅಂತ ಗೊತ್ತಿತ್ತು ಅನ್ಸುತ್ತೆ, ಅದಾಗಲೇ ಮನೆಯಲ್ಲಿದ್ದ ಚಿನ್ನ ಬಣ್ಣ ಹಣ ಎಲ್ಲವನ್ನೂ ಎತ್ತಿ ಗಂಟು ಮೂಟೆ ಕಟ್ಟಿ ಒಂದೆಡೆ ಇರಿಸಿದ್ದು, ಅಳಿಯ ಮಗಳು ಮನೆಯಿಂದ ಹೊರಟಾಗ, ಬೀಳ್ಕೊಟ್ಟು ಬರುವಂತೆ ನಟಿಸಿ ತಾನೂ ಬಸ್ ನಿಲ್ದಾಣದ ಕಡೆ ಅಳುತ್ತಾ..... ಅಳುತ್ತಾ... ಹೆಜ್ಜೆ ಹಾಕಿದ್ದಾಳೆ!

ಬಸ್ ನಿಲ್ದಾಣದಲ್ಲಿ ಹೇಮಾಳನ್ನು ಕೂರಿಸಿ ಏನೋ ತರುವವನಂತೆ ಡ್ರಾಮಾ ಆಡಿದ ಗಣೇಶ, ಅತ್ತೆ ಕರ್ಕೊಂಡು ಇನ್ನೊಂದು ಬಸ್ ಹತ್ತಿ ಎಸ್ಕೇಪ್ ಆಗಿದ್ದಾನೆ ಎನ್ನಲಾಗಿದೆ!!

ಈ ವಿಚಿತ್ರ ಹಾಗೂ ವಿಲಕ್ಷಣ ಕೇಸ್ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಪರಾರಿ ಆಗಿರುವ ಐನಾತಿ ಅತ್ತೆ ಅಳಿಯನಿಗಾಗಿ ಹುಡುಕುತ್ತಿದ್ದರು.



**ಮತ್ತೆ ಪ್ರತ್ಯಕ್ಷಳಾದಳು!**

ಈ ನಡುವೆ ಅಳಿಯನೊಂದಿಗೆ ಎಸ್ಕೇಪ್ ಆಗಿದ್ದಳು ಎನ್ನಲಾಗಿದ್ದ ಅತ್ತೆ ಶಾಂತ ಮುದ್ದೇನಹಳ್ಳಿಗೆ ವಾಪಸ್ ಬಂದಿದ್ದಾಳೆ! ಇಡೀ ರಾಜ್ಯದಲ್ಲೇ ಇವಳ ಸುದ್ದಿ ಬಿತ್ತರಗೊಂಡು ಮಾನ, ಮರ್ಯಾದೆ ಎಲ್ಲಾ ಹರಾಜು ಆಗಿರುವುದು ಗೊತ್ತೇ ಇದೆ. ಹೀಗಾಗಿ ಶಾಂತ ಒಂದು ವಿಡಿಯೋ ಹೇಳಿಕೆ ರಿಲೀಸ್ ಮಾಡಿದ್ದಾಳೆ.

ನಾನು ಎಲ್ಲಿಯೂ ಓಡಿ ಹೋಗಿರಲಿಲ್ಲ. ನನ್ನ ಗಂಡ ಮತ್ತು ಮನೆಯವರೆಲ್ಲಾ ಸೇರಿಕೊಂಡು ಇಲ್ಲ ಸಲ್ಲದ್ದ ಆಪಾದನೆ ಮಾಡಿ ನನ್ನ ಮರ್ಯಾದೆ ಕಳೆದಿದ್ದಾರೆ. ನನ್ನ ಅಳಿಯ ಗಣೇಶ ಎಲ್ಲಿದ್ದಾನೋ ಗೊತ್ತಿಲ್ಲ. ನನಗೂ ಅವನಿಗೂ ಅಕ್ರಮ ಸಂಬಂಧ ಇಲ್ಲ. ನನ್ನ ಗಂಡ ತುಂಬಾ ಸಾಲ ಮಾಡಿಕೊಂಡು ಅದನ್ನೆಲ್ಲಾ ನನ್ನ ತಲೆಗೆ ಕಟ್ಟಿದ್ದಾನೆ. ನನ್ನನ್ನು ಮನೆ ಬಿಟ್ಟು ಹೋಗುವಂತೆ ಮಾಡಿ ಸಾಲಗಾರರಿಗೆಲ್ಲಾ ನಾನೇ ಹೊಡೆದುಕೊಂಡು ಓಡಿ ಹೋಗಿರುವಂತೆ ಸುಳ್ಳು ಹೇಳಿದ್ದಾನೆ. ಇವನು ಮನೆಗೆ ಬೀಗ ಹಾಕಿ ಮೊದಲ ಪತ್ನಿಯೊಂದಿಗೆ ಮಜಾ ಮಾಡಿಕೊಂಡಿದ್ದಾನೆ.... ಎಂಬಿತ್ಯಾದಿಯಾಗಿ ಸದರಿ ವಿಡಿಯೋ ಹೇಳಿಕೆಯಲ್ಲಿ ತಿಳಿಸಿದ್ದಾಳೆ.



ಮುದ್ದೇನಹಳ್ಳಿ ಗ್ರಾಮದಲ್ಲಿ ಇನ್ನೊಂದು ಸಿನಿಮಾ ನಡೆಯುತ್ತಿದೆ. ಈ ಶಾಂತಳೇ ಊರು ತುಂಬಾ ಸಾಲ ಮಾಡಿ ಜನತೆಗೆ ವಂಚಿಸಿದ್ದಾಳೆ ಎಂಬ ಮಾಹಿತಿ ಇದ್ದು, ಹಣ ಕಳೆದುಕೊಂಡವರು ಚನ್ನಗಿರಿ ಪೊಲೀಸ್ ಠಾಣೆಗೆ ಅಲೆಯುತ್ತಿದ್ದಾರೆ! ಯಾರ ಮಾತು ನಿಜವೋ, ಯಾರ ಮಾತು ಸುಳ್ಳೋ ಎಂಬುದು ಪೊಲೀಸ್ ತನಿಖೆಯ ನಂತರವಷ್ಟೇ ಬಹಿರಂಗವಾಗಲಿದೆ.

**ಕುಡುಕ ಗಂಡನ ಕಾಟ ತಾಳಲಾರದ ಮಹಿಳೆಯೊಬ್ಬಳು ತನ್ನ ಮಕ್ಕಳೊಂದಿಗೆ ತವರುಮನೆ ಸೇರಿದಳು. ಹೆಂಡತಿ, ಮಕ್ಕಳಿಂದ ದೂರವಾಗಿದ್ದ ಗಂಡ, ಮನೆ ಬಿಟ್ಟು ಹೋಗಿ ನನಗೆ ಊರವರ ಮುಂದೆ ಅವಮಾನ ಮಾಡುತ್ತೀರ, ನೀವು ಮನೆಗೆ ವಾಪಸ್ಸು ಬರಲಿಲ್ಲ ಅಂದರೆ ನಿಮ್ಮ ಅಮ್ಮನನ್ನು ಸಾಯಿಸಿಬಿಡುವುದಾಗಿ ಮಕ್ಕಳಿಗೆ ಬೆದರಿಕೆ ಹಾಕಿ ಕರೆಸಿಕೊಂಡು, ನೀವು ಊರಿಗೆ ನಡೆಯಿರಿ ನಾನು ನಿಮ್ಮ ಅಮ್ಮ ಆಟೋದಲ್ಲಿ ಬರುತ್ತಿವೆಂದು ಹೇಳಿ ಬೆಟ್ಟಕ್ಕೆ ಕರೆದುಕೊಂಡು ಹೋಗಿ ಹೆಂಡತಿಯೊಂದಿಗೆ ಜಗಳ ಮಾಡಿ ಕತ್ತು ಕೊಯ್ದು ಪರಾರಿಯಾಗಿದ್ದ ಗಂಡ ಮುಂದಿನ ಪರಿಣಾಮವನ್ನು ಎದುರಿಸಲಾರದೆ ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕೋಲಾರ ತಾಲ್ಲೂಕಿನ ತೇರಹಳ್ಳಿಬೆಟ್ಟದಲ್ಲಿ ನಡೆದಿದೆ.**

# ಕೌಟಂಬಿಕ ಕಲಹ, ಪತ್ನಿಯನ್ನು ಕೊಂದು ತಾನೂ ಆತ್ಮಹತ್ಯೆ ಮಾಡಿಕೊಂಡು ಗಂಡ!

**ಕೋಲಾರ**

✍ ಕೋಲಾರ ಮಂಜು


ಲಲಿತಾ ಬದುಕಿದ್ದಾಗ

ಕರ್ನಾಟಕದ ದಕ್ಷಿಣ ಕಾಶಿ ಎಂದು ಪ್ರಸಿದ್ಧಿ ಪಡೆದಿರುವ ಕೋಲಾರದ ಶತಶೃಂಗ ಪರ್ವತ ಶ್ರೇಣಿಯಲ್ಲಿ ಸುಮಾರು ಏಳು ಗ್ರಾಮಗಳಿದ್ದು, ಮೊದಲನೇ ಊರು ತೇರಹಳ್ಳಿ ಗ್ರಾಮ, ಇಲ್ಲಿ ವಾಸವಾಗಿರುವ ಮುನಿರಾಜು ಈಗ್ಗೆ ಸುಮಾರು 23 ವರ್ಷಗಳ ಹಿಂದೆ ಹೊಸಕೋಟೆ ತಾಲ್ಲೂಕಿನ ನಂದಗುಡಿ ಹೋಬಳಿಗೆ ಸೇರಿದ ಹಿಂಡಿಗನಾಳ ಗ್ರಾಮದ ಲಲಿತ ಎಂಬುವವರನ್ನು ಮದುವೆಯಾಗಿದ್ದು, ಇವರಿಗೆ ಕಾವ್ಯ, ಭವ್ಯ ಮತ್ತು ಸಿಂಧು ಎಂಬ ಮೂರು ಹೆಣ್ಣು ಮಕ್ಕಳಿರುತ್ತಾರೆ. ಸ್ವಂತ ಆಟೋವನ್ನು ಇಟ್ಟುಕೊಂಡಿದ್ದ ಮುನಿರಾಜು ದಿನವು ಬೆಳಿಗ್ಗೆ ತೇರಹಳ್ಳಿಬೆಟ್ಟದಿಂದ ಕೋಲಾರ ನಗರಕ್ಕೆ ಬಂದು ಆಟೋ ಚಾಲನೆ ಮಾಡಿಕೊಂಡು ರಾತ್ರಿ ಬೆಟ್ಟದ ಮೇಲಿರುವ ಮನೆಗೆ ಹೋಗುತ್ತಿದ್ದರು. ಆಟೋ ಚಾಲನೆಯಿಂದ ಬರುವ ಆದಾಯದಲ್ಲಿಯೇ ತನ್ನ ಹೆಂಡತಿ ಮತ್ತು ಮೂರು ಹೆಣ್ಣು ಮಕ್ಕಳೊಂದಿಗೆ ಸುಖವಾಗಿ ಜೀವನ ಮಾಡಿಕೊಂಡಿದ್ದರು. ವರ್ಷಗಳು ಕಳೆಯುತ್ತಾ, ಮಕ್ಕಳು ದೊಡ್ಡವರಾಗುತ್ತಾ ಹೋದಂತೆ ಅವರ ವಿದ್ಯಾಭ್ಯಾಸ ಮತ್ತು ಮನೆಯ ಖರ್ಚು ವೆಚ್ಚಗಳು ಹೆಚ್ಚಾಗುತ್ತಾ ಹೋಯಿತು. ಇದರಿಂದ ಜೀವನ ನಡೆಸುವುದು ಕಷ್ಟವಾಯಿತು. ಆಗ ಗಂಡ ಮುನಿರಾಜು ಜೊತೆಗೆ ನಿಂತಿದ್ದು ಹೆಂಡತಿ ಲಲಿತಾ. ತಾನು ಟೈಲರ್ ಕೆಲಸ ಕಲಿತಿದ್ದರಿಂದ ಮನೆಯಲ್ಲಿಯೇ ಗ್ರಾಮದ ಹೆಣ್ಣು ಮಕ್ಕಳ ಬಟ್ಟೆ ಹೊಲಿಯುವ ಕೆಲಸ ಮಾಡುತ್ತಾ ಬರುವ ಹಣದಲ್ಲಿ ಮನೆಯ ಖರ್ಚುವೆಚ್ಚವನ್ನು ನಿಭಾಯಿಸಿಕೊಂಡು ಹೋಗುತ್ತಿದ್ದಳು. ದೊಡ್ಡ ಮಗಳು ಕಾವ್ಯ(22) ಮಾಲೂರಿನ ಕಾಲೇಜ್‌ವೊಂದರಲ್ಲಿ ಬಿಎಡ್ ವ್ಯಾಸಂಗ ಮಾಡುತ್ತಾ ಅಲ್ಲಿಯೇ ಹಾಸ್ಟೆಲ್‌ನಲ್ಲಿ ವಾಸವಾಗಿರುತ್ತಾರೆ. ಮೂರನೇ ಮಗಳು ಸಿಂಧು (17) ಕೋಲಾರದ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ಪ್ರಥಮ ಪಿಯುಸಿಯಲ್ಲಿ ವ್ಯಾಸಂಗ ಮಾಡುತ್ತಿರುತ್ತಾರೆ. ಎರಡನೇ ಮಗಳು ಭವ್ಯ (20) ದ್ವಿತೀಯ ಪಿಯು ನಂತರ ನರ್ಸಿಂಗ್ ಟ್ರೈನಿಂಗ್ ಮಾಡಿ ಕೋಲಾರ ನಗರದ ಬ್ರಾಹ್ಮಣರ ಬೀದಿಯಲ್ಲಿರುವ ನೂಕಪುರ ಆಸ್ಪತ್ರೆಯಲ್ಲಿ ಸ್ಟಾಫ್ ನರ್ಸ್ ಆಗಿ ಕೆಲಸ ಮಾಡುತ್ತಾ ಇದ್ದಾರೆ.

ತಾಯಿ ಲಲಿತಾ ಮತ್ತು ಮಗಳು ಭವ್ಯ ತಾವು ಕಷ್ಟಪಟ್ಟು ಸಂಪಾದನೆ ಮಾಡಿದ ಹಮದಲ್ಲಿ ಇಬ್ಬರು ಹೆಣ್ಣು ಮಕ್ಕಳ ವಿದ್ಯಾಭ್ಯಾಸ ಮತ್ತು ಮನೆಯ ಖರ್ಚುವೆಚ್ಚವನ್ನು ತೂಗಿಸಿಕೊಂಡು ಹೋಗುತ್ತಿದ್ದರು. ಮನೆ ಯಜಮಾನನಾದ ಮುನಿರಾಜು ಮನೆ ಖರ್ಚಿಗೆ ಹಣ ಕೊಡದೆ ಈ ದಿನ ಆಟೋ ರಿಪೇರಿ ಮಾಡಿಸಿದೆ, ಈ ದಿನ ಸಂಪಾದನೆಯಾಗಿಲ್ಲ ಎಂದು ಕುಂಟು ನೆಪ ಹೇಳಿಕೊಂಡು ದಿನಗಳನ್ನು ಕಳೆಯುತ್ತಿದ್ದರು. ಇದರ ಜೊತೆಗೆ ಮುನಿರಾಜು ತನ್ನ ಕೆಲವು ಆಟೋ ಸ್ನೇಹಿತರ ಜೊತೆ ಸೇರಿ ಮದ್ಯಪಾನದ ಚಟವನ್ನು ಬೆಳೆಸಿಕೊಂಡಿದ್ದನು. ಕೋಲಾರದಿಂದ ರಾತ್ರಿ ಮನೆಗೆ ಬರುವಾಗ ಮದ್ಯಪಾನ ಮಾಡಿಕೊಂಡು ಬರುತ್ತಿದ್ದರು. ಕುಡಿದ ನಶೆಯಲ್ಲಿ ಮನೆಗೆ ಬಂದವನು ಹೆಂಡತಿ, ಮಕ್ಕಳು ಮಾಡಿರುವ ಊಟವನ್ನು ತಿಂದು ತೆಪ್ಪಗೆ ಮಲಗುವ ಬದಲಿಗೆ ನಾನು ಈ ಮನೆ ಯಜಮಾನ ನನಗೆ ಸೊಪ್ಪುಸಾರು, ಬೇಳೆ ಸಾರು ಬಡಿಸುತ್ತೀರಾ, ಈ ದಿನ ನನಗೆ ಮಾಂಸ ಅಥವಾ ಮೀನಿನ ಊಟ ಬೇಕು. ಅಡಿಗೆ ಮಾಡಿ ಬಡಿಸಿ ಎಂದು ಹೇಳಿ ಹೆಂಡತಿ, ಮಕ್ಕಳನ್ನು ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡುವುದಲ್ಲದೆ ಕ್ಕಪಕ್ಕದ ಮನೆಯವರಿಗೆ ಕೇಳಿಸುವಂತೆ ಜೋರಾಗಿ ಗಲಾಟೆ ಮಾಡುತ್ತಿದ್ದನು. ಕೇಳಿದ ತಕ್ಷಣ ತಂದು ಮಾಡಲು ಕೋಲಾರದಲ್ಲಿಲ್ಲ ನಾವು ಇರುವುದು ಬೆಟ್ಟದ ಮೇಲೆ. ಈ ಹಳ್ಳಿಯಲ್ಲಿ ಮಾಂಸ, ಮೀನು ಸಿಗುವುದಿಲ್ಲ. ಮೊಟ್ಟೆ ಸಾರು ಮಾಡುವುದಾಗಿ ಹೇಳಿ ಹಳ್ಳಿಯಲ್ಲಿರುವ ಚಿಲ್ಲರೆ ಅಂಗಡಿಯಿಂದ ಮೊಟ್ಟೆ ತಂದು ಸಾರು ಮಾಡಿ ಊಟ ಬಡಿಸಿದರೆ, ತಿನ್ನದೆ ಮಾಂಸ ಮಾಡಿ ಎಂದು ಹೇಳಿದರೆ ಮೊಟ್ಟೆ ಮಾಡಿದ್ದೀರ, ನನಗೆ ಊಟ ಬೇಡ ತಾಯಿ, ಮಕ್ಕಳು ತಿಂದು ಸಾಯಿಸಿ ಎಂದು ಹೇಳಿ ಕುಡಿದ ನಶೆಯಲ್ಲಿ ಮಲಗಿಬಿಡುತ್ತಿದ್ದನು. ಇದೇ ರೀತಿ ವಾರದಲ್ಲಿ ಎರಡು, ಮೂರು ದಿನ ಊಟದ ವಿಷಯ ತೆಗೆದುಕೊಂಡು ಗಲಾಟೆ ಮಾಡುತ್ತಿದ್ದನು. ಗಂಡನ ನಡತೆಯಿಂದ ಬೇಸತ್ತಿದ್ದ ಹೆಂಡತಿ ಲಲಿತಾ ಮಾವ ಮತ್ತು ದೊಡ್ಡ ಮಾವನಿಗೆ ನಡೆಯುತ್ತಿರುವ ವಿಚಾರವನ್ನು ಹೇಳಿ ಮುನಿರಾಜನನ್ನು ಸರಿದಾರಿಗೆ ತರಲು ನೋಡಿದರು. ಆದರೆ ಏನೂ ಪ್ರಯೋಜನವಾಗಲಿಲ್ಲ. ಆದರೆ ಇದರ ಬದಲಿಗೆ ಹೆಂಡತಿ,



ಎಸ್ಪಿ ಬಿ. ನಿಖಿಲ್


ಎಎಸ್ಪಿ ರವಿಶಂಕರ್

ಮಕ್ಕಳ ಮೇಲೆ ದ್ವೇಷ ಹೆಚ್ಚಾಗುತ್ತಾ ಹೋಯಿತು. ಕುಡುಕ ಮುನಿರಾಜುಗೆ ಎಷ್ಟೇ ಬುದ್ಧಿ ಹೇಳಿಸಿದರೂ ಮದ್ಯಪಾನ ಮಾಡುವುದನ್ನು ಮಾತ್ರ ಬಿಟ್ಟಿರುವುದಿಲ್ಲ, ದಿನವೂ ಹೆಂಡತಿ, ಮಕ್ಕಳ ಮೇಲೆ ದೌಜನ್ಯ ಮಾತ್ರ ತಪ್ಪಲಿಲ್ಲ.

### ತಾಯಿ ಕೊಲೆ ಬಗ್ಗೆ ಮಗಳಿಂದ ದೂರು


ಡಿವೈಎಸ್ಪಿ ನಾಗ್ತೆ


ಪಿಐ ಕೆ. ಕಾಂತರಾಜ್

ಲಲಿತಾರವರ ಎರಡನೇ ಮಗಳು ಭವ್ಯ (20) ಜೂನ್ 4ರಂದು ಕೋಲಾರ ಗ್ರಾಮಾಂತರ ಪೊಲೀಸ್ ಠಾಣೆಗೆ ಹಾಜರಾಗಿ ಆಟೋ ಚಾಲಕರಾದ ನಮ್ಮ ತಂದೆ ಮುನಿರಾಜು (45) ರವರು ಪ್ರತಿದಿನ ಮದ್ಯಪಾನ ಮಾಡಿಕೊಂಡು ಮನೆಗೆ ಬಂದು ನಮ್ಮ ತಾಯಿ ಮತ್ತು ನಮ್ಮ ಮೇಲೆ ಗಲಾಟೆ ಮಾಡುತ್ತಿದ್ದರು. ನಾವು ಎಷ್ಟೇ ಬುದ್ಧಿ ಹೇಳಿದರೂ ಸಹ ನಮ್ಮ ತಂದೆ ಮದ್ಯಪಾನ ಮಾಡಿರುವುದನ್ನು ಮಾತ್ರ ಬಿಟ್ಟಿರುವುದಿಲ್ಲ. ಈಗ್ಗೆ ಎಂಟು ದಿನಗಳ ಹಿಂದೆ ನಮ್ಮ ತಂದೆ ಮದ್ಯಪಾನ ಮಾಡಿಕೊಂಡು ಮನೆಗೆ ಬಂದು ಊಟದ ವಿಚಾರದಲ್ಲಿ ನಮ್ಮ ತಾಯಿ ಮೇಲೆ ಜಗಳ ಮಾಡಿ ಹೊಡೆಯುತ್ತಿದ್ದರು. ಜಗಳ ಬಿಡಿಸಲು ಹೋದ ನನ್ನ ಹಾಗೂ ನನ್ನ ತಂಗಿಯನ್ನು ನಮ್ಮ ತಂದೆ ಕೈಗಳಿಂದ ಹೊಡೆದರು. ಇದೇ ರೀತಿ ದಿನವು ನಮ್ಮ ತಂದೆ ಕುಡಿದು ಬಂದು ನಮ್ಮ ಮೇಲೆ ಗಲಾಟೆ ಮಾಡುತ್ತಿದ್ದರಿಂದ ಬೇಸತ್ತಿದ್ದ ನಾವು ತಾಯಿಯೊಂದಿಗೆ ನಮ್ಮ ಮನೆ ಬಿಟ್ಟು ಹೊಸಕೋಟೆ ತಾಲ್ಲೂಕಿನ ಹಿಂಡಿಗನಾಳದಲ್ಲಿರುವ ತಾಯಿ ತವರುಮನೆಗೆ ಹೋಗಿದ್ದು, ನಾನು ಮತ್ತು ನನ್ನ ತಂಗಿ ಸಿಂಧು ಪ್ರತದಿನ ಹಿಂಡಿಗನಾಳ ಗ್ರಾಮದಿಂದಲೇ ಕೋಲಾರಕ್ಕೆ ಬಂದು ನಾನು ಆಸ್ಪತ್ರೆಗೆ ಹಾಗೂ ತಂಗಿ ಸಿಂಧು ಕಾಲೇಜಿಗೆ ಹೋಗಿ ನಂತರ ಸಂಜೆ ಇಬ್ಬರು ಒಟ್ಟಿಗೆ ಹಿಂಡಿಗನಾಳ ಗ್ರಾಮಕ್ಕೆ ಹೋಗುತ್ತಿದ್ದೆವು. ಹೀಗಿರುವಲ್ಲಿ ಜೂನ್ 2ರಂದು ಕೋಲಾರದ ಸಾರಿಗೆ ಸಂಸ್ಥೆ ಬಸ್ ನಿಲ್ದಾಣದಲ್ಲಿ ಬಸ್ಸಿಗಾಗಿ ಕಾದಿದ್ದಾಗ ನಮ್ಮ ತಂದೆ ಮುನಿರಾಜುರವರು ನನ್ನನ್ನು ಭೇಟಿ ಮಾಡಿ ಮಗಳೇ ನೀವು ನನ್ನನ್ನು ಬಿಟ್ಟು ಹೋಗಿದ್ದಾಗಿನಿಂದ ನನಗೆ ಊಟ, ಬಟ್ಟೆಗೆ ತುಂಬಾ ತೊಂದರೆಯಾಗಿದೆ. ತಾಯಿಯನ್ನು ಕರೆದುಕೊಂಡು ನನ್ನ ಮನೆಗೆ ವಾಪಸ್ಸು ಬರುವಂತೆ ಹೇಳಿದರು. ಅದಕ್ಕೆ ನಾವು ಬರುವುದಿಲ್ಲ. ಮಾವನ ಮನೆಯಲ್ಲಿ ನೆಮ್ಮದಿಯಾಗಿ ಇದ್ದೇವೆಂದು ಹೇಳಿದಕ್ಕೆ ತಂದೆ ಕೋಪ ಮಾಡಿಕೊಂಡು ನನಗೆ ಊರವರ ಮುಂದೆ ಅವಮಾನ ಮಾಡುತ್ತೀರ. ನೀವು ಮನೆಗೆ ವಾಪಸ್ಸು ಬರಲಿಲ್ಲ ಅಂದರೆ ನಿಮ್ಮ ಅಮನನ್ನು ಸಾಯಿಸಿ ನಿಮಗೆ ಅಮ್ಮನಿಲ್ಲದಂತೆ ಮಾಡುವುದಾಗಿ ಬೆದರಿಕೆ ಹಾಕಿದರು. ಇದರಿಂದ ಭಯವಾಗಿರುವುದಲ್ಲದೆ ಅಮ್ಮನನ್ನು ಕಳೆದುಕೊಳ್ಳಬೇಕಾಗುವುದೆಂದು ಯೋಚಿಸುತ್ತಿರುವಾಗ ತಂದೆ ಮತ್ತೊಮ್ಮೆ ಮಾತನಾಡಿ ನಾನು ನಿಮ್ಮ ಕಾಲಿಗೆ ಬೀಳ್ತೀನಿ ಮನೆಗೆ ವಾಪಸ್ಸು ಬನ್ನಿ ಇನ್ನು ಮುಂದೆ ಕುಡಿಯೋದಿಲ್ಲ. ನಿಮ್ಮನ್ನೆಲ್ಲ ಚೆನ್ನಾಗಿ ನೋಡಿಕೊಳ್ಳುತ್ತೇನೆಂದು ಕೇಳಿಕೊಂಡರು. ನಂತರ ನಿಮ್ಮ ತಾಯಿ ಜೊತೆ ಮಾತನಾಡುತ್ತೇನೆ ಫೋನ್ ಮಾಡಿಕೊಡಿ ಎಂದು ಹೇಳಿದರು. ಅದರಂತೆ ನಾನು ನನ್ನ ಫೋನ್‌ನಿಂದ ತಾಯಿಗೆ ಫೋನ್ ಮಾಡಿ ತಂದೆಗೆ ಕೊಟ್ಟೆನು. ಆಗ ಅವರು ಮಾತನಾಡುತ್ತಾ ನಾನು ಇನ್ನು ಮುಂದೆ ಕುಡಿಯೋದಿಲ್ಲ. ನಿಮ್ಮಗಳೊಂದಿಗೆ ಜಗಳ ಮಾಡೋದಿಲ್ಲ. ಲಲಿತಾ ಮಕ್ಕಳೊಂದಿಗೆ ಮಾತನಾಡಿಕೊಂಡು ಮನೆಗೆ ಬಂದುಬಿಡು ಎಂದು ಹೇಳಿದರಲ್ಲದೆ ಅಲ್ಲಿಯೇ ಇದ್ದ ತಂಗಿ ಸಿಂಧು ಜೊತೆ ಮಾತನಾಡಿ ಅಮ್ಮನನ್ನು ಕರೆದುಕೊಂಡು ಬಾರಮ್ಮ ನಿನ್ನನ್ನು ನೋಡಬೇಕೆಂಬ ಆಸೆಯಾಗುತ್ತಿದೆ ಎಂದು ಹೇಳಿ ಕಣ್ಣೀರಿಟ್ಟರು. ತಂದೆ ಮುನಿರಾಜು ರವರ ಮರಳು ಮಾತುಗಳನ್ನು ನಂಬಿ ಜೂನ್ 4ರಂದು ಬೆಳಿಗ್ಗೆ ತಾಯಿಯೊಂದಿಗೆ ಮನೆಗೆ ಬರುವುದಾಗಿ ಹೇಳಿದ್ದೆವು. ಅದರಂತೆ ಅಕ್ಕ ಕಾವ್ಯ, ತಂಗಿ ಸಿಂಧು ಹಾಗೂ ತಾಯಿ ಜೊತೆ ಮಾತನಾಡಿಕೊಂಡು ಜೂನ್ 4ರಂದು ಮಧ್ಯಾಹ್ನ ತಂದೆ ಮುನಿರಾಜು ರವರಿಗೆ ಫೋನ್ ಮಾಡಿ ಕೋಲಾರಕ್ಕೆ ತಾಯಿಯನ್ನು ಕರೆದುಕೊಂಡು ಬರುತ್ತಿದ್ದೇವೆ. ನಂತರ ಎಲ್ಲರೂ ಒಟ್ಟಿಗೆ ಊರಿಗೆ ಹೋಗೋಣವೆಂದು ಹೇಳಿದೆನು. ಅದರಂತೆ ನಾನು ನನ್ನ ದ್ವಿಚಕ್ರ ವಾಹನದಲ್ಲಿ ನನ್ನ ತಾಯಿ ಲಲಿತಾರವರನ್ನು ಹಿಂಡಿಗನಾಳದಿಂದ ಕರೆದುಕೊಂಡು ಕೋಲಾರದ ಮಾಲೂರು ಜಿಗ್‌ಜಾಗ್ ಬಳಿ ಬಂದೆವು. ನನ್ನ ತಂಗಿ ಸಿಂಧು ಕಾಲೇಜು ಮುಗಿಸಿಕೊಂಡು ಬೆಟ್ಟಗ್ಗೆ ಹೋಗುವ ಬಸ್ಸಿನಲ್ಲಿ ಬಂದು ನಾನು ಇರುವ ಜಾಗದಲ್ಲಿ ಇಳಿದುಕೊಂಡಳು. ನಂತರ ನಮ್ಮ ತಂದೆ ಫೋನ್ ಮಾಡಿ ಸಂಜೆ 4.30 ಗಂಟಗೆ ನಾವು ಇದ್ದ ಸ್ಥಳಕ್ಕೆ ಬರುತ್ತಿವೆಂದು ಹೇಳಿದರು. ಅದರಂತೆ ಹೇಳಿದ ಸಮಯಕ್ಕೆ ಬಂದ ತಂದೆಯವರು ನೀನು ದ್ವಿಚಕ್ರ ವಾಹನದಲ್ಲಿ ಊರಿಗೆ ಹೋಗು ನಿಮ್ಮ ತಾಯಿ ಮತ್ತು ತಂಗಿ ಸಿಂಧುಳನ್ನು ಆಟೋದಲ್ಲಿ ಕರೆದುಕೊಂಡು ಬರುವುದಾಗಿ ಹೇಳಿ ಅವರಿಬ್ಬರನ್ನು ಆಟೋದಲ್ಲಿ ಕುಳ್ಳಿರಿಸಿಕೊಂಡು ತಂದೆ ಆಟೋವನ್ನು ಜೋರಾಗಿ ಚಾಲನೆ ಮಾಡಿಕೊಂಡು ಹೋಗುತ್ತಿದ್ದರು. ನಾನು ಆಟೋವನ್ನು ಹಿಂಬಾಲಿಸಿಕೊಂಡು ಹೋಗುತ್ತಿದ್ದೆನು. ಆಗ ನನ್ನ ತಂಗಿ ಸಿಂಧು ಬೆಟ್ಟಕ್ಕೆ ಹೋಗುವ ರಸ್ತೆಯಲ್ಲಿರುವ ಮಹಾಲಕ್ಷ್ಮಿ ಲೇಔಟ್‌ನ ಚಿಲ್ಲರೆ ಅಂಗಡಿ ಬಳಿ ಆಟೋದಿಂದ ಇಳಿದು ಹಾಲು ತರಲು ಮುಂದೆ ಹೋಗುತ್ತಿದ್ದಂತೆ ನಮ್ಮ ತಂದೆ ಮುನಿರಾಜುರವರು ಸಿಂಧುಳನ್ನು ಅಲ್ಲಿಯೇ ಬಿಟ್ಟು ನಮ್ಮ ತಾಯಿಯೊಂದಿಗೆ ಆಟೋವನ್ನು ಜೋರಾಗಿ ಚಾಲನೆ ಮಾಡಿಕೊಂಡು ಹೊರಟು ಹೋದರು. ಆಗ ನಾನು ತಂಗಿ ಸಿಂಧುಳನ್ನು ಕರೆದುಕೊಂಡು ದ್ವಿಚಕ್ರ ವಾಹನದಲ್ಲಿ ಆಟೋವನ್ನು ಹಿಂಬಾಲಿಸಿಕೊಂಡು ಹೋದೆವು. ಆದರೆ ಆಟೋ ನಮಗೆ ಕಾಣದಂತೆ ತೇರಹಳ್ಳಿಬೆಟ್ಟದ ಕಡೆ ಹೊರಟು ಹೋಯಿತು. ನಾವಿಬ್ಬರು ತೇರಹಳ್ಳಿಯಲ್ಲಿರುವ ಮನೆಗೆ ಹೋಗಿ ನೋಡಲಾಗಿ ನಮ್ಮ ತಾಯಿ ಮತ್ತು ತಂದೆ ಮನೆ ಬಳಿ ಇರಲಿಲ್ಲ. ಬಾಗಿಲಿಗೆ ಬೀಗ ಹಾಕಿತ್ತು. ಕೂಡಲೇ ನಾವು ತಂದೆ, ತಾಯಿಯನ್ನು ಹುಡುಕಿಕೊಂಡು ತೇರಹಳ್ಳಿಯಿಂದ ಬೆಟ್ಟದ ಹೊಸಹಳ್ಳಿ ಕಡೆ ಹೋಗಿ ಸಂಜೆ 5 ಗಂಟೆ ಸಮಯದಲ್ಲಿ ಹುಡುಕಾಡುತ್ತಿರುವಾಗ ಮುಂದೆ ರಸ್ತೆಯಲ್ಲಿ ಆಟೋ ನಿಂತಿತ್ತು. ಅದರ ಸುತ್ತ ಜನರ ಗುಂಪು ಸೇರಿದ್ದು, ಇದನ್ನು ನೋಡಿದ ನಮಗೆ ಗಾಬರಿಯಾಗಿ ಹತ್ತಿರಕ್ಕೆ ಹೋಗಿ ನೋಡಲಾಗಿ ಕೆಎ-03 ಎಸಿ-7551 ಸಂಖ್ಯೆಯ ಆಟೋ ಇದು ನಮ್ಮದಾಗಿತ್ತು. ರಸ್ತೆಬದಿಯಲ್ಲಿ ನಮ್ಮ ತಾಯಿ ರಕ್ತದ ಮಡುವಿನಲ್ಲಿ ಬಿದ್ದಿದ್ದರು. ಅವರ ಕುತ್ತಿಗೆಯಲ್ಲಿ ಯಾವುದೋ ಹರಿತವಾದ ಆಯುಧದಿಂದ ಕುಯ್ದಿರುವ ರಕ್ತಗಾಯವಾಗಿತ್ತು. ಆಟೋದಲ್ಲಿ ಹಿಂದಿನ ಸೀಟ್ ಮೇಲೆ ರಕ್ತ ಸುರಿದಿತ್ತು. ಆಟೋವಿನ ಪಕ್ಕದಲ್ಲಿ ಒಂದು ಚಾಕು ಬಿದ್ದಿತ್ತು. ತಾಯಿ ಬಳಿಗೆ ಹೋಗಿ ನೋಡಲಾಗಿ ಅವರು ಮೃತಪಟ್ಟಿದ್ದರು. ಆ ಸಮಯದಲ್ಲಿ ತಂದೆ ಮುನಿರಾಜುರವರು ಕಾಣಲಿಲ್ಲ. ತಾಯಿ ಲಲಿತಾರವರು ತಂದೆಯನ್ನು ಬಿಟ್ಟು ಅವರ ತವರುಮನೆ ಸೇರಿದಕ್ಕೆ ಕೋಪಗೊಂಡು ಕೊಲೆ ಮಾಡುವ ಉದ್ದೇಶದಿಂದ ನಂಬಿಸಿ ಕರೆಸಿಕೊಂಡು ಕೊಲೆ ಮಾಡಿ ಪರಾರಿಯಾಗಿರುವ ನಮ್ಮ ತಂದೆ ಮುನಿರಾಜುರವರನ್ನು ಬಂಧಿಸಿ ಅವರ ಮೇಲೆ ಕಾನೂನು ಕ್ರಮ ಜರುಗಿಸುವಂತೆ ದೂರು ನೀಡಿದರು.


ಆರೋಪಿ ಮುನಿರಾಜು


ನೇಣಿನ ಕುಣಿಕೆಯಲ್ಲಿ ಮುನಿರಾಜು



ಮುನಿರಾಜುವಿನ ಆಟೋ

### ಆತ್ಮಹತ್ಯೆ ಮಾಡಿಕೊಂಡ ಮುನಿರಾಜು

ಮೃತ ಲಲಿತಾರವರ ಮಗಳು ಭವ್ಯ ನೀಡಿದ ದೂರಿನ ಅನ್ವಯ ಮೊ.ಸಂ. 224/2025 ಕಲಂ 103 ಬಿಎನ್‌ಎಸ್ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು

☞ 12


ಕೊಲೆಯಾದ ಲಲಿತಾ


ತೇರಹಳ್ಳಿ ರಸ್ತೆ


ಕೊಲೆ ನಡೆದ ಸ್ಥಳವನ್ನು ಪರಿಶೀಲಿಸುತ್ತಿರುವ ಪೊಲೀಸ್ ಅಧಿಕಾರಿಗಳು

# ಇನ್ಫೋಸಿಸ್ ಕಾಮುಕ ಟೆಕ್ಕಿ ಶೌಚಾಲಯದಲ್ಲಿ...ಸಿಕ್ಕಿಬಿದ್ದ!

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಇನ್ಫೋಸಿಸ್ ಕ್ಯಾಂಪಸ್‌ನ ಶೌಚಾಲಯದೊಳಗೆ ಮಹಿಳೆಯೊಬ್ಬರು ಮೂತ್ರ ವಿಸರ್ಜಿಸುತ್ತಿರುವಾಗ, ಕಾಮುಕ ಟೆಕ್ಕಿಯೊಬ್ಬ ಪಕ್ಕದ ಶೌಚಾಲಯದ ಕಮೋಡ್ ಮೇಲೆ ನಿಂತು ಕದ್ದು ನೋಡ್ತಾ ಹಸ್ತಮೈಥುನ ಮಾಡಿಕೊಳ್ತಾ ಆಕೆಯ 'ಅದನ್ನು' ತನ್ನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡ್ತಿದ್ದು,ಆಕೆ ಅವನನ್ನು ನೋಡಿ ಕಿರುಚಿಕೊಂಡು ಹೊರಗೆ ಓಡಿ ಬಂದು ಪೊಲೀಸ್ ಕಂಪ್ಲೇಂಟ್ ಕೊಟ್ಟಿದ್ದು,ಈ ಆರೋಪದ ಮೇಲೆ ಕಾಮುಕ ಟೆಕ್ಕಿಯನ್ನ ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಬಂಧಿಸಿದ್ದಾರೆ.


ಆರೋಪಿ ಸ್ವಪ್ನಿಲ್ ನಾಗೇಶ್ ಮಲಿ

### ಸ್ವಪ್ನಿಲ್ ನಾಗೇಶ್ ಮಲಿ!

ಬಂಧಿತ ಆರೋಪಿಯನ್ನು ಆಂಧ್ರಪ್ರದೇಶ ಮೂಲದ ಸ್ವಪ್ನಿಲ್ ನಾಗೇಶ್ ಮಲಿ(28) ಎಂದು ಗುರುತಿಸಲಾಗಿದೆ. ಸ್ವಪ್ನದಲ್ಲೂ ಕಾಮ ಜಪ ಮಾಡ್ತಿದ್ದ ಈ ನಾಗೇಶ, ತಾನು ಪ್ರತಿಷ್ಠಿತ ಇನ್ಫೋಸಿಸ್ ಸಂಸ್ಥೆಯಲ್ಲಿದ್ದೇನೆ ಎಂಬುದನ್ನು ಮರೆತು ಹಲ್ಕಟ್ ಕೆಲಸ ಮಾಡಿ, ಈಗ ಇಡೀ ವಿಶ್ವದಲ್ಲೇ ಇನ್ಫೋಸಿಸ್ ಮರ್ಯಾದೆಯನ್ನು ಹರಾಜಿಗೆ ಇಟ್ಟಿದ್ದಾನೆ!

ಕಾಮುಕ ಹೇಗೋ ಮಹಿಳಾ ಶೌಚಾಲಯ ಹೊಕ್ಕಿ, ಪಕ್ಕದ ಕಮೋಡ್ ಮೇಲೆ ನಿಂತುಕೊಂಡು ಮೇಲಿಂದ ಕೆಳಗೆ ಇಣುಕಿ ನೋಡಿದ್ದಲ್ಲದೆ, ಮೂತ್ರ ಮಾಡಲು ಬಂದ ಮಹಿಳಾ ಉದ್ಯೋಗಿಯ ವಿಡಿಯೋ ರೆಕಾರ್ಡ್ ಮಾಡಿ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾನೆ. ಪಕ್ಕದ ಶೌಚಾಲಯದ ಕಮೋಡ್ ಮೇಲೆ ನಿಂತುಕೊಂಡು ರಹಸ್ಯವಾಗಿ ರೆಕಾರ್ಡ್ ಮಾಡುತ್ತಿದ್ದ ಈತ ಆ ಮಹಿಳೆಗೆ ಕಂಡಿದ್ದು ಹೇಗೆಂದರೆ, ಎದುರುಗಡೆ ಡೋರ್ ಮೇಲೆ ಇವನ ಪ್ರತಿಬಿಂಬ ಮೂಡಿದ್ದು ಅದು ಆಕೆಗೆ ಭೂತದಂತೆ ಕಂಡಿದೆ!




ವಿಕಾರವಾಗಿ ಕಂಡ ನೆರಳನ್ನು ನೋಡಿ ಹೌಹಾರಿ ಮೇಲೆ ಅಂತು ನೋಡಿದ್ರೆ, ಪಾಪಿ ನಾಗೇಶ ಪ್ಯಾಂಟ್ ಜಾರಿಸಿ.... ಮೊಬೈಲ್‌ನಲ್ಲಿ ಶೂಟಿಂಗ್ ಮಾಡ್ತಾ ಇದ್ದ ದೃಶ್ಯ! ಆಕೆ ಕೂಡಲೇ ಬಟ್ಟೆ ಕಟ್ಟಿಕೊಂಡು ಹೊರ ಓಡಿ ಬಂದು ನೋಡಿದಾಗ ಅಲ್ಲೊಬ್ಬ ಯುವತಿ ನಿಂತಿದ್ದಳು.ಅವಳನ್ನು ತಡೆದು ರೂಮ್ ಬಾಗಿಲು ತೆರೆದಾಗ ನಾಗೇಶನ ಇನ್ನಷ್ಟು ಅವಾಂತರ ಕಂಡಿದೆ.

### ಕ್ಷಮೆ ಕೇಳಿದ-ಕಂಪ್ಲೇಂಟ್ ಆಯ್ತು!

ಈ ವೇಳೆ ಆ ಮಹಿಳಾ ಉದ್ಯೋಗಿ ಅವನಿಗೆ ಹಿಗ್ಗಾಮುಗ್ಗ ಜಾಡಿಸಿದಾಗ, ನಾಗೇಶ್ ಅಲ್ಲಿಯೇ ಕೈ ಮುಗಿದು ಕ್ಷಮೆ ಕೇಳಿದ್ದಾನೆ. ಈ ಹಂತದಲ್ಲಿ ಇನ್ಫೋಸಿಸ್ ಎಚ್‌ಆರ್ ಹಾಗೂ ಸಿಬ್ಬಂದಿಗಳು ಅಲ್ಲಿಗೆ ಧಾವಿಸಿ ಬಂದು, ಅವನ ಮೊಬೈಲ್ ಕಿತ್ತುಕೊಂಡು ಪರಿಶೀಲನೆ ಮಾಡಿದಾಗ ಆ ವಿಡಿಯೋ ಪತ್ತೆಯಾಗಿದೆ! ಅದಲ್ಲದೆ, ಸುಮಾರು 30ಕ್ಕೂ ಮಹಿಳೆಯರ ಬ್ಲೂ ಫಿಲಂಸ್ ಪತ್ತೆಯಾಗಿದೆ ಎನ್ನಲಾಗಿದೆ!!

ಆಡಳಿತ ಮಂಡಳಿ ಕಾಮುಕ ನಾಗೇಶನ ವಿರುದ್ಧ ಕ್ರಮ ತೆಗೆದುಕೊಳ್ಳುವ ಮುನ್ನವೇ ನೊಂದ ಮಹಿಳೆ ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಸದರಿ ದೂರನ್ನು ಆಧರಿಸಿ ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಇನ್ಸ್‌ಪೆಕ್ಟರ್ ಜಿ.ಎಂ. ನವೀನ್ ಆರೋಪಿಯನ್ನು ಬಂಧಿಸಿ, ಆತ ಸ್ವಪ್ನದಲ್ಲೂ ಉಚ್ಚೆ ಉಯ್ದುಕೊಳ್ಳಬೇಕು ಹಾಗೆ 'ರಿಪೇರಿ' ಮಾಡಿ ಜೈಲಿಗೆ ಕಳುಹಿಸಿದ್ದಾರೆ.

ಅಂದಹಾಗೆ, ಕಾಮುಕ ಸ್ವಪ್ನಿಲ್ ನಾಗೇಶ್ ಮಲಿ ಇನ್ಫೋಸಿಸ್ ಕಂಪನಿಯ ಹೀಲೀಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಸೀನಿಯರ್ ಅಸೋಸಿಯೇಟ್ ಕನ್ಸಲ್ಟೆಂಟ್ ಆಗಿ ಕೆಲಸ ಮಾಡುತ್ತಿದ್ದ! ಇದೀಗ ಇವನಿಗೆ 'ಬಡ್ತಿ' ಸಿಕ್ಕಿದ್ದು, ಪರಪ್ಪನ ಅಗ್ರಹಾರ ಅತಿಥಿ ಗೃಹಕ್ಕೆ ವರ್ಗಾವಣೆಯಾಗಿದೆ!! ☯



# ಹೆಂಡತಿಯನ್ನು ಕೊಲೆ ಮಾಡಿ ಪ್ರಕರಣ ದಿಕ್ಕು ತಪ್ಪಿಸಲೆತ್ನಿಸಿದ ಖತರ್ನಾಕ್ ಗಂಡ!

ಚಾಮರಾಜನಗರ

✍ ಎಸ್. ಸ್ವಾಮಿ

ತೋಟದ ಮನೆಯ ಮುಂದಿನ ರಸ್ತೆಯಲ್ಲಿ ರಕ್ತದ ಮಡುವಿನಲ್ಲಿ ಅಂಗಾತ ಮಲಗಿ ಹೆಣವಾಗಿದ್ದಳು ಗೃಹಿಣಿ. ಒಬ್ಬಂಟಿಯಾಗಿದ್ದ ಹೆಂಡತಿಯನ್ನು ರಾಡಿನಿಂದ ಬಡಿದುಕೊಂದಿದ್ದ ಖತರ್ನಾಕ್ ಗಂಡ ತನ್ನ ಮೇಲೆ ಅನುಮಾನ ಬಾರದಿರಲೆಂದು ಬುದ್ಧಿವಂತಿಕೆ ತೋರಿದ್ದ. ಕೊಲೆ ಮಾಡಿ ಪ್ರಕರಣದಿಂದ ತಪ್ಪಿಸಿ ಕೊಳ್ಳಲು ಪಕ್ಕದ ಮನೆಯವನ ಮೇಲೆ ಆರೋಪ ಹೊರೆಸಲು ಆಕೆಯನ್ನು ಕೊಲ್ಲುವ ಇಂದಿನ ದಿನವೇ ಹೆಂಡತಿಯ ಸಾಲಗಾರರಿಂದ ತಮಗೆ ಜೀವಭಯವಿದೆ ಅಂತ ಒಂದು ಪತ್ರ ಬರೆಸಿದ್ದ. ಕೊಲೆ ಮಾಡಿದ ನಂತರ ಅದನ್ನೇ ಆಕೆಯ ಡೆತ್‌ನೋಟ್‌ಥರ ಬಳಸಿಕೊಂಡು ಎಲ್ಲರನ್ನು ಯಾಮಾರಿಸಲು ಹೊರಟಿದ್ದ ಪತ್ನಿ ಹಂತಕ ಅಂದು ತನ್ನ ಪತ್ನಿಯನ್ನು ಕೊಂದು ಅಮಾಕನಂತೆ ನಟಿಸಿದ್ದ. ಇನ್ನೇನು ಪ್ರಕರಣದಿಂದ ತಪ್ಪಿಸಿಕೊಂಡೆ ಎಂದು ಹುಸಿನಗೆ ಬೀರುವಷ್ಟರಲ್ಲಿ ಚಾಮರಾಜನಗರ ಪೂರ್ವಠಾಣೆ ಪಿಐ ನವೀನ್ ಮತ್ತುತಂಡ ಆರೋಪಿಯನ್ನು ಎಡೆಮುರಿಕಟ್ಟಿ ತಂದು ಜೈಲಿಗೆ ಬಿಟ್ಟುಬಂದಿದೆ.


ಶುಭಾ ಬದುಕಿದ್ದಾಗ

ಹೌದು... ಚಾಮರಾಜನಗರ ತಾಲ್ಲೂಕಿನ ಡೊಳ್ಳಿಪುರ ಗ್ರಾಮದ ಮಹೇಶಎಂಬ ಕಿರಾತಕ ತನ್ನೊಡನೆ ಸಪ್ತಪದಿ ತುಳಿದು ಬಾಳ್ವೆನಡೆಸಬೇಕೆಂಬ ನೂರಾರು ಕನಸು ಹೊತ್ತು ಬಂದ ಪತ್ನಿ ಶುಭಾ ಬಿ.ಆರ್.(38)ಎಂಬಾಕೆಯನ್ನು ಅಮಾನುಷವಾಗಿ ಕೊಲೆ ಮಾಡಿ ಚಾಮರಾಜನಗರ ಪೂರ್ವಠಾಣೆ ಪೊಲೀಸರಿಂದ ಸೆರೆಯಾಗಿ ಜೈಲು ಸೇರಿದ್ದಾನೆ.

ಬೆಂಗಳೂರಿನ ವಿಜಯನಗರದ ಬಿಸಿಸಿ ಲೇಔಟ್ ನಿವಾಸಿ ಲೇ. ರವೀಂದ್ರರರಿಗೆ ಮೂವರು ಹೆಣ್ಣು ಮಕ್ಕಳು ಹಿರಿಯವಳು ಗಂಡನಿಂದ ಕೊಲೆಯಾದ ಶುಭಾ ಬಿ. ಆರ್. ಎರಡನೆಯವಳು ಶ್ರುತಿ, ಕಿರಿಯವಳು ಶ್ವೇತಾ, ತಂದೆ ರವೀಂದ್ರ ಪೊಲೀಸ್ ಇಲಾಖೆಯಲ್ಲಿ ದಫೇದರ್‌ಆಗಿದ್ದರು. ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ಅಕಾಲಿಕ ಮರಣಕ್ಕೆ ತುತ್ತಾಗಿದ್ದಾರೆ. ಅವರ ಮರಣ ನಂತರ ಎರಡನೇ ಮಗಳು ಶ್ರುತಿಗೆ ಅನುಕಂಪದ ಆಧಾರದ ಮೇಲೆ ಸರ್ಕಾರಿ ಉದ್ಯೋಗ ದೊರಕಿದ್ದು ವಿಧಾನ ಸೌಧದಲ್ಲಿ ಗುಮಾಸ್ತೆಯಾಗಿದ್ದಾಳೆ. ತಂದೆ ರವಿಂದ್ರ ಬದುಕಿದ್ದಾಗಲೇ ಹಿರಿಯ ಮಗಳು ಶ್ರುತಿಯನ್ನು ಚಾಮರಾಜನಗರ ತಾಲ್ಲೂಕಿನ ದೊಳ್ಳಿಪುರದ ಲೇ. ನಾಗರಾಜು ಹಾಗೂ ಭಾರತಿ ಎಂಬುವವರ ಮಗ ಮಹೇಶ ಎಂಬ ಉಡಾಳನಿಗೆ ಕೊಟ್ಟು ಶಾಸ್ತ್ರೋಕ್ತವಾಗಿ ಮದುವೆ ಮಾಡಲಾಗಿತ್ತು. ಆದರೆ ಶುಭಾ ಈಗ ಗಂಡನಿಂದಲೆ ಕೊಲೆಯಾಗಿ ಹೋಗಿದ್ದಾಳೆ.

ಚಾಮರಾಜನಗರ ಜಿಲ್ಲಾ ಕೇಂದ್ರದಿಂದ ಆಗ್ನೇಯ ದಿಕ್ಕಿಗೆ ಸುಮಾರು 12 ಕಿ.ಮೀ ಕ್ರಮಿಸಿದರೆ ಡೊಳ್ಳಿಪುರ ಗ್ರಾಮ ಸಿಗುತ್ತದೆ. ಈ ಗ್ರಾಮದಲೇ.ನಾಗರಾಜು ಹಾಗೂ ಭಾರತಿರವರಿಗೆ ಒಂದು ಹೆಣ್ಣು, ಒಂದು ಗಂಡು, ಇಬ್ಬರು ಮಕ್ಕಳು. ಹಿರಿಯವನು ಪತ್ನಿ ಹಂತಕ ಆರೋಪಿ ಮಹೇಶ, ಈತನ ತಂಗಿ ತುಮಕೂರಿಗೆ ಮದುವೆಯಾಗಿ ಗಂಡನ ಮನೆಯಲ್ಲಿದ್ದಾಳೆ. ಹಾಗೆಯೇ ಕಳೆದ 15 ವರ್ಷದ ಹಿಂದೆ ಬೆಂಗಳೂರಿನ ವಿಜಯನಗರದಲೇ. ರವೀಂದ್ರರ ಮಗಳು ಶುಭಾ ಎಂಬಾಕೆಯ ಜೊತೆ ಮದುವೆಯಾದ ಮಹೇಶ ಡೊಳ್ಳಿಪುರದಿಂದ ಎರಡು ಕಿ.ಮೀ. ದೂರದಲ್ಲಿರುವ ತೋಟದ ಮನೆಯಲ್ಲಿ ತನ್ನ ತಾಯಿ ಹಾಗೂ ಹೆಂಡತಿಯೊಡನೆ ವಾಸವಾಗಿದ್ದ. ಪ್ರಾರಂಭದ 5 ವರ್ಷಗಳ ಕಾಲ ಶುಭಾ ಹಾಗೂ ಮಹೇಶ ದಂಪತಿಗಳಲ್ಲಿ ಅನ್ಯೋನ್ಯತೆ ಇತ್ತು. ಅದರ ಫಲವಾಗಿ ಸೂರ್ಯ ತೇಜಶ್ ಎಂಬ 16 ವರ್ಷದ ಮಗನಿದ್ದು ಈತ ತುಮಕೂರಿನ ತನ್ನ ಅತ್ತೆಯ ಮನೆಯಲ್ಲಿದ್ದುಕೊಂಡು 9ನೇ ತರಗತಿ ಓದುತ್ತಿದ್ದಾನೆ. ಕಳೆದ 10 ವರ್ಷಗಳಿಂದೀಚೆಗೆ ದಂಪತಿಗಳಲ್ಲಿ ಸಾಮರಸ್ಯವಿರಲಿಲ್ಲ.


ಎಸ್ಪಿ ಡಾ. ಬಿ.ಟಿ. ಕವಿತಾ

ಮಹೇಶನ ತಂದೆ ನಾಗರಾಜುಗೆ ಗ್ರಾಮದ ಎರಡು ಕಡೆ ಪಿತ್ರಾರ್ಜಿತವಾಗಿ ಬಂದ ಒಟ್ಟು7 ಎಕರೆ ಜಮೀನಿದ್ದು, ಈ ಜಮೀನಿನಲ್ಲಿ ಅಡಿಕೆ, ತೆಂಗು, ಬಾಳೆ, ಅರಿಸಿನ, ಬೆಳೆ ಬೆಳೆಯಲಾಗಿದೆ. ಆದರೂ ಶುಭಾ ವಾಸವಿದ್ದ ದೊಳ್ಳಿಪುರದ ತೋಟದ ಮನೆಯಲ್ಲಿ ಒಬ್ಬಂಟಿಯಾಗಿದ್ದಳು. ಆ ಮನೆಯಲ್ಲಿ ಬೇಸರವಾದರೆ ಒಂದರೆಘಳಿಗೆ ನೋಡಲು ಒಂದು ಟಿವಿಯು ಇರಲಿಲ್ಲ, ಕಷ್ಟ ಎಂದರೆ ಯಾರಿಗಾದರೂ ಕರೆ ಮಾಡಿ ಹೇಳಿಕೊಳ್ಳೋಣ ಎಂದರೆ ಆಕೆಯ ಬಳಿ ಒಂದು ಮೊಬೈಲ್ ಕೂಡ ಇರಲಿಲ್ಲ. ಅಷ್ಟೊಂದು ನಿಕೃಷ್ಟವಾಗಿ ಬದುಕುತ್ತಿದ್ದಳು ಶುಭ ಆ ಮನೆಯಲ್ಲಿ.

ಮಹೇಶ ಇತ್ತೀಚೆಗೆ ಬೆಳೆ ಬೆಳೆಯುವ ಸಲುವಾಗಿ ಕೈತುಂಬ ಸಾಲ ಮಾಡಿಕೊಂಡಿದ್ದ. ಇತ್ತ ಶುಭಾ ಮತ್ತೆ ಎರಡೂವರೆ ತಿಂಗಳ ಗರ್ಭಿಣಿಯಾಗಿದ್ದಳು. ಇದು ಮಹೇಶನಿಗೆ ಇಷ್ಟವಿರಲಿಲ್ಲ. ಗರ್ಭ ಧರಿಸಿದ್ದ ಹೆಂಡತಿಯ ಮೇಲೆ ಅನುಮಾನ ವ್ಯಕ್ತಪಡಿಸುತ್ತಿದ್ದ. ಗರ್ಭಪಾತ ಮಾಡಿಸಿ ಕೊಳ್ಳುವಂತೆ ಮಹೇಶ ಹೆಂಡತಿಗೆ ಒತ್ತಡ ಹೇರಿದ್ದ. ಆದರೆ ಶುಭಾಳಿಗೆ ಅದು ಇಷ್ಟವಿರಲಿಲ್ಲ. ಇಲ್ಲಿ ಮಹೇಶನ ಅನೈತಿಕ ಸಂಬಂಧದಿಂದ ಶುಭಾ ಮಹೇಶನ ದಾಂಪತ್ಯದಲ್ಲಿ ಬಿರುಕು ಕಾಣಿಸಿಕೊಂಡಿದೆ ಎಂದು ಹೇಳಲಾಗಿದ್ದು ಮಧ್ಯೆ ಮಧ್ಯೆ ದಾಂಪತ್ಯ ಕಲಹ ಆಗುತಿತ್ತು ಎನ್ನಲಾಗಿದೆ. ಮಹೇಶನ ಪಕ್ಕದ ಮನೆಯ ರಾಜು ಎಂಬಾತ ಮಹೇಶನಿಗೆ ಚೀಟಿಯ ಬಾಬ್ತು 3 ಲಕ್ಷ ರೂ. ಕೊಡಬೇಕಾಗಿತ್ತು. ಆದರೆ ಆತ ಅದನ್ನು ಸಕಾಲಕ್ಕೆ ಕೊಡದೆ ಸತಾಯಿಸುತ್ತಿದ್ದ. ದಾಂಪತ್ಯದಲ್ಲಿ ನಿರಂತರವಾಗಿ ಆಗುತ್ತಿದ್ದ ಕಿರಿಕಿರಿಯಿಂದ ಬೇಸತ್ತ ಮಹೇಶ ಶುಭಾಳನ್ನು ಮುಗಿಸಲು ತೀರ್ಮಾನಿಸಿದ್ದ. ಅದಕ್ಕಾಗಿ ಹೊಂಚು ಹಾಕುತ್ತಿದ್ದ ಹಂತಕ ಜೂನ್ 29ರಂದು ಶುಭಾಳ ಕೈಯಿಂದ ಪಕ್ಕದ ಮನೆಯ ರಾಜು ಎಂಬಾತ ನನಗೆ 3 ಲಕ್ಷರೂ. ಕೊಡಬೇಕು ಆತನಿಂದ ನಮಗೆ ತೊಂದರೆ ಇದೆ ಎಂದು ಪತ್ರ ಬರೆಸಿದ್ದ.ಜೂನ್ 30ರಂದು ಮುಂಜಾನೆ 4 ಗಂಟೆಯ ಸಮಯದಲ್ಲಿ ಸೂರ್ಯ ಹುಟ್ಟುವ ಮುಂಚೆಯೆ ಶುಭಾ ಮಾರಕ ಆಯುಧದ ಹೊಡೆತದಿಂದಾಗಿ ಮುಖ, ತಲೆಗೆ ತೀವ್ರ ರೀತಿ ರಕ್ತಸ್ರಾವದಿಂದ ಹೆಣವಾಗಿ ನಡುರಸ್ತೆಯಲ್ಲಿ ಅಂಗಾತ ಬಿದ್ದಿದ್ದಳು.


ಕೊಲೆಯಾದ ಶುಭಾ


ಆರೋಪಿ ಮಹೇಶ

ಪತಿ ಮಹೇಶ ನನ್ನ ಹೆಂಡತಿಯನ್ನಯಾರೋ ಕೊಲೆ ಮಾಡಿದ್ದಾರೆ ಎಂದು ಗ್ರಾಮಸ್ಥರು ಸಂಬಧಕರು ಎಲ್ಲರನ್ನು ನಂಬಿಸಿದ್ದ ಹಾಗೂ ಯಾರಿಗೂ ಅನುಮಾನ ಬಾರದಂತೆ ನೋಡಿ ಹೈಡ್ರಾಮಾ ಮಾಡಿದ್ದ. ಇತ್ತ ಡೊಳ್ಳಿಪುರ ತೋಟದ ಮನೆಯಲ್ಲಿ ಗೃಹಿಣಿಯೊಬ್ಬಳನ್ನು ಯಾರೋ ಆಯುಧದಿಂದ ಹೊಡೆದು ಭೀಕರವಾಗಿ ಹತ್ಯೆ ಮಾಡಿ ಹೋಗಿದ್ದಾರೆ. ಮಹಿಳೆಯ ಶವ ನಡುರಸ್ತೆ ರಕ್ತದ ಮಡುವಿನಲ್ಲಿ ಬಿದ್ದಿದೆ ಎಂದು ಸುತ್ತಮುತ್ತೆಲ್ಲಾ ಸುದ್ದಿ ಹರಡಿತ್ತು. ಈ ವೇಳೆಯಲ್ಲಿ ಸ್ವತಃ ಶುಭಾಳ ಅತ್ತೆ ಭಾರತಿ ಪೊಲೀಸರಿಗೆ ಮಾಹಿತಿ ನೀಡಿ ಸೊಸೆಯನ್ನು ಯಾರೋ ಕೊಂದು ಹಾಕಿದ್ದಾರೆ ಎಂದು ತಿಳಿಸಿದ್ದಳು. ವಿಚಾರ ತಿಳಿದ ಕೂಡಲೆ ಚಾಮರಾಜನಗರ ಪೂರ್ವ ಠಾಣೆಯ ಪೊಲೀಸರು ಸ್ಥಳಕ್ಕೆ ತೆರಳಿ ಸ್ಥಳ ಪರಿಶೀಲನೆ ನಡೆಸಿ ಹತ್ಯೆಯಾಗಿರುವ ಶುಭಾಳ ಶವವನ್ನು ಆಸ್ಪತ್ರೆಗೆ ಸಾಗಿಸಿ ಹತ್ಯೆಗೆ ಕಾರಣ ಯಾರು ಎಂಬುದನ್ನ ಪತ್ತೆಹಚ್ಚಲು ಪ್ರಾರಂಭಿಸಿದ್ದರು.

ಇತ್ತ ಮೃತೆ ಶುಭಾಳ ಸಾವಿನ ಸುದ್ದಿ ಕೇಳಿ ಅನುಮಾನಗೊಂಡ ತಂಗಿ ಶ್ರುತಿ ಎಂಬಾಕೆ ಬೆಂಗಳೂರಿನ ವಿಧಾನಸೌಧದಲ್ಲಿ ಎಸ್‌ಡಿಎ (ಗುಮಾಸ್ತೆ)ಯಾಗಿದ್ದು, ಈಕೆ ಅಕ್ಕ ಶುಭಾಳ ಹತ್ಯೆಯ ಹಿಂದೆ ಹಣಕಾಸಿನ ಕಾರಣ ನೀಡಿದ್ದು ಶುಭಾಳ ಹತ್ಯೆಯಲ್ಲಿ ಭಾವ ಅಂದರೆ ಶುಭಾಳ ಗಂಡ ಮಹೇಶ ಅತ್ತೆ ಭಾರತಿಯವರ ಮೇಲೆ ಅನುಮಾನ ಇರುವುದಾಗಿ ಪೊಲೀಸರಿಗೆ ದೂರು ನೀಡಿದ್ದು ಅದರಂತೆ ಹತ್ಯೆಯಾದ ಶುಭಾಳ ತಂಗಿ ಶ್ರುತಿಯ ದೂರಿನ ಮೇರೆಗೆ ಚಾಮರಾಜನಗರ ಪೂರ್ವ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಕೂಡಲೆ ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾರವರ ಮಾರ್ಗದರ್ಶನದಲ್ಲಿ ಚಾಮರಾಜನಗರ ಡಿವೈಎಸ್ಪಿ ಲಕ್ಷ್ಮಯ್ಯರವರ ನೇತೃತ್ವದಲ್ಲಿ ಹಂತಕನ ಪತ್ತೆಗೆ ಎಲ್ಲಾ ಆಯಾಮಗಳಲ್ಲೂ ತನಿಖೆ ಕೈಗೊಂಡ ಆರಕ್ಷಕ ನಿರೀಕ್ಷಕ ನವೀನ್ ಶುಭಾಳ ಕೊಂದ ಹಂಕ ಯಾರೆಂದು ತನಿಖೆ ತನಿಖೆ ನಡೆಸುತ್ತಿದ್ದರು.


ಡಿವೈಎಸ್ಪಿ ಲಕ್ಷ್ಮಯ್ಯ


ಸಿಪಿಐ ನವೀನ್


ಎಎಸ್‌ಐ ಮಹದೇವ್

ಗ್ರಾಮದ ತೋಟದ ಮನೆಯ ಮುಂದೆ ರಸ್ತೆಯಲ್ಲಿ ಗರ್ಭಿಣಿ ಮಹಿಳೆ ಹತ್ಯೆಯ ರೂಪ ಪಡೆದುಕೊಂಡು ರಕ್ತಸಿಕ್ತವಾಗಿ ಅಂಗಾತ ಮಲಗಿದ್ದ ಗರ್ಭಿಣಿ ಮಹಿಳೆಯನ್ನ ಯಾರೋ ಕೊಂದು ಹೋಗಿದ್ದಾರೆ ಎಂದು ಸುದ್ದಿ ಹರಡಿತ್ತು. ಇಲ್ಲಿನ ವಾತಾವರಣವನ್ನು ಗಮನಿಸಿದ ಪೂರ್ವ ಠಾಣೆಯ ಆರಕ್ಷಕ ನಿರೀಕ್ಷಕ ನವೀನ್ ಇದು ಗಂಡ ಮಹೇಶನೆ ಹತ್ಯೆಯ ಹಿಂದೆ ಇರುವ ಹಂತಕ ಎಂದು ತೀರ್ಮಾನಿಸಿದ್ದರು. ಹಂತಕ ಗಂಡ ಮಹೇಶನನ್ನು ಸ್ಥಳದಲ್ಲೆ ವಿಚಾರಣೆ ಮಾಡಿದಾಗ ಆತನ ವರ್ತನೆ ವಿಚಿತ್ರವಾಗಿತ್ತು. ಇದು ಬೇರೆಯದೆ ಶುಭಾಳ ಕೊಲೆಗೆ ಟ್ವಿಸ್ಟ್ ತೆಗೆದು ಕೊಳ್ಳಬಹುದು ಎಂದು ಹಂತಕ ಮಹೇಶನನ್ನ ಬಿಟ್ಟು ಬಂದಿದ್ದರು. ಆದರೆ ಗಂಡನೇ ಹಂತಕನೆಂಬ ತೀರ್ಮಾನಕ್ಕೆ ಬಂದ ಆರಕ್ಷಕ ನಿರೀಕ್ಷಕ ನವೀನ್ ಹಂತಕನ ಹೆಡೆಮುರಿಕಟ್ಟಲು ತೀರ್ಮಾನಿಸಿದ್ದಾರೆ. ಅದರಂತೆ ಸಿದ್ದಯ್ಯನಪುರದಲ್ಲಿ ಅಡ್ಡಾಡುತಿದ್ದ ಮಹೇಶನನ್ನ ಆರಕ್ಷಕ, ಉಪ ನಿರೀಕ್ಷಕ ಪ್ರಕಾಶ್ ಟೀಂ ಬಳಸಿಕೊಂಡು ಮಹೇಶನನ್ನ ಹೆಡೆಮುರಿ ಕಟ್ಟಿದ್ದಾರೆ.

ಅದರಂತೆ ಪೂರ್ವ ಪೊಲೀಸ್ ಠಾಣೆಗೆ ಆರೋಪಿ ಮಹೇಶನನ್ನು ಎಳೆದು ತಂದು ವಿಚಾರಣೆ ನಡೆಸಿದ ಆರಕ್ಷಕ ನಿರೀಕ್ಷಕ ನವೀನ್ ಹಂತಕ ಕೊಲೆ ಮಾಡಿದ್ದರ ಹಿಂದೆ ಸಕಾರಣವನ್ನು ಕೇಳಿದ್ದು, ಆತ ನಿಮಿಷಕ್ಕೊಂದು ಉತ್ತರ ನೀಡುತ್ತಿದ್ದು, ಕೊಲೆಯ ಬಗ್ಗೆ ಯಾವುದೇ ಸುಳಿವು ಬಿಟ್ಟುಕೊಡುತ್ತಿರಲಿಲ್ಲ. ಆದರೆ ಆರಕ್ಷಕ ನಿರೀಕ್ಷಕ ನವೀನ್ ನಡೆಸಿದ ಕ್ಲಿಷ್ಟಕರ ಬೆಳವಣಿಗೆಯಲ್ಲಿ ಹೆಂಡತಿ ಕೊಂದ ಹಂತಕ ಮಹೇಶ್ ಸತ್ಯ ಬಾಯ್ಬಿಡುವ ಮಟ್ಟಿಗೆ ಬಂದಿದ್ದಾನೆ ಎನ್ನಲಾಗಿದೆ. ಆತನ ಅನೈತಿಕ ಸಂಬಂದದ ಬಗ್ಗೆ ಕೆದಕಿದಾಗ ಆತ ಹೆಂಡತಿ ಶುಭಾಳ ಗರ್ಭಿಣಿಯಾಗಿರುವ ಬಗ್ಗೆ ಅನುಮಾನ ಇರುವುದಾಗಿ ಅನುಮಾನದ ಮಾತುಗಳನ್ನಾಡಿದ್ದಾನೆ. ಅನುಮಾನದ ಮಾತುಯಾವಾಗ ಹಂತಕ ಶುರು ವಿಟ್ಟುಕೊಂಡನೋ ಅವಾಗಲೆ ಗಂಡ ಮಹೇಶನೆ ಶುಭಾಳ ಹತ್ಯೆಯ ಹಿಂದೆ ಮಹೇಶಇರುವುದು ಸಾಭಿತಾಗಿದೆ. ಈ ವಿಚಾರವನ್ನ ಹೇಳುತ್ತಿದ್ದಂತೆ ಆರಕ್ಷಕ ನಿರೀಕ್ಷಕ ನವೀನ್ ವಿಚಾರಣೆಯ ಹಂತ ಗುರಿ ತಲುಪಿದೆ ಎಂದು ಗೊತ್ತಾಗ ತೊಡಗಿದೆ. ಅದರಂತೆ ಮತ್ತಷ್ಟು ವಿಚಾರಣೆ ನಡೆಸಿದಾಗ ಹಣಕಾಸಿನ ವ್ಯವಹಾರ ಹೊರಗೆ ಬಿದ್ದಿದೆ. ಕೊನೆಗೆ ಹಂತಕ ಗಂಡ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ಹಾಗೆ ಹತ್ಯೆಗೆ ಬಳಸಿದ ಕಬ್ಬಿಣ ರಾಡು ಪಕ್ಕದ ಜಮೀನಲ್ಲಿ ಬೀಸಾಡಿರುವುದನ್ನ ಹಂತಕ ಮಹೇಶ ತೋರಿಸಿಕೊಟ್ಟಿದ್ದಾನೆ. ಅದನ್ನ ವಶಕ್ಕೆ ಪಡೆದ ಆರಕ್ಷಕ ನಿರೀಕ್ಷಕ ನವೀನ್ ಹಂತಕನನ್ನು ಜೈಲಿಗೆ ಬಿಟ್ಟು ಬಂದಿದ್ದಾರೆ. ಒಟ್ಟಿನಲ್ಲಿ ಪತ್ನಿಯ ಮೇಲೆ ಅನುಮಾನಗೊಂಡ ನರಹಂತಕ ಗಂಡ ಮಹೇಶ ಜೈಲಿಗೆ ಸೇರಿದ್ದಾನೆ. ಇಲ್ಲಿ ಸತ್ತ ಶುಭಾಳು ಏನೂ ಹರಿಯದ ಮುಗ್ದೆಯಾಗಿಯೇ ಹತ್ಯೆಯಾಗಿದ್ದಾಳೆ.

**ಮಂಗಳೂರಿನ ಹೊರವಲಯದ ಕೋಮು ಸೂಕ್ಷ್ಮ ಪ್ರದೇಶ ಉಳ್ಳಾಲದಲ್ಲಿ ಮಹಿಳೆಯೊಬ್ಬರು ಮಗುವೊಂದನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿಯ ಜಾಡು ಹಿಡಿದು ಕಾರ್ಯಾಚರಣೆ ನಡೆಸಿದ್ದ ಜನಪರ ಹೋರಾಟಗಾರರು ಆರೋಪಿಯನ್ನು ರೆಡ್‌ಹ್ಯಾಂಡ್ ಆಗಿ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದರು. ಸುಮಾರು 13 ವರ್ಷಗಳ ಹಿಂದೆ ನಡೆದಿದ್ದ ಈ ರೋಚಕ ಕಾರ್ಯಾಚರಣೆಯ ಪಿನ್‌ಟುಪಿನ್ ಮಾಹಿತಿ ಹಾಗೂ ತದನಂತರದ ನ್ಯಾಯಾಂಗದ ಬೆಳವಣಿಗೆಗಳು ಬಯಲಿಗೆ ಬಂದಿದೆ. ಈ ಪ್ರಕರಣದ ಆರೋಪಿಗೆ ಮಂಗಳೂರಿನ ಸೆಶನ್ಸ್ ನ್ಯಾಯಾಲಯ ಶಿಕ್ಷೆ ನೀಡಿದೆ. ಹಾಗಂತ ಇದು ಖುಷಿ ಪಡುವ ವಿಷಯವಲ್ಲ. ಬಡತನ ನೀಗಿಸಿಕೊಳ್ಳಲು, ಉಳಿದ ಮಕ್ಕಳ ಹಸಿವಿಗಾಗಿ ಮಗುವೊಂದನ್ನು ಮಾರಾಟ ಮಾಡುವ ತಾಯಿಯ ಸಂಕಟದಿಂದಲೂ ನಾವು ಪ್ರಕರಣವನ್ನು ನೋಡಬೇಕು. ಹಾಗಂತ ಹಸಿವು ಮತ್ತು ಬಡತನವನ್ನೇ ಬಂಡವಾಳ ಮಾಡಿಕೊಂಡ ಮಗು ಮಾರಾಟಗಾರರನ್ನು ಕ್ಷಮಿಸಲು ಸಾಧ್ಯವಿಲ್ಲ.**

# ಮಕ್ಕಳ ಮಾರಾಟಗಾರರಿಗೆ 10 ವರ್ಷ ಕಠಿಣ ಸಜೆ!

ಉಳ್ಳಾಲದ ಅಂಗನವಾಡಿ ಟೀಚರ್ ಫಾತಿಮಾ ಕರೆ ಮಾಡಿ ನೀಡಿದ್ದ ಮಾಹಿತಿಯ ಅನ್ವಯ ಮಗು ಮಾರಾಟ ದಂಧೆಯ ಕಾರ್ಯಾಚರಣೆಗೆ ರೂಪುರೇಷೆ ಸಿದ್ಧವಾಗಿತ್ತು. ಮಾಹಿತಿ ಸಿಕ್ಕಿದ್ದು ಹೇಗೆ ಎಂದರೆ ಅಂಗನವಾಡಿ ಟೀಚರ್ ಮನೆ ಮನೆಯಲ್ಲಿ ಮಗು ಸರ್ವೆ ಮಾಡುವಾಗ ಲಿನೇಟಾ ವೇಗಸ್ ಅವರ ಮನೆಯಲ್ಲಿ ಅವರದ್ದಲ್ಲದ ಮಗು ಇತ್ತು. ನೆರೆಮನೆಗಳಲ್ಲಿ ಈ ಬಗ್ಗೆ ವಿಚಾರಿಸಿದಾಗ ಅದು ಮಾರಾಟಕ್ಕೆಂದು ತಂದ ಮಗು ಎಂದು ತಿಳಿಯಿತು ಎಂದು ಜನಪರ ಹೋರಾಟಗಾರರಿಗೆ ಮಾಹಿತಿ ನೀಡಿದ್ದರು. ಈ ಮಾಹಿತಿ ಆಧಾರದಲ್ಲಿ ಜನಪರ ಹೋರಾಟಗಾರರು ಚೈಲ್ಡ್‌ಲೈನ್ ಅನ್ನು ಸಂಪರ್ಕ ಮಾಡಿ ಅವರ ಮೂಲಕ ಲೆನಿಟಾ ವೇಗಸ್ ಮನೆಗೆ ಹೋಗಿ ಮಗುವಿನ ಕುರಿತು ವಿಚಾರಣೆ ನಡೆಸಿದರು. ಆದರೆ ಮಗು ನನ್ನದೇ ಎಂದು ಲಿನೇಟಾ ವೇಗಸ್ ಅವರು ಎಲ್ಲಾ ಸರ್ಟಿಫೀಕೇಟ್‌ಗಳನ್ನು ಚೈಲ್ಡ್‌ಲೈನ್ ಸಿಬ್ಬಂದಿಗೆ ತೋರಿಸಿದ್ದರು. ಅಚ್ಚರಿಯೆಂದರೆ ಲಿನೇಟಾ ವೇಗಸ್ ಆ ಮಗುವನ್ನು ಹೆತ್ತಿದ್ದಾರೆ ಎಂಬುದಕ್ಕೆ ದಾಖಲೆಯಾಗಿ ಮಂಗಳೂರು ನಗರದ ನರ್ಸಿಂಗ್ ಹೋಂ ಒಂದರ ಡಿಸ್ಚಾರ್ಜ್ ದಾಖಲೆಗಳನ್ನೂ ಅವರು ಹೊಂದಿದ್ದರು. ನರ್ಸಿಂಗ್ ಹೋಂಗೆ ಖುದ್ದು ತೆರಳಿ ವಿಚಾರಿಸಿದ್ರೂ, ಹೌದು ಲಿನೇಟಾ ವೇಗಸ್ ಹೆರಿಗೆಗಾಗಿ ಅಡ್ಮಿಟ್ ಆಗಿದ್ದು ನಿಜ ಎಂಬ ದಾಖಲೆಗಳನ್ನೇ ತೋರಿಸಿದ್ರು. ಮಗು ಲಿನೇಟಾ ವೇಗಸ್ ಅವರದ್ದಲ್ಲ, ಆಕೆ ಮಾರಾಟ ಮಾಡಲು ಮಗುವನ್ನು ಎಲ್ಲಿಂದಲೋ ತಂದಿದ್ದಾಳೆ ಎಂಬುದಕ್ಕೆ ಜನಪರ ಹೋರಾಟಗಾರರಲ್ಲಿ ಬಾಯಿ ಮಾತಿನ ಮಾಹಿತಿ ಅಲ್ಲದೇ, ಯಾವುದೇ ದಾಖಲೆಗಳೇ ಇರಲಿಲ್ಲ. ಆದರೂ ಜನಪರ ಹೋರಾಟಗಾರರು ರಾತ್ರಿ -ಹಗಲು ಕಾರ್ಯಾಚರಣೆ ಮಾಡಿ ಮಗುವಿನ ನಿಜ ತಾಯಿಯನ್ನು ಪತ್ತೆಹಚ್ಚಿದರು. ಆ ಮಗು ಉತ್ತರ ಕರ್ನಾಟಕದ ಚೆನ್ನವ್ವಳದ್ದು. ಕಟ್ಟಡದ ಕೆಲಸಕ್ಕೆ ಬಂದಿದ್ದ ಚೆನ್ನವ್ವಳಿಗೆ ಇರೋ ಮಕ್ಕಳಿಗೆ ಊಟ ಹಾಕಲಾಗದ ಬಡತನದ ಪರಿಸ್ಥಿತಿ. ಅಂತವರನ್ನೇ ಗುರುತಿಸುವ ಲಿನೇಟಾ ವೇಗಸ್, ಅವರಿಗೊಂದು ಹತ್ತಿಪ್ಪತ್ತು ಸಾವಿರ ಕೊಟ್ಟು ಮಗುವನ್ನು ಖರೀದಿಸಿ ಮಾರಾಟ ಮಾಡುತ್ತಾಳೆ. ಚೆನ್ನವ್ವ ಮತ್ತವಳ ಮಕ್ಕಳ ಹಸಿವೇ ಲಿನೇಟಾ ವೇಗಸ್ ಬಂಡವಾಳವಾಗಿತ್ತು.


ವಿದ್ಯಾದಿನಕರ್ ತಂಡ

ಈ ಸಂದರ್ಭದಲ್ಲಿ ಆಪರೇಷನ್ ಆರಂಭವಾಯಿತು. ನೇರವಾಗಿ ಪೊಲೀಸ್ ಕಮಿಷನರ್‌ರನ್ನು ಭೇಟಿಯಾಗಿ ಈ ಅಪರೇಷನ್‌ಗೆ ಸಹಾಯ ಕೇಳಲಾಯಿತು. ಒಂದು ಪೊಲೀಸ್ ತಂಡವನ್ನು ನಿಯೋಜಿಸಿದರು. ನಾನು, ಚೈಲ್ಡ್ ಲೈನ್‌ನ ರೆನ್ನಿ ಡಿಸೋಜಾ, ಅಸುಂತಾ ಡಿಸೋಜಾ, ವಿದ್ಯಾದಿನಕರ್, ಅಂಗನವಾಡಿ ಟೀಚರ್ ಫಾತಿಮಾ ಸೇರಿ ಸಭೆ ನಡೆಸಿದರು. ಅದರಂತೆ ಫಾತಿಮಾ ಅವರು ಲಿನೇಟಾ ವೇಗಸ್ ಮನೆಗೆ ತೆರಳಿ, ದುಬೈಯಲ್ಲಿರುವ ಮುಸ್ಲಿಂ ದಂಪತಿಗೆ ಮಗು ಬೇಕಾಗಿದೆ. ಒಂದು ಅರೇಜ್ಮೆಂಟ್ ಮಾಡಬಹುದಾ ಎಂದು ಕೇಳಿದರು. ಈಗಾಗಲೇ ಈ ಮಗುವಿನ ಹಿಂದೆ ಚೈಲ್ಡ್‌ಲೈನ್‌ನವರು ಬಿದ್ದಿದ್ದರಿಂದ ಮಗುವನ್ನು ತುರ್ತು ಮಾರಾಟ ಮಾಡಿ ಕೈ ತೊಳೆದುಕೊಳ್ಳುವ ದಾವಂತದಲ್ಲಿದ್ದರು ಲಿನೇಟಾ ವೇಗಸ್.

ವಿದ್ಯಾ ದಿನಕರ್ ಲಿನೇಟಾ ವೇಗಸ್ ಕರೆ ಮಾಡಿ ಫಾತಿಮಾ ಟೀಚರ್ ಶಿಫಾರಸ್ಸಿನಂತೆ ನಿಮ್ಮನ್ನು ಸಂಪರ್ಕ ಮಾಡುತ್ತಿದ್ದು, ಮಗುವನ್ನು ನೋಡಬೇಕಿದೆ. ಬಳಿಕ ಹಣದ ಸೆಟಲ್ಮೆಂಟ್ ಮಾಡಿ ಮಗು ಖರೀದಿಸುತ್ತೇವೆ ಎಂದಿದ್ದರು. ಪಕ್ಕಾ ದಂಧೆಕೋರರಾಗಿರುವ ಲಿನೇಟಾ ವೇಗಸ್ ಅಷ್ಟು ಸುಲಭದಲ್ಲಿ ಮಗುವನ್ನು ಹಸ್ತಾಂತರ ಮಾಡಲಿಲ್ಲ, ಅಲ್ಲಿ ಬನ್ನಿ, ಇಲ್ಲಿ ಬನ್ನಿ ಎಂದು ವಿದ್ಯಾದಿನಕರ್‌ರನ್ನು ಮಾತುಕತೆಗೆ ಕರೆದರು. ವಿದ್ಯಾದಿನಕರ್ ಮುಸ್ಲಿಂ ಮಹಿಳೆಯ ಪಾತ್ರ ಮಾಡಬೇಕಿರುವುದರಿಂದ ವಿದ್ಯಾರ್ಥಿ ನಾಯಕನಾಗಿದ್ದ ಶಬ್ಬೀರ್ (ಈಗ ವಾರ್ತಾಭಾರತಿಯ ಪತ್ರಕರ್ತ) ಸಹಾಯ ಪಡೆದುಕೊಳ್ಳಲಾಯಿತು. ಶಬ್ಬೀರ್ ಅವರು ವಿದ್ಯಾದಿನಕರ್‌ಗೆ ಹೊಂದುವ ಬುರ್ಖಾವನ್ನು ತಂದುಕೊಟ್ಟರು. ವಿದ್ಯಾದಿನಕರ್ ಮುಸ್ಲಿಂ ಮಹಿಳೆಯಂತೆ ಬುರ್ಖಾಧಾರಿಯಾಗಿದ್ದರು.

ಕೊನೆಗೆ ತೊಕ್ಕೊಟ್ಟಿನ ವೈದ್ಯರೊಬ್ಬರ ಕ್ಲೀನಿಕ್‌ಗೆ ಮಗುವಿನ ಆರೋಗ್ಯ ತಪಾಸಣೆಗೆ ಬರುವುದಿದೆ. ಮಗುವಿನ ಹೆಲ್ತ್ ಚೆಕಪ್ ಮಾಡಿ ನಿಮಗೆ ಮಾರಾಟ ಮಾಡುತ್ತೇನೆ. ಅಲ್ಲೇ ಹಣ ಕೊಟ್ಟು ಮಗು ಖರೀದಿಸಿ ಎಂದು ಲಿನೇಟಾ ವೇಗಸ್ ಹೇಳಿದರು. ಕ್ಲೀನಿಕ್‌ಗೆ ಮಗುವನ್ನು ಬುರ್ಖಾಧಾರಿ ವಿಧ್ಯಾದಿನಕರ್ ಪಡೆದ ಬಳಿಕ ಪೊಲೀಸರು ಲಿನೇಟಾ ವೇಗಸ್‌ಳನ್ನು ಬಂಧಿಸುವುದು ಎಂದು ಯೋಜನೆ ರೂಪಿಸಲಾಯಿತು. ಆದರೆ ತೊಕ್ಕೊಟ್ಟು ಮೊದಲೇ ಸೂಕ್ಷ್ಮ ಪ್ರದೇಶ. ಬುರ್ಖಾಧಾರಿ ಮಹಿಳೆಯ ಮಗುವನ್ನು ಪಡೆದ ಬಳಿಕ ಪೊಲೀಸ್ ಬಂಧನಕ್ಕೆ ಒಳಗಾಗುವಾಗ ಲಿನೇಟಾ ವೇಗಸ್ ವಿನಾಕಾರಣ ಗದ್ದಲ ಮಾಡಿದರೆ ಪರಿಸ್ಥಿತಿ ಕೈ ಮೀರಬಹುದು. ಹಾಗಾಗಿ ಕಾರ್ಯಾಚರಣೆಯಲ್ಲಿ ಭಾಗಿಯಾದ ಪೊಲೀಸರಲ್ಲದೆ ಒಂದು ಕೆಎಸ್‌ಆರ್‌ಪಿ ತುಕಡಿಯನ್ನು ತೊಕ್ಕೊಟ್ಟಿನಲ್ಲಿ ನಿಯೋಜಿಸಲಾಯಿತು.


ಬುರ್ಖಾಧಾರಿ ವಿದ್ಯಾದಿನಕರ್

ಚೈಲ್ಡ್‌ಲೈನ್‌ನ ಅಸುಂತಾ ಡಿಸೋಜಾ ಮತ್ತು ಪತ್ರಕರ್ತ ನವೀನ್ ಸೂರಿಂಜೆ ಮೊದಲೇ ಕ್ಲೀನಿಕ್‌ನಲ್ಲಿರುವ ಸರದಿ ಸಾಲಲ್ಲಿ ನಿಂತಿದ್ದರು. ಅವರ ಗೆಳೆಯರಾದ ರಾಜೇಶ್ ರಾವ್, ರಾಜೇಶ್ ಪೂಜಾರಿ ಕೂಡಾ ಸಾಥ್ ನೀಡಿದರು. ಅಷ್ಟರಲ್ಲಿ ಲಿನೇಟಾ ವೇಗಸ್ ಹೇಳಿದಂತೆ ಮಗುವನ್ನು ಹಿಡಿದುಕೊಂಡು ಬಂದಿದ್ದರು. ವಿದ್ಯಾದಿನಕರ್ ಬುರ್ಖಾಧಾರಿ ಮುಸ್ಲಿಂ ಮಹಿಳೆಯಾಗಿ, ಪೊಲೀಸ್ ಕಾನ್ಸ್‌ಟೇಬಲ್ ಇರ್ಫಾನ್ ಎಂಬವರು ವಿದ್ಯಾದಿನಕರ್ ಗಂಡನಾಗಿಯೂ ನಟನೆ ಮಾಡಿ ಕ್ಲಿನಿಕ್‌ಗೆ ಬಂದರು. ಮಗುವನ್ನು ಆಕೆ ವಿದ್ಯಾ ದಿನಕರ್ ಕೈಗಿಡಬೇಕಾದರೆ ಹಣದ ಕಂತೆಯನ್ನು ಆಕೆಯ ಕೈಗಿಡಬೇಕಿತ್ತು. ತಂಡದ ಮನವಿಯಂತೆ 90 ಸಾವಿರ ರೂಪಾಯಿಯನ್ನು ಪೊಲೀಸ್ ಕಾನ್ಸ್‌ಟೇಬಲ್ ಇರ್ಫಾನ್ ಕೈಯಲ್ಲಿ ಪೊಲೀಸ್ ಕಮಿಷನರ್ ಕಳುಹಿಸಿದ್ದರು. ಸ್ವಲ್ಪ ಹೊತ್ತು ಲಿನೇಟಾ ವೇಗಸ್ ಜೊತೆ ಮಾತುಕತೆ ನಡೆಸಿದ ವಿದ್ಯಾದಿನಕರ್ ಮತ್ತು ಗಂಡನ ಪಾತ್ರಧಾರಿ ಇಕ್ಬಾಲ್ ಅವರು ಲಿನೇಟಾ ವೇಗಸ್ ಕೈಗೆ 90 ಸಾವಿರದ ಹಣದ ಕಂತೆಯನ್ನು ಹಸ್ತಾಂತರಿಸಿದರು. ಹಣ ಪಡೆದ ಲಿನೇಟಾ ವೇಗಸ್ ಮಗುವನ್ನು ವಿದ್ಯಾದಿನಕರ್‌ಗೆ ಹಸ್ತಾಂತರಿಸಿದರು. ವಿದ್ಯಾದಿನಕರ್ ಮತ್ತು ಇಕ್ಬಾಲ್ ಮಗುವನ್ನು ಜೋಪಾನವಾಗಿ ಕ್ಲಿನಿಕ್‌ನಿಂದ ಹೊರ ತಂದು ಕಾರಲ್ಲಿ ಕುಳಿತು ಕಾರು ಚಲಿಸಿದ ತಕ್ಷಣ ಲಿನೇಟಾ ವೇಗಸ್‌ರನ್ನು ಅರೆಸ್ಟ್ ಮಾಡಲಾಯಿತು. ಬಳಿಕ ಆಕೆಯನ್ನು ಆಕೆಯ ಮನೆಗೆ ಕರೆದೊಯ್ದು ಆಕೆಯ ಬಳಿ ಇದ್ದ ಎಲ್ಲಾ ನಕಲಿ ಸರ್ಟಿಫಿಕೇಟ್‌ಗಳು, ಎಟಿಎಂ ಕಾರ್ಡ್‌ಗಳು, ದೆಹಲಿ ವಿಳಾಸದ ನಕಲಿ ವಿಸಿಟಿಂಗ್ ಕಾರ್ಡ್‌ಗಳು, ಮಗುವಿನ ದಾಖಲೆಗಳನ್ನು ವಶಪಡಿಸಲಾಯ್ತು. ಚೆನ್ನವ್ವಳನ್ನು ಪತ್ತೆ ಹಚ್ಚಿ ಆಕೆಯದ್ದೇ ಮಗು ಎಂದು ದಾಖಲೆಗಳ ಸಹಿತ ನಿರೂಪಿಸಿ ಎಫ್ಐಆರ್ ದಾಖಲಿಸಲಾಯ್ತು.

2013 ರಿಂದ ನ್ಯಾಯಾಲಯದಲ್ಲಿ ಮಕ್ಕಳ ಕಳ್ಳಸಾಗಾಟದ ಈ ಪ್ರಕರಣ ವಿಚಾರಣೆ ನಡೆಯುತ್ತಿತ್ತು. ಸರ್ಕಾರದ ಪರವಾಗಿ ಸರ್ಕಾರಿ ವಕೀಲರು ಸಶಕ್ತವಾಗಿ ವಾದ ಮಂಡಿಸಿದ್ದಾರೆ. ಪ್ರತಿಕೂಲ ಸಾಕ್ಷಿಗಳನ್ನು ಮರುವಿಚಾರಣೆ ನಡೆಸಿ ಮಕ್ಕಳ ಕಳ್ಳಸಾಗಾಟಗಾರರಿಗೆ ಶಿಕ್ಷೆಯಾಗುವಂತೆ ಸರ್ಕಾರಿ ವಕೀಲರು ಶ್ರಮ ವಹಿಸಿದ್ದಾರೆ. ಸದ್ಯ ಮಕ್ಕಳ ಕಳ್ಳಸಾಗಾಟಗಾರರಾಗಿರುವ ಲಿನೆಟ್ ವೇಗಸ್, ಜೊಸ್ಸಿ ವೇಗಸ್, ಲಸ್ಸೀ ವೇಗಸ್ ರವರಿಗೆ ಶಿಕ್ಷೆ ಪ್ರಕಟವಾಗಿದೆ. ☯

## ಆ ವಕೀಲರು...!!

ಮಗು ಮಾರಾಟ ಪ್ರಕರಣದ ಆರೋಪಿಗಳಾದ ಮಂಗಳೂರು ಹೊರವಲಯದ ಪಜೀರು ನಿವಾಸಿಗಳಾದ ಲಿನೆಟಾ ವೇಗಸ್ (38) ಆಕೆಯ ಪತಿ ಜೊಸ್ಸಿ ವೇಗಸ್ (54) ಲಿನೇಟಾ ವೇಗಸ್‌ಳ ತಾಯಿ ಲೂಸಿ ವೇಗಸ್ (65) ಮತ್ತು ಮಗುವಿನ ತಾಯಿ ಬಾದಾಮಿಯ ರಂಗವ್ವ (45) ಇವರಿಗೆ ಮಂಗಳೂರಿನ 2ನೇ ಹೆಚ್ಚುವರಿ ಜಿಲ್ಲಾ ಸೆಸನ್ಸ್ ನ್ಯಾಯಾಧೀಶ ಜಗದೀಶ್ ವಿ.ಎನ್. ಅವರು ಹತ್ತು ವರ್ಷಗಳ ಕಠಿಣ ಸಜೆ ವಿಧಿಸಿ ಜುಲೈ 4ರಂದು ತೀರ್ಪು ನೀಡಿದ್ದಾರೆ. ಈ ಪ್ರಕರಣದ ಕುತೂಹಲ ಎಂದರೆ ಮಾರಾಟಕ್ಕೆ ಒಳಗಾಗುವಂತಿದ್ದ ಮಗುವನ್ನು ರಕ್ಷಿಸಿ ಮಕ್ಕಳ ಕಲ್ಯಾಣ ಸಮಿತಿಗೆ ಹಸ್ತಾಂತರಿಸಲಾಗಿತ್ತು. ಈ ಪ್ರಕರಣದಲ್ಲಿ ಜೈಲು ಸೇರಿದ್ದ ಮಗುವಿನ ತಾಯಿ ಬಾದಾಮಿಯ ರಂಗವ್ವ ನ್ಯಾಯಾಲದಿಂದ ಜಾಮೀನು ಪಡೆದು ಹೊರ ಬಂದ ಬಳಿಕ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರಾಗಿ ಮಗುವನ್ನು ತನ್ನ ಸುಪರ್ದಿಗೆ ತೆಗದುಕೊಂಡಿದ್ದಳು. ತದನಂತರ ಆಕೆ ಅನಾರೋಗ್ಯದಿಂದ ಮೃತಪಟ್ಟಿದ್ದು, ಆ ಮಗು ಇವತ್ತಿಗೂ ಎಲ್ಲಿದೆ ಎನ್ನುವ ಮಾಹಿತಿ ಇಲ್ಲ.

ಈ ಪ್ರಕರಣದಲ್ಲಿ ಆರೋಪಿಗಳಿಗೆ ಶಿಕ್ಷೆಯಾಗಲು ಪ್ರಮುಖ ಕಾರಣರಾದವರು ಒಬ್ಬರು ವಕೀಲರು. ಆರೋಪಿಗಳು ಮಗುವಿನ ದಾಖಲೆಗಳನ್ನು ತಿದ್ದಲು ವಕೀಲರ ಸಹಾಯವನ್ನು ಕೇಳಿದ್ದರು. ಪೊಲೀಸರು ತನಿಖೆಯ ಸಂದರ್ಭದಲ್ಲಿ ವಕೀಲರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದರು. ಅವರು ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದು ಅಲ್ಲದೆ ಆರೋಪಿಗಳನ್ನು ಗುರುತಿಸಿದ್ದರು. ಇದು ಸಹ ಆರೋಪಿಗಳಿಗೆ ಶಿಕ್ಷೆಯಾಗಲು ಕಾರಣವಾಗಿತ್ತು. ☯

# ಸೆಕೆಂಡ್ ಹ್ಯಾಂಡ್ ಮದ್ವೆಯಾದ ಉಪೇಂದ್ರ ಬಾಮೈದನಿಂದ ಕೊಲೆಯಾದ ರಾಜೇಂದ್ರ !


ಕೊಲೆಯಾದ ರಾಜೇಂದ್ರ

**ಹೊ**ಸದುರ್ಗ ತಾಲ್ಲೂಕಿನ ಹುಣವಿನಡು ಗ್ರಾಮದ ಸರ್ಕಾರಿ ಆಸ್ಪತ್ರೆಯ ಉಪ ಕೇಂದ್ರದಲ್ಲಿ ಸುಜಾತ ಎಂಬಾಕೆ ಎಎನ್‌ಎಂ ಆಗಿ ಕರ್ತವ್ಯ ನಿಭಾಯಿಸ್ತಾರೆ. ಈಕೆ ಶ್ರೀನಿವಾಸುಲು ಎಂಬುವರ ಪತ್ನಿ. ಇವರಿಗೆ ಕವಿತಾ, ಸುದರ್ಶನ್, ರಾಜೇಂದ್ರ ಎಂಬ ಮೂರು ಮಕ್ಕಳು. ಕವಿತಾ ಸುದರ್ಶನ್‌ಗೆ ಈಗಾಗಲೇ ಮದುವೆಯಾಗಿ ಅವರು ಸುಖ ಸಂಸಾರ ನಡೆಸ್ತಿದ್ದಾರೆ. ಇನ್ನು, ಕಿರಿಯ ಮಗ ರಾಜೇಂದ್ರನಿಗೆ ಈಗ್ಗೆ ಆರು ತಿಂಗಳ ಹಿಂದೆಯಷ್ಟೇ ಕಿರಣ ಎಂಬ ಹೆಣ್ಣನ್ನು ತಂದು ಮದುವೆ ಮಾಡಲಾಗಿದೆ. ಕಿರಣಳಿಗೆ ಇದು ಎರಡನೇ ಮದುವೆ! ಇವನೋ ಥೇಟ್ ಉಪೇಂದ್ರನಂಥಾ ಮನುಷ್ಯ. ಸದಾ ಫಿಲಾಸಫಿ ಮಾತಾಡ್ತಾ ಎಲ್ಲಾರ್ ಮನೆ ದೋಸೇನೂ ತೂತೇ... ಎನ್ನುತ್ತಾ, ಸೆಕೆಂಡ್ ಹ್ಯಾಂಡ್ ಕಿರಣ್‌ಳಿಗೆ ಬಾಳು ಕೊಟ್ಟಿದ್ದ! ಹೊಸತರಲ್ಲಿ ಎಲ್ಲವೂ ಚೆನ್ನಾಗಿಯೇ ಇತ್ತು. ಗಂಡ ಹೆಂಡತಿ ಅನ್ಯೋನ್ಯವಾಗಿ ಬಾಳ್ವೆ ಸಾಗಿಸಿದ್ರು. ಆದ್ರೆ, ಬರ್ತಾ ಬರ್ತಾ ಅದೇನಾಯ್ತೋ ಏನೋ, ರಾಜೇಂದ್ರ-ಕಿರಣಳ ಮಧ್ಯೆ ಮನಸ್ತಾಪ ಏರ್ಪಟ್ಟಿತ್ತು!


ಡಿವೈಎಸ್ಪಿ ಶಿವಕುಮಾರ್


ಸಿಪಿಐ ಕೆ.ಟಿ. ರಮೇಶ್

ಆ ಮನೆಯಲ್ಲಿ ಯಾವಾಗಲೂ ಜಗಳ. ನೆರೆಹೊರೆಯವರಿಗೆ ಕಿರಿಕಿರಿ. ಇವರು ಜಗಳ ಶುರುವಚ್ಚಿಕೊಂಡ್ರೆ ಅವರೆಲ್ಲಾ ಅದೆಷ್ಟು ಶಪಿಸುತ್ತಿದ್ರೋ ಏನೋ.

ರಾಜೇಂದ್ರ-ಕಿರಣಳ ಸಂಸಾರ ಹೀಗೆ ದಿಕ್ಕುತಪ್ಪಿದ ದೋಣಿಯಂತೆ ಚಲಿಸುತ್ತಿರುವಾಗ, ಆರು ತಿಂಗಳ ಹಿಂದಷ್ಟೇ ಎರಡನೇ ಮದ್ವೆಯಾಗಿದ್ದ ಕಿರಣಳು, ಈ ಎರಡನೇ ಗಂಡನನ್ನೂ ತೊರೆದು ತವರುಮನೆ ಸೇರಿಕೊಂಡಳು! ಇದರಿಂದ ನಡೆಯಬಾರದ ಅನಾಹುತವೇ ನಡೆದುಹೋಯ್ತಲ್ಲಾ!

ಹುಣವಿನಡು ಗ್ರಾಮದಲ್ಲಿ ಕಿರಣಳ ಸೋದರಮಾವ ಕೃಷ್ಣಮೂರ್ತಿ ಇದ್ದನು. ಈತ ಗಂಡ-ಹೆಂಡತಿಗೆ ಬುದ್ಧಿ ಹೇಳಿ ಅವರ ಸಂಸಾರವನ್ನು ಸರಿಪಡಿಸುವುದಕ್ಕಿಂತ, ನ್ಯಾಯ ಹೇಳುವ ನೆಪದಲ್ಲಿ ಎರಡು ಕುಟುಂಬಗಳ ನಡುವೆ ಬೆಂಕಿ ಹಚ್ಚಿದ್ದ ಎನ್ನಲಾಗಿದೆ. ಈತನ ಕುಮ್ಮಕ್ಕಿನಿಂದಲೇ ರಾಜೇಂದ್ರನ ಕೊಲೆಯಾದದ್ದು ಎಂದು ಆರೋಪಿಸಲಾಗ್ತಿದೆ. ಕಿರಣಳಿಗೆ ಸಾಗರ್ ಎಂಬ ಅರಿವುಗೇಡಿ ಸೋದರನಿದ್ದಾನೆ. ಅವನು ತನ್ನ ತಂಗಿಯ ಬಾಳು ಹಾಳಾಯ್ತು ಅಂತ ಬಾವ ರಾಜೇಂದ್ರನ ವಿರುದ್ಧ ಕತ್ತಿಮಸೆಯುತ್ತಿದ್ದ. ಅವನಿಗೆ ಸೋದರಮಾವ ಕೃಷ್ಣಮೂರ್ತಿ ಕುಮ್ಮಕ್ಕು! ಈ ಸಾಗರ ದಿನಾಂಕ 26-06-2025ರಂದು ತನ್ನ ಸ್ನೇಹಿತರಾದ ಕಿರಣ್‌ಕುಮಾರ್, ಅಭಿಷೇಕ್, ಕೃಷ್ಣಪ್ಪ, ಕರಿಯಪ್ಪ, ಯಶವಂತ್, ಸಂಜಯ್ ಎಂಬುವರನ್ನು ತನ್ನ ಜೊತೆ ಮಾಡಿಕೊಂಡು ಬಾವ ರಾಜೇಂದ್ರನ ಮನೆಗೆ ನುಗ್ಗಿದ್ದಾನೆ. ಆಗ ರಾಜೇಂದ್ರ ಸ್ನಾನದ ಕೊಠಡಿಯಲ್ಲಿ ಸ್ನಾನ ಮಾಡ್ತಿದ್ದನಂತೆ. ಅಲ್ಲಿಯೇ ಅವನ ಮೇಲೆ ದಾಳಿ ನಡೆಸಿ ಮಚ್ಚಿನಿಂದ ಮನಸೋಇಚ್ಛೆ ಕೊಚ್ಚಿ ಬಿಸಾಡಿ ಪರಾರಿಯಾಗಿದ್ದರು! ಮಗ ರಾಜೇಂದ್ರನು ಕೊಲೆಯಾದ ವಿಚಾರವನ್ನು ಅರಿತು ತಾಯಿ ಸುಜಾತ ಮನೆಗೆ ಓಡಿ ಬಂದು ರಕ್ತದ ಮಡುವಿನಲ್ಲಿ ಬಿದ್ದಿದ್ದ ಮಗನ ಶವ ನೋಡಿ ಎದೆಯೊಡೆದುಕೊಂಡು ಗೋಳಾಡಿದ್ದಾರೆ.


ಆರೋಪಿಗಳಾದ ಕೃಷ್ಣಮೂರ್ತಿ ಹಾಗೂ ಸಾಗರ್

ನಂತರ ಹೊಸದುರ್ಗ ಪೊಲೀಸ್ ಠಾಣೆಗೆ ತೆರಳಿ ಈ ಬಗ್ಗೆ ವಿವರಿಸಿ ದೂರು ಸಲ್ಲಿಸಿದ್ದಾರೆ. ಕ್ರೈಂ ನಂ. 292/2025, 103(1), 238, 54 ರೆಡ್‌ವಿತ್ 3(5) ಬಿಎನ್‌ಎಸ್ ಆಕ್ಟ್ ಪ್ರಕಾರ ದಾಖಲಿಸಿಕೊಂಡು ತನಿಖೆ ಆರಂಭಿಸಿದ ಪೊಲೀಸ್ ಇನ್ಸ್‌ಪೆಕ್ಟರ್ ಕೆ.ಟಿ. ರಮೇಶ್ ಈ ಕೊಲೆ ನಡೆದ 12 ತಾಸಿನ ಒಳಗಡೆ ಎಲ್ಲಾ ಏಳು ಮಂದಿ ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೊಪ್ಪಿಸಿರುತ್ತಾರೆ.

ಚಿತ್ರದುರ್ಗ ಜಿಲ್ಲಾ ಎಸ್ಪಿ ರಂಜಿತ್‌ಕುಮಾರ್ ಬಂಡಾರು, ಡಿವೈಎಸ್ಪಿ ಶಿವಕುಮಾರ್ ಟಿ.ಎಂ.ರವರು ಕೆ.ಟಿ. ರಮೇಶ್‌ರ ಸಾಹಸ ಕಾರ್ಯವನ್ನು ಪ್ರಶಂಸಿಸಿದ್ದಾರೆ.

**-ಹಿರಿಯೂರು ರಫೀಕ್**


ಆರೋಪಿಗಳಾದ ಯಶವಂತ್, ಸಂಜಯ್, ತಿಪ್ಪೇಸ್ವಾಮಿ, ಮಹಮದ್ ಶೋಯಬ್, ಕರಿಯಪ್ಪ, ಅಭಿಷೇಕ್

# ಕೌಟುಂಬಿಕ ಕಲಹ, ಪತ್ನಿಯನ್ನು ಕೊಂದು ತಾನೂ ಆತ್ಮಹತ್ಯೆ ಮಾಡಿಕೊಂಡು ಗಂಡ!


ಲಲತಾಳ ಮೃದೇಹ

9 ☜

ಮುಂದಿನ ಕ್ರಮ ಕೈಗೊಂಡಿರುತ್ತಾರೆ. ಸ್ಥಳಕ್ಕೆ ಎಸ್ಪಿ ಬಿ. ನಿಖಿಲ್, ಎಎಸ್ಪಿ ರವಿಶಂಕರ್, ಡಿವೈಎಸ್ಪಿ ನಾಗ್ತೆ, ಪಿಐ ಕೆ. ಕಾಂತರಾಜು, ಬೆರಳಚ್ಚು ತಜ್ಞರು ಹಾಗೂ ಶ್ವಾನದಳದೊಂದಿಗೆ ಭೇಟಿ ನೀಡಿ ಪರಿಶೀಲಿಸಿದ ನಂತರ ಪಂಚರ ಸಮಕ್ಷಮದಲ್ಲಿ ಮಹಜರ್ ನಡೆಸಿದ ಮೇಲೆ ಶವವನ್ನು ನಗರದ ಎಸ್‌ಎನ್‌ಆರ್ ಆಸ್ಪತ್ರೆಗೆ ಸಾಗಿಸಿ ಅಲ್ಲಿ ಮರುದಿನ ಬೆಳಿಗ್ಗೆ ಶವಪರೀಕ್ಷೆ ನಂತರ ಮೃತದೇಹವನ್ನು ವಾರಸುದಾರರಿಗೆ ನೀಡಲಾಯಿತು. ಆರೋಪಿ ಮುನಿರಾಜು ಬಂಧನಕ್ಕಾಗಿ ಎಸ್ಪಿ ಬಿ. ನಿಖಿಲ್, ಡಿವೈಎಸ್ಪಿ ನಾಗ್ತೆರವರ ಮಾರ್ಗದರ್ಶನದಲ್ಲಿ ಕೆ. ಕಾಂತರಾಜ್‌ರವರ ನೇತೃತ್ವದಲ್ಲಿ ರೈಟರ್ ಹೆಚ್‌ಸಿ ಮಂಜುನಾಥ ಆರಾಧ್ಯ, ಸಿಬ್ಬಂದಿಗಳಾದ ಶಿವರಾಜ್ ಆಚಾರಿ, ಮುರುಳಿ, ಆಂಜಿ, ನವೀನ್, ಸತೀಶ್, ಮಹಿಳಾ ಪಿಸಿ ಅಶ್ವಿನಿ ಮುಂತಾದವರ ತಂಡವನ್ನು ರಚಿಸಲಾಗಿತ್ತು.


ರೈಟರ್ ಮಂಜುನಾಥ್ ಆರಾಧ್ಯ

ಜೂನ್ 6ರಂದು ಬೆಳಿಗ್ಗೆ 10 ಗಂಟೆಗೆ ತೇರಹಳ್ಳಿ ಗ್ರಾಮದ ಲೇಟ್ ಕೆಂಚಪ್ಪನ ಮಗ ತಿಮ್ಮರಾಯಪ್ಪನವರು ಕೋಲಾರ ಗ್ರಾಮಾಂತರ ಠಾಣೆಗೆ ಹಾಜರಾಗಿ ನನ್ನ ಅಣ್ಣನ ಮಗ ಮುನಿರಾಜು ಕೌಟುಂಬಿಕ ಕಲಹದಿಂದ ಹೆಂಡತಿ ಗಂಡ ಜಗಳ ಮಾಡಿಕೊಂಡು ಹೆಂಡತಿಯನ್ನು ಕೊಲೆ ಮಾಡಿ ಪರಾರಿಯಾಗಿದ್ದವನು ಜೂನ್ 5ರಂದು ಸಂಜೆ 4 ಗಂಟೆ ಸಮಯದಲ್ಲಿ ತನ್ನ ಜಮೀನಿನ ಮರವೊಂದಕ್ಕೆ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ. ಕೊಲೆ ಮಾಡಿ ತಲೆಮರೆಸಿಕೊಂಡಿದ್ದವನು ಮುಂದಿನ ಪರಿಣಾಮವನ್ನು ಎದುರಿಸಲಾರದೆ ಹಾಗೂ ಮಕ್ಕಳಿಗೆ ತನ್ನ ಮುಖವನ್ನು ತೋರಿಸಲಾಗದೆ, ಸಮಾಜಕ್ಕೆ ಹೆದರಿಕೊಂಡು ಮಾನಸಿಕವಾಗಿ ನೊಂದು, ಜೀವನದಲ್ಲಿ ಜಿಗುಪ್ಸೆಗೊಂಡು ಹೆಂಡತಿಯ ಸೀರೆಯಲ್ಲಿಯೇ ನೇಣು ಹಾಕಿಕೊಂಡಿರುತ್ತಾನೆ. ಇವನ ಸಾವಿಗೆ ಬೇರೆ ಯಾವುದೇ ಅನುಮಾನ ಇರುವುದಿಲ್ಲವೆಂದು ದೂರು ನೀಡಿದನು. ಸ್ಥಳಕ್ಕೆ ಹೋಗಿ ಪರಿಶೀಲಿಸಿದ ನಂತರ ಆರೋಪಿ ಗಂಡ ಮುನಿರಾಜು ಎಂದು ಖಚಿತಪಡಿಸಿಕೊಂಡ ಪೊಲೀಸರು ವಿಡಿಆರ್ 00029/2025 ಬಿಎನ್‌ಎಸ್ 2023 (ಯು/ಎಸ್ 194) ರ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡ ನಂತರ ಶವವನ್ನು ಕೋಲಾರದ ಎಸ್‌ಎನ್‌ಆರ್ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಿ ಶವಪರೀಕ್ಷೆ ನಂತರ ವಾರಸುದಾರರಿಗೆ ಮೃತದೇಹವನ್ನು ನೀಡಲಾಯಿತು. ಗಂಡನ ದುಡುಕಿನಿಂದ ಪತ್ನಿಯನ್ನು ಕೊಂದು ತಾನು ಆತ್ಮಹತ್ಯೆ ಮಾಡಿಕೊಂಡು ಮಸಣ ಸೇರಿ ತನ್ನ ಮೂರು ಹೆಣ್ಣು ಮಕ್ಕಳನ್ನು ಅನಾಥರನ್ನಾಗಿ ಮಾಡಿ ಹೋಗಿದ್ದಾನೆ.

# ದೇಶದ ಅತಿ ದೊಡ್ಡ ರಾಬರಿಯಾಗಿದ್ದ ಕೆನರಾ ಬ್ಯಾಂಕ್ ದರೋಡೆ ಪ್ರಕರಣ ಬೇಧಿಸಿದ ಎಸ್ಪಿ ಲಕ್ಷ್ಮಣ್ ನಿಂಬರಗಿ!

ವಿಜಯಪುರ
✎ರಾಜೀವ್ ಬೈರಿ

ವಿಜಯಪುರ ಜಿಲ್ಲೆಯ ಮನಗೂಳಿ ಪಟ್ಟಣದ ಕೆನರಾ ಬ್ಯಾಂಕ್ ಲಾಕರ್‌ನಲ್ಲಿದ್ದ ಚಿನ್ನದ ದರೋಡೆ ಪ್ರಕರಣ ರಾಜ್ಯದಲ್ಲಿಯೇ ಅತ್ಯಂತ ಪ್ರಮುಖ ಹಾಗು ದೇಶದ ಎರಡನೇ ದೊಡ್ಡ ಪ್ರಕರಣ. ಈ ಹಿಂದೆ ಕೇರಳದಲ್ಲಿ 86 ಕೆಜಿ ಚಿನ್ನವನ್ನು ಕಳ್ಳತನ ಮಾಡಲಾಗಿತ್ತು. ಇಲ್ಲಿ ಅಂದ್ರೆ ವಿಜಯಪುರದಲ್ಲಿ 58.97 ಕೆಜಿ ಬಂಗಾರವನ್ನು ಕಳ್ಳತನ ಮಾಡಲಾಗಿದ್ದು ಅದರ ಒಟ್ಟು ಮೊತ್ತ 53.26 ಕೋಟಿ ರೂ. ಅತ್ಯಂತ ಜಟಿಲವಾದ ಪ್ರಕರಣವನ್ನು ಭೇದಿಸಿದ ವಿಜಯ



ಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ನೇತೃತ್ವದ 9 ಅಧಿಕಾರಿಗಳ ತಂಡ ವಿವಿಧ ಆಯಾಮಗಳಲ್ಲಿ ಕೆಲಸ ಮಾಡಿ, ಅಪರಾಧಿಗಳನ್ನು ಪತ್ತೆ ಹಚ್ಚಿ, ಹೆಚ್ಚಿನ ಮಾಲು ಸಮೇತ ಬಂಧಿಸುವಲ್ಲಿ ಯಶಸ್ವಿಯಾಗಿದೆ.

ಈ ಕಾರಣಕ್ಕೆ ನಿನ್ನೆ ಜಿಲ್ಲಾ ಉಸ್ತುವಾರಿ ಸಚಿವರಾದ ನಮ್ಮ ಎಂ.ಬಿ. ಪಾಟೀಲ ಅವರು ಲಕ್ಷ್ಮಣ ನಿಂಬರಗಿ ಅವರನ್ನು ಗೌರವಿಸಿದರು. ಏಕೆಂದರೆ ಈ ಹಿಂದೆ 2013-18 ರ ಅವಧಿಯಲ್ಲಿ ಅವರು ಜಿಲ್ಲೆಯ ಉಸ್ತುವಾರಿ ಸಚಿವ ರಾಗಿದ್ದಾಗ ಸ್ವತಃ ಅವರ ಸಹೋದರಿ ಕಲ್ಪನಾ ಮಹೇಶ ಪಾಟೀಲ ಅವರ ಮನೆ ದರೋಡೆಯಾಗಿತ್ತು. ಆ ಸಂದರ್ಭದಲ್ಲಿ ಪೊಲೀಸ್ ಇಲಾಖೆ ಎಲ್ಲ ಪ್ರಯತ್ನಗಳನ್ನು ಮಾಡಿದರು ಸಹ ಇನ್ನೇನು ಅಪರಾಧಿಗಳನ್ನು ಪುಣೆ ಮಹಾ ನಗರದಲ್ಲಿ ಬಂಧಿಸಬೇಕು ಎನ್ನುವಷ್ಟರಲ್ಲಿ ಪೊಲೀಸರಿಗೆ ಚಳ್ಳೇಹಣ್ಣು ತಿನ್ನಿಸಿ ಅಪರಾಧಿಗಳು ಪಾರಾಗಿದ್ದರು. ಇಂದಿಗೂ ಅವರು ಸಿಕ್ಕಿಲ್ಲ.

ಆದರೆ ಈ ಪ್ರಕರಣದಲ್ಲಿ ಎಸ್ಪಿ ಲಕ್ಷ್ಮಣ ನಿಂಬರಗಿ ಅವರು ಎಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಹಗಲು ರಾತ್ರಿ ಇಲ್ಲಿ ಕೆಲಸ ಮಾಡಿದ್ದು ಪರಿಣಾಕಾರಿಯಾಗಿದೆ. ವಿಜಯಪುರ ಸುತ್ತ ಮುತ್ತಲಿನ 200 ಕಿಮೀ ದೂರದ ಸಿಸಿಟಿವಿಗಳ ದೃಶ್ಯಾವಳಿಗಳ ಪರಿಶೀಲಿಸುವ ಒಂದು ತಂಡ. ದೇಶದ ರಾಜ್ಯದ ವಿವಿಧಡೆ ಬ್ಯಾಂಕ್ ದರೋಡೆ ಪ್ರಕರಣಗಳಲ್ಲಿರುವ ಅಪರಾಧಿಗಳ ಮಾಹಿತಿ ಯನ್ನು ಕಲೆ ಹಾಕಿ ಹೋಲಿಕೆ ಮಾಡುವ ಮತ್ತೊಂದು ತಂಡ.

ಬಳಸಿರಬಹುದಾದ ಮೊಬೈಲ್ ಕರೆಗಳನ್ನು ದಾಖಲಿಸಿ ಮಾಹಿತಿ ಸಂಗ್ರಹಿಸುವ ತಂಡ. ಬ್ಯಾಂಕ್ ಸಿಬ್ಬಂದಿಯ ಚಲನವಲನಗಳು ಹಾಗೂ ಅವರ ಹಿಂದಿನ ಟ್ರಾಕ್ ರಿಕಾರ್ಡ್‌ಗಳನ್ನು ಅಭ್ಯಸಿಸಲು ಒಂದು ತಂಡ ಹೀಗೆ ಒಟ್ಟು 9 ತಂಡಗಳನ್ನು ಅವರು ರಚಿಸಿ, ಅವುಗಳ ಮೂಲಕ ಕೆಲಸವನ್ನು ಮಾಡಿದ್ದಾರೆ.

ನಿನ್ನೆ ಎಸ್ಪಿ ನಿಂಬರಗಿ ಅವರು ಸಿಕ್ಕಾಗ ಹೇಳಿದ ಮಾಹಿತಿಗಳು ಕೇಳಿ ದಂಗಾದೆ. ಬಹುಶ ಹಾಲಿ ವುಡ್ ಸಿನಿಮಾದ ರೋಚಕತೆಗಿಂತಲೂ ಹೆಚ್ಚಿನದು. ನೆಟ್ ಫ್ಲಿಕ್ಸ್ ಬಿಬಿಸಿ ಡಿಸ್ಕವರಿ ಅವರಿಂದ ಈ ದರೋಡೆ ಪ್ರಕರಣವೇ ಒಂದು ದೊಡ್ಡ ಡಾಕ್ಯು ಮೆಂಟ್ರಿ ಆಗುತ್ತದೆ. ಇಲ್ಲಿ ಅಪರಾಧಕ್ಕೆ ಹಲವರನ್ನು ಬಳಸಿಕೊಂಡಿದ್ದರೂ ಸೂತ್ರಧಾರ ಯಾರಿಗೂ ಯಾವುದೇ ಗುಟ್ಟು ಬಿಟ್ಟು ಕೊಟ್ಟಿಲ್ಲ. ಅವರವರಿಗೆ ಆಯಾ ಕೆಲಸಗಳನ್ನು ವಹಿಸಿ, ನಾವು ಯಾವ ಉದ್ದೇಶಕ್ಕಾಗಿ ಈ ಕೆಲಸವನ್ನು ಮಾಡುತ್ತಿದ್ದೇವೆ ಎನ್ನುವುದು ಯಾರಿಗೂ ಮಾಹಿತಿ ಇಲ್ಲ. ಕೇವಲ 3-4 ಜನರ ಕೋರ್ ಟೀಂ ಹೊರತುಪಡಿಸಿ ಉಳಿದವರಿಗೆ





ಯಾರಿಗೂ ನಾವು ಬಹುದೊಡ್ಡ ದರೋಡೆಯಲ್ಲಿದ್ದೇವೆ ಎಂಬ ಸುಳಿವು ಇಲ್ಲ.

ನೆಟ್ ಫ್ಲಿಕ್ಸ್‌ನಲ್ಲಿ ವಿವಿಧ ರಾಬರಿ ಪ್ರಕರಣವುಳ್ಳ ಸೀರಿಸ್ ಗಳನ್ನು ನೋಡುವುದು. ಕೇರಳ ಮತ್ತಿತರ ಕಡೆ ಆಗಿರುವ ಬ್ಯಾಂಕ್ ದರೋಡೆ ಸಂದರ್ಭದಲ್ಲಿ ಅಪರಾಧಿ ಗಳು ಬಳಸಿರುವ ಮಾಹಿತಿ ಯನ್ನು ಪಡೆದುಕೊಂಡು ಯಾವುದೇ ಸಂದರ್ಭದಲ್ಲೂ ಕೂಡ ಮೊಬೈಲ್‌ಗಳನ್ನು ಇಲ್ಲಿ ಇವರು ಬಳಸಿಲ್ಲ. ಗೋವಾದ ಹೋಟೆಲ್ ನಲ್ಲಿಯೇ ಮೊಬೈಲ್‌ಗಳನ್ನು ಆನ್ ಮಾಡಿಟ್ಟು, ಕರೆ ಸ್ವೀಕರಿಸುವಂತೆ ಮಾಡಿ, ಇವರು ಮನಗೂಳಿಯಲ್ಲಿ







ದರೋಡೆಯಲ್ಲಿ ಕಾರ್ಯನಿರತರಾಗಿದ್ದರು. ಅಪರಾಧಿಗಳು ಎಷ್ಟು ಜಾಣರಾಗಿದ್ದರು ಎಂದರೆ ಒಂದಲ್ಲ ಒಂದು ಸಲ ಸಿಕ್ಕಿ ಬಿದ್ದರೆ ನಾವು ಬಚಾವ ಆಗಲು ಏನೇನು ಮಾಡಬಹುದು ಎಂದು ಮೊದಲೇ ಸಿದ್ಧತೆ ಮಾಡಿಕೊಂಡಿದ್ದರು.

ಅಪರಾಧಿಗಳ ಒಂದು ಸಣ್ಣ ಸುಳಿವು ಸಹ ಸಿಕ್ಕಿರಲಿಲ್ಲ ಇಂಥಹದರಲ್ಲಿ ಇವರ ಪತ್ತೆಯೇ ಒಂದು ಸವಾಲಾಗಿತ್ತು. ಮೇಲಾಗಿ ಪೊಲೀಸರನ್ನು ದಾರಿ ತಪ್ಪಿಸಲು ಮಾಟ-ಮಂತ್ರದ ನಾಟಕ ಬೇರೆ ಸೃಷ್ಟಿಸಲಾಗಿತ್ತು. ಇದರಿಂದಾಗಿ ಕೇರಳದ ದರೋಡೆಕೋರರೆ ಮಾಡಿರ ಬಹುದು ಎಂಬುದು. ಅಲ್ಲದೆ, ದರೋಡೆ ಗಾಗಿ ಇಂಡಿಯನ್ ರೇಲ್ವೆಯ ಸರಕಾರಿ ಟ್ರಕ್‌ನ್ನು ಬಳಸಿ ಅದರಲ್ಲಿಯೇ ಸ್ಕೂಟರ್, ಮೋಟಾರ್ ಸೈಕಲ್ ಹಾಗೂ ಚಿನ್ನವನ್ನು ಸಾಗಾಣಿಕೆ ಮಾಡಿದ್ದು ಯಾರಿಗೂ ಸಂಶಯ ಬರುವ ಹಾಗೆ ಕಂಡಿರಲಿಲ್ಲ.



ಇಷ್ಟೆಲ್ಲಾ ಇದ್ದಾಗ ಇವರನ್ನು ಹೇಗೆ ಪತ್ತೆ ಹಚ್ಚಿದಿರಿ ಎಂದೇ? ಮನಗೂಳಿ ದರೋಡೆ ಪ್ರಕರಣದಲ್ಲಿ ಸಮೀಪದಲ್ಲೊಂದು ಇನ್ನೋವಾ ಕಾರ್ ಹೋಗಿತ್ತು. ಅದೇ ರೀತಿ ಅದೇ ಇನ್ನೋವಾ ಬಾಗಲಕೋಟೆ ಗದ್ದನಕೇರಿ ಕ್ರಾಸ್ ಸಮೀಪ ಹೋಟೆಲ್ ಹತ್ತಿರ ಸಿಸಿಟಿವಿ ಯಲ್ಲಿ ಕಾಣಿಸಿ ಕೊಂಡಿತ್ತು. ಸಂಶಯಗೊಂಡು ಅದೇ ಇನ್ನೋವಾ ಇರಬಹು ದೆಂದು ನೋಡಿ ಅದರ ನಂಬರ್ ಚೆಕ್ ಮಾಡಿದಾಗ ಅದು ಹುಬ್ಬಳ್ಳಿಯ ವಿಳಾಸ ತೋರಿಸಿತ್ತು. ಆಗ ಬ್ಯಾಂಕ್ ಹಿಂದಿನ ಮ್ಯಾನೇಜರ್ ಹುಬ್ಬಳ್ಳಿಯವರೇ ಆಗಿದ್ದರು. ಅಲ್ಲಿಗೆ ಈ ಪ್ರಕರಣ ಪತ್ತೆಹಚ್ಚಲು ತಿರುವು ನೀಡಿತ್ತು ಎಂದರು.

ವಿಜಯಪುರ ಜಿಲ್ಲೆಯ ಮಣ್ಣಿನ ಮಗ ಲಕ್ಷ್ಮಣ ನಿಂಬರಗಿ ಉಡುಪಿ, ಬೆಂಗಳೂರು ಮಹಾನಗರಗಳಲ್ಲಿ ಎಸ್ಪಿ ಆಗಿ ಕೆಲಸ ಮಾಡಿದ್ದರೂ ತವರು ಜಿಲ್ಲೆಯಲ್ಲಿ ಮಾಡಬೇಕು ಎಂಬ ಹಂಬಲ ಇತ್ತು. ಇಲ್ಲಿ ದೊರೆತ ಅವಕಾಶವನ್ನು ಸಮರ್ಥವಾಗಿ ನಿಭಾಯಿಸಿ, ರಾಷ್ಟ್ರ ಅಷ್ಟೇ ಏಕೆ ಅಂತರ ರಾಷ್ಟ್ರ ಮಟ್ಟದಲ್ಲಿ ಅಪರಾಧಿ ಲೋಕದಲ್ಲಿ ದಾಖಲಾಗಿರುವ ಈ ಪ್ರಕರಣವನ್ನು ಪತ್ತೆ ಹಚ್ಚುವಲ್ಲಿ ಇವರ ನೇತೃತ್ವದ ಎಲ್ಲ ಅಧಿಕಾರಿಗಳ ತಂಡ ಯಶಸ್ವಿಯಾಗಿದೆ.

ಪೊಲೀಸರು ಎಂದರೆ ಲಂಚಬಾಕರು, ಎಲ್ಲ ಮುಗಿದ ಮೇಲೆ ಬಂದು ಹೋಗುವವರು ಎಂಬ ನಾಣ್ನುಡಿಗಳ ಮಧ್ಯೆ, ವಿಜಯಪುರದ ಪೊಲೀಸರು ಹಾಲಿವುಡ್ ಮಾದರಿಯ ದರೋಡೆ ಪ್ರಕರಣವನ್ನು ಬೇಧಿಸಬಲ್ಲರು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ವಿಜಯಪುರ ಜಿಲ್ಲಾ ಎಸ್ಪಿ ನಿಂಬರಗಿ ಹಾಗೂ ಪೊಲೀಸ್ ಸಿಬ್ಬಂದಿಗೆ ನಮ್ಮ ಸೆಲ್ಯೂಟ್... ☯

# ಫೇಸ್‌ಬುಕ್‌ನಲ್ಲಿ ಹೆಣ್ಮಕ್ಕಳಿಗೆ ಮೇಸೇಜ್ ಮಾಡ್ತಿರಾ? ಹುಷಾರ್!

5 ☞

ಎಂಬ ಆಲೋಚನೆ ಬಂದಿದೆ. ಹೀಗಾಗಿ ಮತ್ತೆ, ಮತ್ತೆ ಫೋನ್ ಮಾಡಿ ಬೆದರಿಸುವುದು, ಹಣಕ್ಕೆ ಬೇಡಿಕೆ ಇಡುವುದು ಮಾಡಿದ್ದಾರೆ. ಅಷ್ಟರಲ್ಲಿಯೇ ಸಾಲ ಮಾಡಿಕೊಂಡು ಸುಸ್ತಾಗಿದ್ದ ಪರಶಿವಮೂರ್ತಿ ಹಣ ಕೊಡುವ ಪರಿಸ್ಥಿತಿಯಲ್ಲಿರಲಿಲ್ಲ. ಜತೆಗೆ ಅವರಿಗೆ ಅಷ್ಟರಲ್ಲಾಗಲೇ ಹಣ ಕೀಳುತ್ತಿರುವವರು ಪೊಲೀಸರಲ್ಲ ಎಂಬುದು ಗೊತ್ತಾಗಿತ್ತು. ಹೀಗಾಗಿ ಬೇರೆ ದಾರಿ ಕಾಣದೆ ಕುಶಾಲನಗರ ಟೌನ್ ಪೊಲೀಸ್ ಠಾಣೆಗೆ ಹೋಗಿ 11-01-2025ರಂದು ದೂರು ನೀಡಿದ್ದರು. ಈ ಸಂಬಂಧ ಕುಶಾಲನಗರ ಟೌನ್ ಪೊಲೀಸ್ ಠಾಣೆಯಲ್ಲಿ ಕಲಂ 318(2), 319(1), 308(2)ರ ಬಿಎನ್‌ಎಸ್ ಆಕ್ಟ್ ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು.

ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಕೆ. ರಾಮರಾಜನ್ ಅವರ ಆದೇಶದ ಮೇರೆಗೆ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡ ಸೋಮವಾರಪೇಟೆ ಉಪವಿಭಾಗ ಡಿವೈಎಸ್ಪಿ ಚಂದ್ರಶೇಖರ್, ಕುಶಾಲನಗರ ವೃತ್ತ ನಿರೀಕ್ಷಕ ರಾದ ಬಿ.ಜಿ. ಪ್ರಕಾಶ್, ಸಬ್‌ಇನ್ಸ್‌ಪೆಕ್ಟರ್ ಗೀತಾ ಹಾಗೂ ಸಿಬ್ಬಂದಿಗಳ ವಿಶೇಷ ತನಿಖಾ ತಂಡವನ್ನು ರಚಿಸಿದ್ದರು. ಈ ತಂಡ ತನಿಖೆ ಕೈಗೊಂಡು ಮಾಹಿತಿ ಸಂಗ್ರಹಿಸ ತೊಡಗಿತ್ತು. ಈ ವೇಳೆ ನಕಲಿ ಪೊಲೀಸ್ ವೇಷದಲ್ಲಿ ಹಣ ವಸೂಲಿ ಮಾಡಿದ ತಂಡದ ಮಾಹಿತಿ ಪತ್ತೆಯಾಗಿತ್ತು.

ಅದರಂತೆ ಕೊಡಗು ಜಿಲ್ಲೆಯ ಮಡಿಕೇರಿ ತಾಲೂಕಿನ ಹಾಲೇರಿ ಗ್ರಾಮದ ಇಬ್ರಾಹಿಂ ಬಾದ್ ಷಾ. (25), ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಮೇಲುಕೋಟೆ ಬಳಿಯ ಬಳಿಘಟ್ಟದ ರಾಘವೇಂದ್ರ(19), ಇಬ್ರಾಹಿಂ ಬಾದ್ ಷಾನ ಹೆಂಡತಿ ಬೆಂಗಳೂರು ಬನಶಂಕರಿಯ ಸಂಗೀತಾ(30), ಕುಶಾಲನಗರ, ಆದರ್ಶ ದ್ರಾವಿಡ ಕಾಲೋನಿಯ ಚರಣ್ ಸಿ.ಕೆ. (19) ಮತ್ತೊಬ್ಬ ಅಪ್ರಾಪ್ತ ಬಾಲಕ ಸೇರಿದಂತೆ ಐದು ಮಂದಿಯನ್ನು ಎತ್ತಾಕಿಕೊಂಡು ಪೊಲೀಸ್ ಭಾಷೆಯಲ್ಲಿ ರುಬ್ಬಿದ್ದಾರೆ. ಈ ವೇಳೆ ಆರೋಪಿ ಗಳು ತಾವು ಮಾಡಿದ್ದನ್ನು ಒಪ್ಪಿಕೊಂಡಿದ್ದಾರೆ. ಆರೋಪಿಗಳಿಂದ ನಾಲ್ಕು ಮೊಬೈಲ್‌ಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಆರೋಪಿಗಳನ್ನು ಪತ್ತೆಹಚ್ಚುವಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿರುವ ಪೊಲೀಸ್ ಅಧಿಕಾರಿಗಳನ್ನು ಮತ್ತು ಸಿಬ್ಬಂದಿಯನ್ನು ಎಸ್ಪಿ ಕೆ. ರಾಮ ರಾಜನ್ ಅವರು ಶ್ಲಾಘಿಸಿದ್ದಾರೆ. ಇನ್ನಾದರೂ ಹೆಣ್ಣಾಗಲೀ, ಗಂಡಾಗಲೀ ಅಪರಿಚಿತರೊಂದಿಗೆ ಚಾಟ್ ಮಾಡುವ ಮುನ್ನ ಎಚ್ಚರವಾಗಿರಿ. ಇಲ್ಲದೇ ಹೋದರೆ ಪರಶಿವ ಮೂರ್ತಿಗೆ ಆಗಿರುವ ಪರಿಸ್ಥಿತಿ ನಿಮಗೂ ಆಗಬಹುದು... ಹುಷಾರ್...!

☯

# ಇಂದಿನ ವೇಶ್ಯೆ

ಒಂದು ಕಾಲದಲ್ಲಿ ವೇಶ್ಯಾಗೃಹದಲ್ಲಿ ಕುಳಿತ ವೇಶ್ಯೆ ಮುಸುಕಿನಲ್ಲಿಯೂ ಅವಮಾನವನ್ನು ಕಂಡುಕೊಳ್ಳುತ್ತಿದ್ದಳು, ಇಂದಿನ ಡಿಜಿಟಲ್ ವೇಶ್ಯೆ ಮೊಬೈಲ್‌ನಲ್ಲಿ ಅವಮಾನದ ಸಮಾಧಿಯನ್ನು ಅಗೆಯುತ್ತಿದ್ದಾಳೆ. ಒಂದು ಕಾಲದಲ್ಲಿ ಅವಳ ಕಣ್ಣುಗಳಲ್ಲಿ ಅಸಹಾಯಕತೆಯ ಕಣ್ಣೀರು ಕಾಣುತ್ತಿತ್ತು, ಇಂದು ಈ ನೃತ್ಯ, ಈ ದೇಹ ಪ್ರದರ್ಶನ – ಎಲ್ಲವನ್ನೂ ಹವ್ಯಾಸದ ಹೆಸರಿನಲ್ಲಿ ಮಾರಾಟ ಮಾಡಲಾಗುತ್ತಿದೆ.

ಮಾನವೀಯತೆಯನ್ನು ಕತ್ತು ಹಿಸುಕಿ ಪ್ರತಿದಿನ ನಗ್ನ ಜಾತ್ರೆಯನ್ನು ಆಯೋಜಿಸುವ ಆ ಅಸಭ್ಯ ಗುಂಪು ಇದು. ಸೊಂಟವನ್ನು ಅಲ್ಲಾಡಿಸಿ, ತುಟಿಗಳನ್ನು ಕಚ್ಚಿ, ಸೀರೆಯನ್ನು ಹರಿದು ಅದನ್ನು ಬ್ಲೌಸ್ ಮಾಡಿ – ಇದು ಅವರ ವಿಷಯ. ಸಂಸ್ಕಾರವಿಲ್ಲ, ಘನತೆ ಇಲ್ಲ, ವಾತ್ಸಲ್ಯವಿಲ್ಲ– ಕೇವಲ ಇಷ್ಟಗಳ ಭೂತ ಮತ್ತು ಅನುಸರಿಸುವಿಕೆ. ಆತ್ಮಸಾಕ್ಷಿ ಮಾರಾಟವಾಯಿತು, ಲೆಹೆಂಗಾ ಹಣದಂತಾಯಿತು, ಪ್ರತಿಯೊಂದು ಅಂಗವನ್ನೂ ಮಾರಿ ತನ್ನನ್ನು ತಾನೇ ನಗಿಸಿಕೊಳ್ಳುವ ಈ ಮಹಿಳೆ ಯಾರು? ತನ್ನ ದೇಹವನ್ನು ತೋರಿಸಿ, ಅವಳು ನಾಲ್ಕು ಲೈಕ್‌ಗಳನ್ನು ಬೇಡಿಕೊಳ್ಳುತ್ತಾಳೆ. ಘನತೆಯ ಚಿತೆ ಸುಟ್ಟುಹೋಗಿದೆ, ಸಂಸ್ಕಾರಗಳು ಕಿರುಚುತ್ತಿವೆ. ಇದು 'ವೈಯಕ್ತಿಕ ಆಯ್ಕೆ' ಎಂದು ನೆಪ ಹೇಳಬೇಡಿ, ಇದು ಸಮಾಜದ ಮುಖದ ಮೇಲಿನ ಕಪ್ಪು ಚುಕ್ಕೆ, ಇದು ಸಂಸ್ಕಾರದ ಕೊಲೆ.

ಮಗಳು ದೇವತೆಯಾಗಿದ್ದರೆ, ದೇವಿಯನ್ನು ಅವಮಾನಿಸಲು ಈ ಬೆತ್ತಲೆ ಮಾರುಕಟ್ಟೆ ಏಕೆ? ಈ ನೃತ್ಯವು ಇನ್ನು ಮುಂದೆ ವೇಶ್ಯಾಗೃಹಕ್ಕೆ ಸೀಮಿತವಾಗಿಲ್ಲ, ಅದು ಈಗ ಮಕ್ಕಳ ಮನಸ್ಸನ್ನು ವಿಷಪೂರಿತಗೊಳಿಸುತ್ತಿದೆ. ನಾಗರಿಕತೆಯ ಸರಮಾಲೆ ಗಾಜಿನಂತೆ ದುರ್ಬಲವಾಗಿದೆ, ಈ ರೀಲ್‌ಗಳ ಬಿರುಗಾಳಿ, ಎಲ್ಲವನ್ನೂ ರಹಸ್ಯವಾಗಿ ಕಿತ್ತುಕೊಂಡಿದೆ. ಇದು 'ಸ್ವಾತಂತ್ರ್ಯ' ಎಂದು ಭಾವಿಸುವವರಿಗೆ, ಅವರಿಗೆ ಹೇಳಿ – ಸ್ವಾತಂತ್ರ್ಯ ಮತ್ತು ಅಸಭ್ಯತೆಯ ನಡುವೆ ವ್ಯತ್ಯಾಸವಿದೆ. ಅಭಿವ್ಯಕ್ತಿ ಮತ್ತು ಅಶ್ಲೀಲತೆಯ ನಡುವೆ ದೊಡ್ಡ ವ್ಯತ್ಯಾಸವಿದೆ. ಎದ್ದೇಳಿ, ಈ ಡಿಜಿಟಲ್ ವೇಶ್ಯಾವಾಟಿಕೆ ಮಾರುಕಟ್ಟೆಯನ್ನು ಬಹಿಷ್ಕರಿಸಿ. ಹೋರಾಡಿ, ವೇಶ್ಯಾವಾಟಿಕೆ ಈ ವರ್ಚುವಲ್ ಅಂಗಡಿಯನ್ನು ಮುಚ್ಚಿ. ಸಂಸ್ಕಾರ ಮಾರಾಟಕ್ಕಿಲ್ಲ ಎಂದು ನಿಮ್ಮ ಹೆಣ್ಣುಮಕ್ಕಳಿಗೆ ಕಲಿಸಿ. ಸಹೋದರಿಯ ಗೌರವ ಕೇವಲ ರಾಖಿಗೆ ಸೀಮಿತವಾಗಿಲ್ಲ ಎಂದು ನಿಮ್ಮ ಗಂಡುಮಕ್ಕಳಿಗೆ ಕಲಿಸಿ. ಇಲ್ಲದಿದ್ದರೆ ದೇವಸ್ಥಾನದ ಗಂಟೆ ಬಾರಿಸದ ದಿನ ದೂರವಿಲ್ಲ, ಬದಲಿಗೆ 'ಹಾಟ್', 'ಸೆಕ್ಸಿ', 'ಓ ದೇವರೇ' ಮುಂತಾದ ಕಾಮೆಂಟ್‌ಗಳು ಆರತಿಯಾಗುತ್ತವೆ. ದೇವಸ್ಥಾನದ ಗಂಟೆ ಬಾರಿಸಿತು, ತಂದೆ ಮನೆಯಲ್ಲಿ ಅಲಂಕರಿಸಲ್ಪಟ್ಟಿದ್ದರು, ಮಗಳು ಪರದೆಯ ಮೇಲೆ ನೃತ್ಯ ಮಾಡಿದಳು, ಇಡೀ ಸಮಾಜ ಮುಜುಗರಕ್ಕೊಳಗಾಯಿತು. ಸಹೋದರ, ಇದು ಕೊನೆಯ ಅವಕಾಶ.




ನಾವು ಈಗಲಾದರೂ ಎಚ್ಚರಗೊಳ್ಳದಿದ್ದರೆ, ನಾಳೆ ನಾವು ಸಂಸ್ಕಾರದ ಅಂತ್ಯಕ್ರಿಯೆಯ ಮೆರವಣಿಗೆಯನ್ನು ನಮ್ಮ ಹೆಗಲ ಮೇಲೆ ಹೊತ್ತುಕೊಳ್ಳಬೇಕಾಗುತ್ತದೆ. ನಾವು ಹೋರಾಡಬೇಕಾಗುತ್ತದೆ ಮತ್ತು ಈ ಹೋರಾಟವನ್ನು ಲೈಕ್‌ಗಳಿಂದ ಗೆಲ್ಲಲಾಗುವುದಿಲ್ಲ, ಆದರೆ ಸವಾಲಿನಿಂದ ಗೆಲ್ಲಲಾಗುತ್ತದೆ.

ಸುಂದರವಾದ ಭರವಸೆಗಳಲ್ಲಿ ನಿಮ್ಮನ್ನು ಸುತ್ತುವರೆದಿರುವವರು ಮತ್ತು ನಿಮ್ಮ ಜಗತ್ತು ಕುಸಿಯುತ್ತಿರುವಂತೆ ಭಾಸವಾದಾಗ ನಿಮ್ಮನ್ನು ಬಿಗಿಯಾಗಿ ಹಿಡಿದಿಟ್ಟುಕೊಳ್ಳುವವರ ನಡುವಿನ ವ್ಯತ್ಯಾಸವನ್ನು ಗುರುತಿಸಲು ಕಲಿಯಿರಿ. ಕೆಲವರು ಭವ್ಯವಾದ ಮಾತುಗಳಿಂದ ಪ್ರೀತಿಸುತ್ತಾರೆ, ಪರಿಪೂರ್ಣವಾಗಿ ಧ್ವನಿಸುವ ಆದರೆ ಜೀವನವು ಕಷ್ಟಕರವಾದಾಗ ಮಾಯವಾಗುವ ಕನಸುಗಳನ್ನು ಹೆಣೆಯುತ್ತಾರೆ. ಮತ್ತು ನಂತರ ಉಪಸ್ಥಿತಿಯಿಂದ ಪ್ರೀತಿಸುವವರಿದ್ದಾರೆ – ಉಳಿದೆಲ್ಲವೂ ಕುಸಿದಾಗ ಉಳಿಯುವವರು, ಭಾಷಣಗಳ ಬದಲಿಗೆ ಮೌನವನ್ನು ನೀಡುವವರು, ವಿವರಣೆಗಳ ಬದಲಿಗೆ ತೋಳುಗಳು ಮತ್ತು ಷರತ್ತುಗಳ ಬದಲಿಗೆ ಸಾಂತ್ವನವನ್ನು ನೀಡುವವರು. ಏಕೆಂದರೆ ನಿಜವಾದ ಪ್ರೀತಿ ಕೇವಲ ಭರವಸೆ ನೀಡುವುದಿಲ್ಲ – ಅದು ಸಾಬೀತುಪಡಿಸುತ್ತದೆ, ವಿಶೇಷವಾಗಿ ಅದು ಕಷ್ಟವಾದಾಗ.

ನಿಮ್ಮ ಬಳಿ ಇರುವುದನ್ನು ಮಾತ್ರ ನೀವು ಕಳೆದುಕೊಳ್ಳಬಹುದು, ಅದು ನಿಮ್ಮ ಬಳಿ ಇದೆ. ಅದು ನಿಮ್ಮ ಬಳಿ ಇಲ್ಲದಿದ್ದರೆ, ನೀವು ಏನನ್ನು ಬಿಟ್ಟುಕೊಡುತ್ತೀರಿ? ನೀವು ಶ್ರೀಮಂತರಾಗಿದ್ದರೆ ಮಾತ್ರ ನೀವು ಬಡವರಾಗಬಹುದು. ನೀವು ಶ್ರೀಮಂತರಾಗಿಲ್ಲದಿದ್ದರೆ, ನಿಮ್ಮ ಬಡತನಕ್ಕೂ ಯೇಸು ಹೇಳಿದ ಸೌಂದರ್ಯ ಇರಲು ಸಾಧ್ಯವಿಲ್ಲ: 'ನಿಮ್ಮ ಆತ್ಮದಲ್ಲಿ ಬಡವರಾಗಿರಿ'. ಗೌತಮ ಬುದ್ಧ ಸನ್ಯಾಸಿಯಾದಾಗ ಅವರು ಹೊಂದಿದ್ದ ಮಹತ್ವ ಮತ್ತು ಘನತೆ ನಿಮ್ಮ ಬಡತನಕ್ಕೂ ಇರಲು ಸಾಧ್ಯವಿಲ್ಲ.

ಶ್ರೀಮಂತ ವ್ಯಕ್ತಿ ಮಾತ್ರ ಬಡವನಾಗಬಹುದು, ಏಕೆಂದರೆ ನೀವು ನಿಮ್ಮಲ್ಲಿರುವುದನ್ನು ಮಾತ್ರ ಬಿಟ್ಟುಕೊಡಬಹುದು. ನೀವು ಎಂದಿಗೂ ಶ್ರೀಮಂತರಾಗದಿದ್ದರೆ ನೀವು ಹೇಗೆ ಬಡವರಾಗಲು ಸಾಧ್ಯ? ನಿಮ್ಮ ಬಡತನ ಕೇವಲ ಬಾಹ್ಯವಾಗಿರುತ್ತದೆ, ಅದು ಎಂದಿಗೂ ಆತ್ಮದಲ್ಲಿ ಇರಲು ಸಾಧ್ಯವಿಲ್ಲ, ಬಾಹ್ಯವಾಗಿ, ನೀವು ಬಡವರಾಗಿರುತ್ತೀರಿ, ಆದರೆ ಆಳವಾಗಿ ನೀವು ಸಮೃದ್ಧಿಗಾಗಿ ಹಾತೊರೆಯುತ್ತೀರಿ. ನಿಮ್ಮ ಆತ್ಮವು ಸಮೃದ್ಧಿಯ ನಂತರ ಅಲೆದಾಡುತ್ತಲೇ ಇರುತ್ತದೆ, ಅದು ಬಯಕೆಯಾಗುತ್ತದೆ ಮತ್ತು ನೀವು ಸಮೃದ್ಧಿ ಮತ್ತು ಸಂಪತ್ತಿಗಾಗಿ ಹಂಬಲಿಸುತ್ತಲೇ ಇರುತ್ತೀರಿ. ಹೊರಗಿನ ಪರಿಧಿಯಲ್ಲಿ ಮಾತ್ರ ಬಡವರಾಗಿರುವ ಮೂಲಕ, ಬಡತನ ಒಳ್ಳೆಯದು ಎಂದು ನೀವು ನಿಮ್ಮನ್ನು ಸಮಾಧಾನ ಪಡಿಸಿಕೊಳ್ಳಬಹುದು.

ಆದರೆ ನೀವು ನಿಜವಾಗಿಯೂ ಬಡವರಾಗಿರಲು ಸಾಧ್ಯವಿಲ್ಲ, ಶ್ರೀಮಂತ ವ್ಯಕ್ತಿ, ನಿಜವಾಗಿಯೂ ಶ್ರೀಮಂತ ವ್ಯಕ್ತಿ ಮಾತ್ರ ಬಡವರಾಗಲು ಸಾಧ್ಯ. ಶ್ರೀಮಂತರಾಗಿರುವುದು ಎಂದರೆ ನಿಜವಾಗಿಯೂ ಶ್ರೀಮಂತರಾಗಿರುವುದಿಲ್ಲ, ಏಕೆಂದರೆ ನೀವು ಇನ್ನೂ ಬಡವರಾಗಿರಬಹುದು. ಸಂಪತ್ತಿನ ಬಯಕೆ ಇನ್ನೂ ಇದ್ದರೆ, ಹೆಚ್ಚಿನ ಸಂಪತ್ತಿನ ಬಯಕೆ ಇದ್ದರೆ, ನೀವು ಬಡವರು. ನಿಮ್ಮಲ್ಲಿ ಏನಿದೆ ಎಂಬುದು ಮುಖ್ಯವಲ್ಲ, ನಿಮ್ಮಲ್ಲಿ ಸಾಕಷ್ಟು ಇದ್ದರೆ, ಆಸೆ ಮಾಯವಾಗುತ್ತದೆ. ನಿಮ್ಮಲ್ಲಿ ಸಾಕಷ್ಟು ಸಮೃದ್ಧಿ ಮತ್ತು ಸಂಪತ್ತು ಇದ್ದಾಗ, ಸಂಪತ್ತಿನ ಬಯಕೆ ಮಾಯವಾಗುತ್ತದೆ. ಬಯಕೆಯ ಸಂಪೂರ್ಣ ಕಣ್ಮರೆ ಸಾಕು ಎಂಬ ಮಾನದಂಡವಾಗಿದೆ, ಅದು ಸಾಕು. ಆಗ ನೀವು ನಿಜವಾಗಿಯೂ ಶ್ರೀಮಂತರಾಗಿರುತ್ತೀರಿ ಮತ್ತು ನೀವು ಅದನ್ನು ಬಿಡಬಹುದು, ನೀವು ಬಡವರಾಗಿರಬಹುದು ಮತ್ತು ಬುದ್ಧನಂತೆ ನೀವು ಗೌರವಾನ್ವಿತ ಭಿಕ್ಷುಕರಾಗಬಹುದು. ಆಗ ನಿಮ್ಮ ಬಡತನವೂ ಸಮೃದ್ಧಿಯಾಗುತ್ತದೆ ಮತ್ತು ನಂತರ ನಿಮ್ಮ ಬಡತನಕ್ಕೂ ತನ್ನದೇ ಆದ ರಾಜ್ಯವಿದೆ.

ಪ್ರತಿಯೊಂದು ಸಂಗತಿಯಲ್ಲೂ ಇದು ಸಂಭವಿಸುತ್ತದೆ. ಉಪನಿಷತ್ತುಗಳು ಅಥವಾ ಲಾವೊ ತ್ಸು ಅಥವಾ ಯೇಸು ಅಥವಾ ಬುದ್ಧ, ಅವರೆಲ್ಲರೂ ಜ್ಞಾನವು ನಿಷ್ಪ್ರಯೋಜಕ ಎಂದು ಕಲಿಸುತ್ತಾರೆ. ಬಹಳಷ್ಟು ಜ್ಞಾನವನ್ನು ಸಂಗ್ರಹಿಸುವುದು ಹೆಚ್ಚು ಸಹಾಯ ಮಾಡುವುದಿಲ್ಲ, ಸಹಾಯ ಮಾಡುವ ಬದಲು, ಅದು ಅಡಚಣೆಯಾಗಬಹುದು. ಜ್ಞಾನದ ಅಗತ್ಯವಿಲ್ಲ, ಆದರೆ ನೀವು ಅಜ್ಞಾನಿಯಾಗಿ ಉಳಿಯಬೇಕು ಎಂದು ಅರ್ಥವಲ್ಲ. ಈ ಅಜ್ಞಾನವು ನಿಜವಾಗುವುದಿಲ್ಲ, ನೀವು ಸಾಕಷ್ಟು ಜ್ಞಾನವನ್ನು ಸಂಗ್ರಹಿಸಿದಾಗ ಮತ್ತು ನಂತರ ನೀವು ಅದನ್ನು ಎಸೆಯಬಹುದಾದಾಗ, ನೀವು ನಿಜವಾದ ಮುಗ್ಧತೆಯನ್ನು ಪಡೆಯಬಹುದು. ಆಗ ನೀವು ನಿಜವಾಗಿಯೂ ಸಾಕ್ರಟೀಸ್‌ನಂತೆ ಮುಗ್ಧರಾಗುತ್ತೀರಿ, ಅವರು ಹೀಗೆ ಹೇಳಬಹುದು: 'ನನಗೆ ಒಂದೇ ಒಂದು ವಿಷಯ ತಿಳಿದಿದೆ, ಅದು ನನಗೆ ಏನೂ ತಿಳಿದಿಲ್ಲ.' ಈ ಜ್ಞಾನ ಅಥವಾ ಅಜ್ಞಾನ, ನೀವು ಅದಕ್ಕೆ ಯಾವುದೇ ಹೆಸರನ್ನು ನೀಡಿದರೂ, ಅದು ಸಂಪೂರ್ಣವಾಗಿ ವಿಭಿನ್ನವಾಗಿರುತ್ತದೆ, ಅದರ ಗುಣಮಟ್ಟ ಹೋಲಿಸಲಾಗದು, ಏಕೆಂದರೆ ಆಯಾಮ ಬದಲಾಗುತ್ತದೆ.

ನೀವು ಸಂಪೂರ್ಣವಾಗಿ ಅಜ್ಞಾನಿಯಾಗಿದ್ದರೆ, ನೀವು ಎಂದಿಗೂ ಯಾವುದೇ ಜ್ಞಾನವನ್ನು ತಲುಪದ ಕಾರಣ, ನಿಮ್ಮ ಅಜ್ಞಾನವು ತಿಳುವಳಿಕೆಯಾಗಲು ಸಾಧ್ಯವಿಲ್ಲ, ಅದು ಬುದ್ಧಿವಂತಿಕೆಯಾಗಲು ಸಾಧ್ಯವಿಲ್ಲ, ಅದು ಕೇವಲ ಜ್ಞಾನದ ಅನುಪಸ್ಥಿತಿಯಾಗಿದೆ ಮತ್ತು ಒಳಗೆ ಈ ತೀವ್ರವಾದ ಹಂಬಲ ಮತ್ತು ಆತಂಕ ಇರುತ್ತದೆ, ಇನ್ನಷ್ಟು ತಿಳಿದುಕೊಳ್ಳುವುದು ಹೇಗೆ?

ನೀವು ತುಂಬಾ ತಿಳಿದಾಗ, ನೀವು ಧರ್ಮಗ್ರಂಥಗಳನ್ನು ತಿಳಿದಿದ್ದೀರಿ, ನೀವು ಭೂತಕಾಲ ಮತ್ತು ಅದರ ಸಂಪೂರ್ಣ ಸಂಪ್ರದಾಯವನ್ನು ತಿಳಿದಿದ್ದೀರಿ, ತಿಳಿದುಕೊಳ್ಳಬಹುದಾದ ಎಲ್ಲವನ್ನೂ ನೀವು ತಿಳಿದಿದ್ದೀರಿ, ಆಗ ಇದ್ದಕ್ಕಿದ್ದಂತೆ ಈ ಎಲ್ಲಾ ಜ್ಞಾನದ ನಿರರ್ಥಕತೆಯ ಬಗ್ಗೆ ನಿಮಗೆ ಅರಿವಾಗುತ್ತದೆ. ಇದ್ದಕ್ಕಿದ್ದಂತೆ ಇದು ಜ್ಞಾನವಲ್ಲ, ಇದು ಎರವಲು ಪಡೆದ ಮಾಹಿತಿ ಎಂದು ನಿಮಗೆ ಅರಿವಾಗುತ್ತದೆ. ಇದು ನಿಮ್ಮ ಸ್ವಂತ ಅಸ್ತಿತ್ವವಾದದ ಅನುಭವವಲ್ಲ, ಇದು ಇಲ್ಲಿಯವರೆಗೆ ನೀವು ತಿಳಿದಿರುವ 'ಅದು' ಅಲ್ಲ, ಇತರರು ಇದನ್ನೆಲ್ಲ ತಿಳಿದಿರಬಹುದು ಆದರೆ ನೀವು ಅದನ್ನು ಮಾತ್ರ 'ಅದನ್ನು' ಸಂಗ್ರಹಿಸಿದ್ದೀರಿ. ಮತ್ತು ನಿಮ್ಮ ಸಂಗ್ರಹಣೆ ಯಾಂತ್ರಿಕವಾಗಿದೆ. ತಿಳಿದುಕೊಳ್ಳುವ ಆ ಬಾಯಾರಿಕೆ ನಿಮ್ಮೊಳಗಿನಿಂದ ಹುಟ್ಟಿಕೊಂಡಿಲ್ಲ, ಇದು ಬೆಳವಣಿಗೆಯಲ್ಲ... ಇದು ಇತರರ ಬಾಗಿಲಿನಿಂದ ತೆಗೆದ ನಿಷ್ಪ್ರಯೋಜಕ ಕಸ, ಅದನ್ನು ಎರವಲು ಪಡೆಯಲಾಗಿದೆ ಮತ್ತು ಸಂಪೂರ್ಣವಾಗಿ ಸತ್ತಿದೆ.

ತಿಳಿವು ಜೀವಂತವಾಗಿದೆ ಮತ್ತು ನೀವು ಅದನ್ನು ನೀವೇ ತಿಳಿದಾಗ ಮಾತ್ರ, ಅದು ನಿಮ್ಮ ನೇರ ಮತ್ತು ತಕ್ಷಣದ ಅನುಭವವಾಗಿದ್ದಾಗ ಮಾತ್ರ ಎಂಬುದನ್ನು ನೆನಪಿಡಿ. ಆದರೆ ನೀವು ಇತರರಿಂದ ತಿಳಿದಾಗ, ಅದು ಜ್ಞಾನವಲ್ಲ, ಅದು ಕೇವಲ ನೆನಪು ಮತ್ತು ನೆನಪು ಸತ್ತಿದೆ. ನೀವು ಧರ್ಮಗ್ರಂಥಗಳ ಮೂಲಕ ತುಂಬಾ ಜ್ಞಾನವನ್ನು ಸಂಗ್ರಹಿಸಿದಾಗ, ನಿಮ್ಮ ಸುತ್ತಲೂ ಧರ್ಮಗ್ರಂಥಗಳು ಸಂಗ್ರಹವಾಗಿವೆ, ನಿಮ್ಮ ಮನಸ್ಸಿನಲ್ಲಿ ದಟ್ಟವಾದ ಗ್ರಂಥಾಲಯಗಳು ಸೃಷ್ಟಿಯಾಗಿವೆ, ಆಗ ಇದ್ದಕ್ಕಿದ್ದಂತೆ ನೀವು ಇತರರ ಹೊರೆಯನ್ನು ಮಾತ್ರ ಹೊತ್ತಿದ್ದೀರಿ ಎಂದು ನಿಮಗೆ ಅರಿವಾಗುತ್ತದೆ. ನಿಮಗೆ ನಿಮ್ಮದೇ ಆದದ್ದೇನೂ ಇಲ್ಲ ಮತ್ತು ನೀವು ಅದನ್ನು ನೀವೇ ತಿಳಿದಿಲ್ಲ, ನಂತರ ನೀವು ಅದನ್ನು ಬಿಡಬಹುದು. ನೀವು ಆ ಎಲ್ಲಾ ಜ್ಞಾನವನ್ನು ಬಿಡಬಹುದು. ಅದನ್ನು ಈ ರೀತಿ ಬಿಡುವುದರಿಂದ, ನಿಮ್ಮೊಳಗೆ ಹೊಸ ಜ್ಞಾನ ಕಳೆದುಹೋಗುತ್ತದೆ. ಒಂದು ಹೊಸ ರೀತಿಯ ಮುಗ್ಧತೆ ಹುಟ್ಟಿಕೊಳ್ಳುತ್ತದೆ. ಈ ಅಜ್ಞಾನವು ಅಜ್ಞಾನಿಯ ಅಜ್ಞಾನವಲ್ಲ, ಅದು ಒಬ್ಬ ಬುದ್ಧಿವಂತ ವ್ಯಕ್ತಿಯಂತೆ, ಅದು ಬುದ್ಧಿವಂತಿಕೆಯ ಪರಾಕಾಷ್ಠೆ.

ಒಬ್ಬ ಬುದ್ಧಿವಂತ ವ್ಯಕ್ತಿ ಮಾತ್ರ 'ನನಗೆ ಗೊತ್ತಿಲ್ಲ' ಎಂದು ಹೇಳಬಹುದು. ಆದರೆ ಇದನ್ನು ಹೇಳುವಾಗ ಅವನು ಜ್ಞಾನವನ್ನು ಹುಡುಕುತ್ತಿಲ್ಲ, ಅವನು ಕೇವಲ ಒಂದು ಸತ್ಯವನ್ನು ಹೇಳುತ್ತಿದ್ದಾನೆ. ಮತ್ತು ನೀವು ನಿಮ್ಮ ಪೂರ್ಣ ಹೃದಯದಿಂದ 'ನನಗೆ ಗೊತ್ತಿಲ್ಲ' ಎಂದು ಹೇಳಲು ಸಾಧ್ಯವಾದಾಗ, ಆ ಅತ್ಯಂತ ನಿಜವಾದ ಕ್ಷಣದಲ್ಲಿ ನಿಮ್ಮ ಕಣ್ಣುಗಳು ತೆರೆದುಕೊಳ್ಳುತ್ತವೆ ಮತ್ತು ನಿಮ್ಮ ಜ್ಞಾನದ ಬಾಗಿಲುಗಳು ತೆರೆದುಕೊಳ್ಳುತ್ತವೆ. ಆ ನಿಜವಾದ ಕ್ಷಣದಲ್ಲಿ, ನೀವು ನಿಮ್ಮ ಪೂರ್ಣ ಹೃದಯದಿಂದ ನಿಮಗೆ ತಿಳಿದಿಲ್ಲ ಎಂದು ಹೇಳಲು ಸಾಧ್ಯವಾದಾಗ, ನೀವು ಜ್ಞಾನಕ್ಕೆ ಸಮರ್ಥರಾಗುತ್ತೀರಿ.

ಈ ಅಜ್ಞಾನವು ತುಂಬಾ ಸುಂದರವಾಗಿರುತ್ತದೆ, ಆದರೆ ಅದನ್ನು ಜ್ಞಾನದ ಮೂಲಕ ಸಾಧಿಸಲಾಗುತ್ತದೆ; ಇದು ಶ್ರೀಮಂತಿಕೆಯ ಮೂಲಕ ಸಾಧಿಸುವ ಬಡತನ, ಮತ್ತು ಅಹಂಕಾರದಿಂದಲೂ ಅದೇ ಸಂಭವಿಸುತ್ತದೆ. ನಿಮಗೆ ಅಹಂಕಾರವಿದ್ದರೆ, ನೀವು ಮಾತ್ರ ಅದನ್ನು ಬಿಡಬಹುದು.

☯

## ಓದುಗರ ಗಮನಕ್ಕೆ

### ರಾಜಕೀಯ ಸುದ್ದಿಯೂ ಇರುತ್ತದೆ...

'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಬರೀ ಅಪರಾಧ ವರದಿಗಳು ಮಾತ್ರ ಬರುತ್ತದೆ ಅಂದುಕೊಳ್ಳಬೇಡಿ. ಬದಲಾದ ಕಾಲಮಾನದಲ್ಲಿ ಇನ್ನು ಮುಂದೆ ರಾಜಕೀಯ, ಭ್ರಷ್ಟಾಚಾರ, ಮುಚ್ಚಿ ಹೋಗಿರುವ 'ಕ್ರೈಂ' ಮುಂತಾದ ರಹಸ್ಯ ವರದಿಗಳನ್ನು ಬ್ಲಾಸ್ಟ್ ಮಾಡಲಿದ್ದೇವೆ. ನಿಮ್ಮ ಊರುಗಳಲ್ಲಿ ಇಂತಹ ಬ್ಲಾಸ್ಟ್ ಮಾಡುವಂತಹ ಸುದ್ದಿಗಳಿದ್ದರೆ ನಮಗೆ ಕಳುಹಿಸಿ ಕೊಡಿ. ನಿಮ್ಮ ಹೆಸರು, ವಿಳಾಸವನ್ನು ರಹಸ್ಯವಾಗಿಡುವ ಜವಾಬ್ದಾರಿ ನಮ್ಮದು. ನೀವು ಕಳುಹಿಸುವ ವರದಿಗೆ ದಾಖಲೆಗಳಿದ್ದರೆ ಒಳ್ಳೆಯದು. ಆಕಸ್ಮಾತ್ ದಾಖಲೆಗಳು ಇಲ್ಲದಿದ್ದಲ್ಲಿ, ನೀವು ಕಳುಹಿಸುವ ವರದಿಯಲ್ಲಿ ದಾಖಲೆಗಳು ಸಿಗುವ ಜಾಗವನ್ನು ನಮೂದಿಸಿದರೆ ಸಾಕು, ದಾಖಲೆ ಎತ್ತುವ ಜವಾಬ್ದಾರಿ ನಮ್ಮದು.

**ನಮ್ಮ ವಿಳಾಸ :**

8884452699

policenewsreporter@gmail.com


ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ, ಬೆಂಗಳೂರು-560 079

080-23588510

# ಮಹದೇವಸ್ವಾಮಿ ಹಾಡು 'ಮಾದೇವ'ನ ಗೆಲ್ಲಿಸಿತೇ?!




ಅಂತೂ ಪರಭಾಷಾ ಸಿನಿಮಾಗಳ ಹಾವಳಿ ನಡುವೆ ನಮ್ಮ 'ಮಾದೇವ' ಗೆದ್ದು ಬೀಗಿದ್ದಾನೆ! 25 ದಿನಗಳ ಓಟ ಮುಂದುವರೆಸಿರೋ ಈ ಸಂದರ್ಭದಲ್ಲಿ, ನಿರ್ಮಾಪಕ ಕೇಶವ್ ಹಾಗೂ ಚಿತ್ರತಂಡ ಸಕ್ಸಸ್ ಮೀಟ್ ಏರ್ಪಡಿಸಿತ್ತು. ಹೀರೋ ವಿನೋದ್‌ಗಿಂತ, ಹೀರೋಯಿನ್ ಸೋನಲ್‌ಗಿಂತ ಈ ಪಾರ್ಟಿಯಲ್ಲಿ ಭರ್ಜರಿಯಾಗಿ ಮಿಂಚಿದ್ದು ಯಾರು ಗೊತ್ತ... ಜಾನಪದ ಗಾಯಕ ಡಾ.ಎಂ. ಮಹದೇವಸ್ವಾಮಿ!




ನೀವು ಫೇಸ್‌ಬುಕ್ ಇನ್‌ಸ್ಟಾ ಮುಂತಾದ ಕಡೆ ಗಮನಿಸಿರಬಹುದು. 'ಮಾದೇವ'ಚಿತ್ರದ ಪ್ರಮೋಶನ್ ಕಡೆ ಎಲ್ಲಾ ಮಹದೇವಸ್ವಾಮಿ ಅವರ ಹಾಡೇ.... ಜೀವ ಹೆದರಿ ಬಂತು ಕಯ್ಯಾಗ, ಅದ್ಯಾಕೋ ನಿನ್ನ ಹಾವ ಭಾವ ಕಂಡಾಗ... ಈ ಹಾಡಿನ ಹಿನ್ನಲೆಯಲ್ಲಿ 'ಮಾದೇವ' ವಿನೋದ್ ಅದ್ಭುತ ನಟನೆಯ ದೃಶ್ಯಗಳು ತೇಲಿ ಬರುತ್ತವೆ. ಒಂದು ಹಾಡು ಒಂದು ಸಿನಿಮಾನ ಗೆಲ್ಲಿಸಿಬಿಟ್ಟಿತು ಅಂತಾನೆ ಜನ ಮಾತಾಡುತ್ತಿದ್ದಾರೆ. ನಟ ವಿನೋದ್ ಕೂಡ ಗಾಯಕ ಮಳವಳ್ಳಿ ಮಹದೇವಸ್ವಾಮಿ ಅವರ ಕಾಲಿಗೆ ಬಿದ್ದು ಆಶೀರ್ವಾದ ಪಡೆದಿದ್ದಾರೆ! ಅಂದಹಾಗೆ, ಮಹದೇವಸ್ವಾಮಿ ಅವರ ಅನ್ಯಾಯಕಾರಿ ಬ್ರಹ್ಮ.... ಹಾಡು ಸಾಗರದಾಚೆಗೂ ಪಸರಿಸಿ ವಿಶ್ವ ವಿಖ್ಯಾತಿ ಗಳಿಸಿದನ್ನು ನಾವಿಲ್ಲಿ ಸ್ಮರಿಸಬಹುದು!!! ☯

# ಅಮ್ಮನಿಗೂ ಮಗನಿಗೂ ಅಷ್ಟಕಷ್ಟೇಯ...!?!

ಯಶ್ ಅಮ್ಮ ಶ್ರೀಮತಿ ಪುಷ್ಪ ಅರುಣ್ ಕುಮಾರ್ 'ಕೊತ್ತಲವಾಡಿ' ಅನ್ನೋ ಹೆಸರಿನ ಸಿನಿಮಾ ನಿರ್ಮಾಣ ಮಾಡ್ತಿರೋ ಸಂಗತಿ ನಿಮಗೆ ಗೊತ್ತೇ ಇದೆ. 'ದಿಯಾ' ಫೇಮ್ ಪೃಥ್ವಿ ಅಂಬರ್ ಇದರ ನಾಯಕ. ಕೆ ವಿ ರಾಜು, ರವಿ ಶ್ರೀವತ್ಸ ಶಿಷ್ಯ ಅವರ ಗರಡಿಯಲ್ಲಿ ಪಳಗಿರೋ ಶ್ರೀರಾಜ್ ಸ್ವತಂತ್ರ ನಿರ್ದೇಶಕರಾಗಿ ಇದನ್ನು ಚಿತ್ರಿಸುತ್ತಿದ್ದಾರೆ.




ಚಾಮರಾಜನಗರ ಜಿಲ್ಲೆ, ತೆರಕಣಾಂಬಿ ಪೊಲೀಸ್ ಠಾಣಾ ವ್ಯಾಪ್ತಿಯ ಕೊತ್ತಲವಾಡಿಯಲ್ಲಿ ನಡೆದ ಸತ್ಯಘಟನೆ ಆಧಾರಿತ ಸಿನಿಮಾ ಇದಾಗಿದೆ ಎನ್ನಲಾಗಿದೆ. ಅದಿರಲಿ, ಮುಖ್ಯ ಸಂಗತಿ ಏನೆಂದರೆ, ನಿರ್ಮಾಪಕಿ ಪುಷ್ಪ ಅವರು ಈ ಸಿನಿಮಾ ಶುರು ಮಾಡಿದಾಗಿಂದ ಪ್ಯಾನ್ ಇಂಡಿಯಾ ಸ್ಟಾರ್ ಯಶ್ ತನ್ನ ತಾಯಿಯ ಬಗ್ಗೆ ಅಥವಾ ಈ ಸಿನಿಮಾ ಬಗ್ಗೆ ಒಂದೇ ಒಂದು ಮಾತು ಆಡಿಲ್ಲ! ಸಿನಿಮಾ ಶೂಟಿಂಗ್ ಮುಗಿದು ಟೀಸರ್ ಕೂಡ ರಿಲೀಸ್ ಆಗಿದೆ.



ಪುಷ್ಪ ಅವರು ಮಾಧ್ಯಮಗಳೊಂದಿಗೆ ಮಾತನಾಡುತ್ತ, ಭಾರಿ ಪ್ರಚಾರ ಮಾಡಿಬಿಟ್ರೆ ಸಿನಿಮಾ ಓಡಲ್ಲ... ಒಳ್ಳೆ ಕತೆ ಇಲ್ಲಾ ಅಂದ್ರೆ ಯಶ್ ಮಾಡಿದ್ರೂ ಜನ ನೋಡಲ್ಲ.... ಅಂದಿದ್ದಾರೆ!

ಮಗನ ಪ್ಯಾನ್ ಇಂಡಿಯಾ ಸಿನಿಮಾಗಳ ಬಗ್ಗೆ, ಮಗ ಸೊಸೆ ಫಾರಿನ್ ಟ್ರಿಪ್ ಬಗ್ಗೆ ಅಪ್ಪಿತಪ್ಪಿಯೂ ಮಾತಾಡಿಲ್ಲ!! ಇದು ನನ್ನ ಸಿನಿಮಾ,ಇದರಲ್ಲಿ ಯಾರ ಇನ್ವಾಲ್ ಮೆಂಟ್ ಇಲ್ಲ, ಸೋಲು ಗೆಲುವು ಎಲ್ಲಾ ನಂದೇ.... ಎಂದು ಖಡಕ್ಕಾಗಿ ಹೇಳುತ್ತಾರೆ. ಮಗ ಕೋಟಿ ಕೋಟಿ ಬಡ್ಜೆಟ್‌ನಲ್ಲಿ ಅಷ್ಟು ದೊಡ್ಡ ಸಿನಿಮಾ ನಿರ್ಮಾಣ ಮಾಡ್ತಿದ್ದಾರೆ, ನೀವು....ಎಂದು ಯಾರೋ ಕೇಳಿದ್ದಕ್ಕೆ ಮಾತೇ ಅಡಲಿಲ್ಲವಂತೆ, ಪುಷ್ಪಮ್ಮ!

ಮೊನ್ನೆ ಮೊನ್ನೆ ಈ ಪುಷ್ಪಮ್ಮ ಡಾ. ರಾಜ್ ಸ್ಮಾರಕಕ್ಕೆ ಭೇಟಿ ನೀಡಿ ಅಣ್ಣಾವ್ರ ಹಾಗೂ ಅಪ್ಪು ಅವರ ಆಶೀರ್ವಾದ ಪಡೆದುಕೊಂಡರು. ಆ ವೇಳೆ ಮಾಧ್ಯಮಗಳು ಯಶ್ ಬಗ್ಗೆ ಮತ್ತೆ ಪ್ರಶ್ನೆ ಕೇಳಿದ್ದಕ್ಕೆ ತಾಯಿ ಪುಷ್ಪ ಅವರು ಮತ್ತೆ ಗರಂ ಆಗಿ, 'ಯಶ್...ಯಶ್... ಅನ್ನೋದಾದ್ರೆ ಅವನ ಹತ್ತಿರವೇ ಹೋಗಿ' ಎಂದು ರೇಗಿದ್ದರು!

'ಹೋಗಿ ಯಶ್ ಹತ್ರಾನೇ ಪ್ರಶ್ನೆ ಕೇಳಿ, ನಾನು ಯಶ್ ಬಗ್ಗೆ ಏನೂ ಹೇಳಲ್ಲ, ಯಶ್ ನಿಮಗೆ ಮಾತ್ರವಲ್ಲ, ನಮಗೂ ಸಿಗಲ್ಲ, ಅಮ್ಮನ ಮೊದಲ ಸಿನಿಮಾ ಬರ್ತಿದೆ ಅನ್ನೋ ಸೆಂಟಿಮೆಂಟ್ ಎಲ್ಲ ನಮ್ಮ ಮನೇಲಿ ಇಟ್ಟುಕೊಂಡಿಲ್ಲ, ನಾವು ಮನೆ ಕಟ್ಟಿದ ಮೇಲೆ ಯಶ್ ಇಲ್ಲ ಅಂದ್ರೂ ಗೃಹಪ್ರವೇಶ ಮಾಡ್ತೀವಿ ಎಂದು ಖಡಕ್ ಆಗಿ ಹೇಳಿದ್ದಾರೆ! ಅಲ್ಲದೆ, 'ನಮ್ಮ ಚೊಚ್ಚಲ ಕೊತ್ತಲವಾಡಿ ಸಿನಿಮಾವನ್ನು ಯಶ್, ರಾಧಿಕಾ ಯಾರಿಗೂ ತೋರಿಸುವುದಿಲ್ಲ, ಈ ಸಿನಿಮಾ ನೋಡ್ತಾರೋ ಬಿಡ್ತಾರೋ ಅನ್ನೋದನ್ನ ಅವರ ಬಳಿಯೇ ಕೇಳಿ. ಇಲ್ಲಿ ಮಗ ಬೇರೆ, ಅಮ್ಮ ಬೇರೆ, ಎಲ್ಲವೂ ಬೇರೆ ಬೇರೆ' ಎಂದು ಪುಷ್ಪ ಅವರು ಜೋರಾಗಿ ಹೇಳಿದ್ದಾರೆ! ಇದನ್ನೆಲ್ಲ ಗಮನಿಸಿದರೆ, ಇತ್ತೀಚಿಗೆ ಅಮ್ಮ ಮಗನ ಮಧ್ಯೆ ಅಷ್ಟಕ್ಕಷ್ಟೇ... ಎಂಬ ಅನುಮಾನ ಮೂಡುತ್ತಿದೆ!

ಮೊನ್ನೆ ಮೊನ್ನೆ ಈ ಪುಷ್ಪ ಮ್ಮ ಡಾ.ಸ್ಮಾರಕಕ್ಕೆ ಭೇಟಿ ನೀಡಿ ಅಣ್ಣಾವ್ರ ಹಾಗೂ ಅಪ್ಪು ಅವರ ಆಶೀರ್ವಾದ ಪಡೆದುಕೊಂಡರು. ಆ ವೇಳೆ ಮಾಧ್ಯಮಗಳು ಯಶ್ ಬಗ್ಗೆ ಮತ್ತೆ ಪ್ರಶ್ನೆ ಕೇಳಿದ್ದಕ್ಕೆ ತಾಯಿ ಪುಷ್ಪ ಅವರು ಮತ್ತೆ ಗರಂ ಆಗಿ, 'ಯಶ್.....ಯಶ್..... ಅನ್ನೋದಾದ್ರೆ ಅವನ ಹತ್ತಿರವೇ ಹೋಗಿ' ಎಂದು ರೇಗಿದ್ದರು!

'ಹೋಗಿ ಯಶ್ ಹತ್ರಾನೇ ಪ್ರಶ್ನೆ ಕೇಳಿ, ನಾನು ಯಶ್ ಬಗ್ಗೆ ಏನೂ ಹೇಳಲ್ಲ, ಯಶ್ ನಿಮಗೆ ಮಾತ್ರವಲ್ಲ, ನಮಗೂ ಸಿಗಲ್ಲ, ಅಮ್ಮನ ಮೊದಲ ಸಿನಿಮಾ ಬರ್ತಿದೆ ಅನ್ನೋ ಸೆಂಟಿಮೆಂಟ್ ಎಲ್ಲ ನಮ್ಮ ಮನೇಲಿ ಇಟ್ಟುಕೊಂಡಿಲ್ಲ, ನಾವು ಮನೆ ಕಟ್ಟಿದ ಮೇಲೆ ಯಶ್ ಇಲ್ಲ ಅಂದ್ರೂ ಗೃಹಪ್ರವೇಶ ಮಾಡ್ತೀವಿ ಎಂದು ಖಡಕ್ ಆಗಿ ಹೇಳಿದ್ದಾರೆ!




ಅಲ್ಲದೆ, ನಮ್ಮ ಚೊಚ್ಚಲ ಕೊತ್ತಲವಾಡಿ ಸಿನಿಮಾವನ್ನು ಯಶ್, ರಾಧಿಕಾ ಯಾರಿಗೂ ತೋರಿಸುವುದಿಲ್ಲ, ಈ ಸಿನಿಮಾ ನೋಡ್ತಾರೋ ಬಿಡ್ತಾರೋ ಅನ್ನೋದನ್ನ ಅವರ ಬಳಿಯೇ ಕೇಳಿ. ಇಲ್ಲಿ ಮಗ ಬೇರೆ, ಅಮ್ಮ ಬೇರೆ, ಎಲ್ಲವೂ ಬೇರೆ ಬೇರೆ' ಎಂದು ಪುಷ್ಪ ಅವರು ಜೋರಾಗಿ ಹೇಳಿದ್ದಾರೆ! ☯

# ನಯನ-ವಿಗ್ನೇಶ್ ನಡುವೆ ಬಿರುಕು?!



ಸೋಶಿಯಲ್ ಮೀಡಿಯಾದಲ್ಲಿ ನಟಿ ನಯನತಾರಾ ಮತ್ತು ಪತಿ ವಿಗ್ನೇಶ್ ಶಿವನ್ ವಿಚ್ಛೇದನದತ್ತ ಹೆಜ್ಜೆ ಹಾಕುತ್ತಿದ್ದಾರೆ ಎಂಬ ವದಂತಿಗಳು ಹರಡಿವೆ! ನಯನತಾರಾ ಅವರ ಸೋಶಿಯಲ್ ಮೀಡಿಯಾ ಖಾತೆಯಿಂದ ಬಂದಿದೆ ಎನ್ನಲಾದ ಒಂದು 'ಸ್ಕ್ರೀನ್‌ಶಾಟ್' ಇದೀಗ ವೈರಲ್ ಆಗಿದ್ದು, ಅದರಲ್ಲಿ ವಿವಾಹದ ಬಗ್ಗೆ ನಯನ ಪಶ್ಚಾತ್ತಾಪದ ಮಾತುಗಳನ್ನಾಡಿದ್ದಾರೆ. ಅದರಲ್ಲಿ, ಒಬ್ಬ ಮೂರ್ಖನನ್ನು ಮದುವೆಯಾಗುವುದು ತಪ್ಪು . ಪತಿಯ ಕೃತ್ಯಗಳಿಗೆ ಪತ್ನಿ ಹೊಣೆ ಹೊತ್ತಿಕೊಳ್ಳಬೇಕಾಗಿಲ್ಲ, ಏಕೆಂದರೆ ಪುರುಷರು ಸಾಮಾನ್ಯವಾಗಿ ಬೆಳೆಯುವುದಿಲ್ಲ.... ದಯವಿಟ್ಟು ನನ್ನನ್ನು ಒಬ್ಬಳೇ ಇರಲು ಬಿಡಿ. ನಾನು ತುಂಬಾ ಬೇಸತ್ತಿದ್ದೇನೆ ಎಂಬ ಸಾಲುಗಳಿವೆ. ಈ ಪೋಸ್ಟ್ ಸೋಷಿಯಲ್ ಮೀಡಿಯಾದಲ್ಲಿ ಸಿಕ್ಕಾಪಟ್ಟೆ ವೈರಲ್ ಆಗಿದ್ದು, ನಯನತಾರಾ-ವಿಘ್ನೇಶ್ ವೈವಾಹಿಕ ಜೀವನದಲ್ಲಿ ಬಿರುಕು ಮೂಡಿದೆ ಎಂಬ ಮಾತುಗಳಿಗೆ ಪುಷ್ಟಿ ನೀಡಿದೆ! ಆದರೆ ನಯನತಾರಾ ಆಗಲಿ, ವಿಗ್ನೇಶ್ ಶಿವನ್ ಆಗಲಿ ಈವರೆಗೆ ಈ ಬಗ್ಗೆ ಯಾವುದೇ ಸ್ಪಷ್ಟನೆ ನೀಡಿಲ್ಲ! ಹೀಗಾಗಿ, ಈ ವೈರಲ್ ಪೋಸ್ಟ್ ನಕಲಿ ಇರಬಹುದಾ ಎಂಬ ಅನುಮಾನವಿದೆ!! ☯

# ಅಮೀರ್‌ಖಾನ್ ತನ್ನ ನಾಯಿಗೆ ಶಾರುಖ್ ಖಾನ್ ಎಂದು ಹೆಸರಿಟ್ಟಿದ್ದ ಗೊತ್ತೇ..

ಒಂದು ಕಾಲದಲ್ಲಿ ಬಾಲಿವುಡ್ ಅನ್ನು ಅಕ್ಷರಶ ಆಳಿದವರು ಖಾನ್ ತ್ರಯರು. ಸಲ್ಮಾನ್ ಖಾನ್, ಅಮೀರ್ ಖಾನ್, ಶಾರುಖ್ ಖಾನ್ ಮೂವರ ಮಧ್ಯೆ ಉತ್ತಮವಾದ ಸ್ನೇಹವಿದೆ. ಈ ಮೂವರ ನಡುವೆ ಈ ಹಿಂದೆ ಭಾರಿ ಸ್ಪರ್ಧೆ ಇತ್ತು. ಹೀಗಾಗಿ, ಆ ದಿನಗಳಲ್ಲಿ ಕೆಲವು ವಿವಾದಗಳನ್ನು ಕೂಡ ಮಾಡಿಕೊಂಡಿದ್ದರು.ಸೋಲು ಗೆಲುವು ಎಲ್ಲವನ್ನೂ ಕಂಡಿದ್ದಾರೆ. ಅಮೀರ್ ಅಂತೂ ಇತ್ತೀಚಿಗೆ ಗೆಲುವನ್ನೇ ಕಾಣದೆ ಸೊರಗಿ ಹೋಗಿದ್ದ...

ಈಗ ಮೂವರಿಗೂ ವಯಸ್ಸಾಗಿದೆ. ಯಾವುದೇ ಕಿರಿಕ್ ಇಲ್ಲದೇ ಆರಾಮಾಗಿ ಇದ್ದಾರೆ. ಆದರೆ,



ನಮ್ಮಂತ ಪತ್ರಕರ್ತರಿಗೆ ಹಳೇ ದಿನಗಳ ವಿವಾದ ಆಗಾಗ ನೆನಪಾಗುತ್ತಾ ಇರುತ್ತದೆ. ಬಹಳ ವರ್ಷಗಳ ಹಿಂದೆ ಅಮೀರ್ ಖಾನ್ ಕ್ಷಮಿಸಲಾಗದ ಒಂದು ಯಡವಟ್ಟು ಮಾಡಿದ್ದರು. ಆಸಾಮಿ ತಮ್ಮ ಮನೆಯ ನಾಯಿಗೆ ಶಾರುಖ್ ಖಾನ್ ಎಂದು ಹೆಸರು ಇಟ್ಟಿದ್ದರು! ಈ ವಿಷಯ ಸಿಕ್ಕಾಪಟ್ಟೆ ವಿವಾದವಾಗಿತ್ತು. ಅಮೀರ್ ಖಾನ್ ವರ್ತನೆಯಿಂದ ಶಾರುಖ್ ಖಾನ್ ಅವರ ಅಭಿಮಾನಿಗಳಿಗೆ ಮತ್ತು ಆಪ್ತರಿಗೆ ತುಂಬಾ ನೋವಾಗಿತ್ತು. ಅಮೀರ್ ಖಾನ್ ವಿರುದ್ಧ ಶಾರುಖ್ ಮುಸುಕಿನ ಯುದ್ಧ ಸಾರಿದ್ದರು.

2010ರ ಸಮಯದಲ್ಲಿ ಅಮೀರ್‌ಖಾನ್ ಅವರು ಬ್ಲಾಗ್ ಬರೆಯುತ್ತಿದ್ದರು. ಒಮ್ಮೆ, 'ಶಾರುಖ್ ನನ್ನ ಕಾಲು ನೆಕ್ಕುತ್ತಿದ್ದಾನೆ. ನಾನು ಅವನಿಗೆ ಬಿಸ್ಕೆಟ್ ತಿನಿಸುತ್ತಿದ್ದೇನೆ. ಇದಕ್ಕಿಂತ ಇನ್ನೇನು ಬೇಕು ನನಗೆ' ಎಂದು ಅಮೀರ್‌ಖಾನ್ ಬರೆದಿದ್ದರು! ಇದರಿಂದ ಕೆರಳಿದ್ದ ಶಾರುಖ್ ಫ್ಯಾನ್ಸ್ ಅಮೀರ್‌ಗೆ ಡೈರೆಕ್ಟ್ ಕ್ಲಾಸ್ ತೆಗೆದುಕೊಂಡಿದ್ದರು. ಬಳಿಕ ಅಮೀರ್‌ಗೆ ತಮ್ಮ ತಪ್ಪಿನ ಅರಿವಾಗಿತ್ತು. ಕೂಡಲೇ ಶಾರುಖ್ ಖಾನ್ ಅವರನ್ನು ಭೇಟಿ ಮಾಡಿ ಕ್ಷಮೆ ಕೇಳಿದ್ದರು. ಶಾರುಖ್ ಪತ್ನಿ ಗೌರಿ, ಮಕ್ಕಳಾದ ಆರ್ಯನ್ ಹಾಗೂ ಸುಹಾನಾ ಬಳಿಯೂ ಕ್ಷಮೆ ಕೇಳಿದ್ದರು. ಇಷ್ಟಾದರೂ 'ಕಿಂಗ್' ಶಾರುಖ್ ಖಾನ್ ಅಮೀರ್ ಜೊತೆ ಅಷ್ಟಾಗಿ ಬೆರೆಯುತ್ತಿರಲಿಲ್ಲ!

ಸೋತು ಸುಣ್ಣವಾಗಿದ್ದ ಅಮೀರ್‌ಖಾನ್‌ಗೆ ಇದೀಗ ಒಂದು ಭರ್ಜರಿ ಗೆಲುವು ಸಿಕ್ಕಿದೆ. 'ಸೀತಾರೆ ಜಮೀನ್ ಪರ್' ಬಿಗ್ ಹಿಟ್ ಆಗಿದೆ. ಇದರ ಸಕ್ಸಸ್ ಮೀಟ್‌ನಲ್ಲಿ ಶಾರುಖ್ ಕೂಡ ಪಾಲ್ಗೊಂಡು ಖುಷಿ ಹಂಚಿಕೊಂಡಿದ್ದಾರೆ. ಅಮೀರ್ ಶಾರುಖ್ ಒಂದೇ ವೇದಿಕೆಯಲ್ಲಿ ಸೇರಿದ್ದರಿಂದ ಹಳೆಯ 'ನಾಯಿ' ಘಟನೆ ನೆನಪಿಗೆ ಬಂತು....!! ☯

# ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಹೊಡೆದ 'ಕಾಲೋನಿ' ಡೈರೆಕ್ಟರ್!



ದಾದಾ ಸಾಹೇಬ್ ಫಾಲ್ಕೆ ಅಂದ್ರೆ ಸುಮ್ನೆ ಅಲ್ಲ, ಭಾರತ ದೇಶದ ಚಲನಚಿತ್ರರಂಗದಲ್ಲೇ ಅತ್ಯುನ್ನತ ಪ್ರಶಸ್ತಿ ಅದು! ಒಂಥರಾ ಇಂಡಿಯನ್ ಆಸ್ಕರ್ ಇದ್ದಂಗೆ!! 2025 ನೇ ಸಾಲಿನಲ್ಲಿ ಕರ್ನಾಟಕದಲ್ಲಿ ಒಬ್ಬರಿಗೆ ಮಾತ್ರ ಒಲಿದು ಬಂದಿದೆ! ಬೇಗೂರ್ ಕಾಲೋನಿ ಸಿನಿಮಾದ ನಟ ನಿರ್ದೇಶಕರಾದ ಫ್ಲೈಯಿಂಗ್ ಕಿಂಗ್ ಮಂಜು ಅವರೇ ಪ್ರಸ್ತುತ ಸಾಲಿನ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತರು!

ಮಂಜು, ಮನೆಗೆಲಸ ಮಾಡಿಕೊಂಡು ಒಂದಿಡೀ ಕುಟುಂಬ ಸಾಕಿದ ತಾಯಿಯೊಬ್ಬರ ಮಗ! ಇವತ್ತು ಇದೇ ಮಗ ತನ್ನ ತಾಯಿಯ ಜೊತೆಗೆ, ಇನ್ನೂ ಹತ್ತು ತಾಯಂದಿರನ್ನು ಸಾಕುವ ಮಟ್ಟಕ್ಕೆ ಬೆಳೆದಿದ್ದಾರೆ. ಈ ಮಾತು ಒತ್ತಟ್ಟಿಗಿರಲಿ, ನಾವು ಪತ್ರಕರ್ತರಾದವರು ಇಂಥ ಪ್ರತಿಭೆಗಳನ್ನು ಗುರ್ತಿಸಬೇಕು, ಬೆನ್ನು ತಟ್ಟಿ ಪ್ರೋತ್ಸಾಹಿಸಬೇಕು. ಇಷ್ಟು ಮಾಡಿದರೆ ಸಾಕು, ಮಂಜು ರಂಥ ಪ್ರತಿಭಾವಂತರು ಅವರ ಪಾಡಿಗಾವರು ಒಳ್ಳೊಳ್ಳೆ ಸಿನಿಮಾ ಮಾಡುತ್ತ ಬೆಳೆಯುತ್ತಾರೆ, ಇಂಡಸ್ಟ್ರಿಯನ್ನೂ ಬೆಳೆಸುತ್ತಾರೆ. ಸೂಪರ್ ಸ್ಟಾರ್‌ಗಳ ಹಿಂದೆ ಬಿದ್ದು ಇಂಟರ್ ವ್ಯೂ ಮಾಡೋದಲ್ಲ, ಇಂಥ ಯುವ ಪ್ರತಿಭೆಗಳನ್ನು ಗುರ್ತಿಸಿ ಪ್ರೋತ್ಸಾಹಿಸುವುದು ಪತ್ರಕರ್ತರ ಆದ್ಯ ಕರ್ತವ್ಯ!



ಅಂದಹಾಗೆ, ನಾವು ಮಂಜು ಅವರ ಬಗ್ಗೆ ತಿಂಗಳ ಹಿಂದಷ್ಟೇ ಪುಟ್ಟ ವರದಿ ಮಾಡಿದ್ದೆವು. ಅವರ ನಟನೆ ಹಾಗೂ ನಿರ್ದೇಶನದ ಬೇಗೂರ್ ಕಾಲೋನಿ ಶತದಿನ ಪೂರೈಸಿದ್ದ ಸಂದರ್ಭವದು. ಬ್ರೇಕಿಂಗ್ ನ್ಯೂಸ್ ಏನೆಂದರೆ, ಕನ್ನಡ ಸಿನಿಮಾವೊಂದು ಇಲ್ಲಿ ಥೀಯೇಟರ್ ಸಿಗದೆ, ಸಿಕ್ಕ ಥೀಯೇಟರ್‌ನಲ್ಲೂ ಎತ್ತಗಂಡಿಯಾಗಿದ್ದು, ತಮಿಳುನಾಡಿನ ಹೊಸೂರಿನಲ್ಲಿ (ರಾಘವೇಂದ್ರ ಟಾಕೀಸ್) ಶತದಿನ ಪೂರೈಸಿದ್ದು! ಈ ಪ್ರಯುಕ್ತ ಸಂಕ್ಷಿಪ್ತ ವರದಿ ಮಾಡಿದ್ದೆವು ನಾವು. ಬೇಗೂರ್ ಕಾಲೋನಿಗೂ ಮೊದಲು ರಾಜೀವ ಅನ್ನೋ ರೈತರ ಕತೆ ಚಿತ್ರಿಸಿದ್ದರು ಮಂಜು. ಒಳ್ಳೆ ಸಿನಿಮಾ. ಬೇಗೂರ್ ಕಾಲೋನಿ ಒಂದು ಆಟದ ಮೈದಾನದ ಸುತ್ತಾ ಸುತ್ತುವ ವಿಶಿಷ್ಟ ಚಿತ್ರ. ಹಿತ್ತಲ ಗಿಡ ಮದ್ದಲ್ಲ...



ನಮ್ಮವರು ಗುರ್ತಿಸದಿದ್ದರೆ ಏನಂತೆ? ಮುಂಬೈ ಮಂದಿ ಬೇಗೂರ್ ಕಾಲೋನಿ ಚಿತ್ರವನ್ನು ಗುರ್ತಿಸಿ ಮೆಚ್ಚಿಕೊಂಡು ಮಂಜು ಅವರನ್ನು ಅಲ್ಲಿಗೆ ಕರೆಸಿಕೊಂಡು ಸನ್ಮಾನಿಸಿದ್ದಾರೆ. ಬಾಲಿವುಡ್ ಹಾಸ್ಯ ದಿಗ್ಗಜ ಜಾನಿ ಲಿವರ್ ಇದ್ದಾರಲ್ಲ, ಅವರ ಸೋದರನ ಮಗ ಮಂಜು ಅವರ ಬಗ್ಗೆ ಅಲ್ಲೆಲ್ಲ ಹೇಳಿದ್ದಾರೆ! ನಮ್ಮ ಸುನೀಲ್ ಶೆಟ್ಟಿ ಸರ್ ಕೂಡ ಸಿನಿಮಾ ನೋಡಿ ಶಹಬ್ಬಾಶ್ ಎಂದು ಮಂಜು ಹೆಸರನ್ನು ಸೂಚಿಸಿದ್ದಾರೆ! ಮೇಲ್ಕಂಡ ಮಹನೀಯರ ಪ್ರೀತಿಯಿಂದ... ಮಂಜುಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ದೊರೆತಿದೆ!!

ಅಂದಹಾಗೆ, ಮುಂಬೈನ ಸಹರಾ ಸ್ಟಾರ್ ಹೋಟೆಲ್‌ನಲ್ಲಿ ಪ್ರಶಸ್ತಿ ಪ್ರಧಾನ ಕಾರ್ಯಕ್ರಮ ಆಯೋಜಿಸಲಾಗಿತ್ತು. ಎಷ್ಟಾದರೂ ನಮ್ ಕನ್ನಡದ ಹುಡುಗ... ಬೆಂಗಳೂರಿಗೆ ಹಿಂತಿರುಗಿದ ಕೂಡಲೇ ಪ್ರಶಸ್ತಿ ಫಲಕವನ್ನ ಲಹರಿ ವೇಲು ಸೇರಿದಂತೆ, ತಮ್ಮ ಪ್ರೀತಿ ಪಾತ್ರರಿಗೆಲ್ಲ ತೋರಿಸಿ ಸಂಭ್ರಮಿಸಿದ್ದಾರೆ! ಎನಿವೇ, ಕಂಗ್ರಾಟ್ಸ್ ಮಂಜು.... ☯

# ಸ್ಮೋಕ್ ಮಾಡುವಂತೆ ಒತ್ತಾಯಿಸಿದ್ರೆ, ಆ ಸಿನಿಮಾನೇ ಮಾಡೋದಿಲ್ಲ ಎಂದಿದ್ದ ರಶ್ಮಿಕಾ ಮಂದಣ್ಣ 'ಸಿಗರೇಟ್' ಸೇದಿಯೇ ಬಿಟ್ಲು!



ನಟಿ ರಶ್ಮಿಕಾ ಮಂದಣ್ಣ ಅವರ ಈ ಫೋಟೋ ಸೋಶಿಯಲ್ ಮೀಡಿಯಾ ದಲ್ಲಿ ವ್ಯಾಪಕ ಟ್ರೋಲಿಂಗ್ ಆಗಿದೆ! ಸಿನಿಮಾ ಹಾಗೂ ನಿಜಜೀವನ ಬೇರೆ ಬೇರೆ. ಇವೆರಡನ್ನು ಒಂದು ಮಾಡಿಕೊಳ್ಳಲು ಯಾರೂ ಮುಂದಾಗುವುದಿಲ್ಲ. ಆದರೆ ಅಭಿಮಾನಿಗಳು ಮಾತ್ರ ಸಿನಿಮಾಗಳಲ್ಲಿ ಬರುವ ಸಾಕಷ್ಟು ವಿಷಯಗಳನ್ನು ಅನುಸರಿಸುತ್ತಾರೆ! ಇದರಲ್ಲಿ ಕೆಟ್ಟದ್ದು ಇರಬಹುದು ಒಳ್ಳೆಯದೂ ಇರಬಹುದು.

ಈ ಪೀಠಿಕೆ ಈವಾಗ ಯಾಕೆ ಎಂದರೆ, ಈ ಹಿಂದೊಮ್ಮೆ ರಶ್ಮಿಕಾ, ಸಿಗರೇಟ್ ಸೇದುವ ಬಗ್ಗೆ ಒಂದು ದೊಡ್ಡ ನಿರ್ಧಾರ ಪ್ರಕಟಿಸಿದ್ದರು. ನನ್ನ ವೈಯಕ್ತಿಕ ಜೀವನದಲ್ಲಿ, ನಾನು ಸಿಗರೇಟ್ ಸೇದುವುದಿಲ್ಲ, ಪರದೆಯ ಮೇಲೂ ಕೂಡ ನಾನು ಧೂಮಪಾನ ದೃಶ್ಯದಲ್ಲಿ ನಟಿಸಲು ಇಷ್ಟಪಡುವುದಿಲ್ಲ. ಯಾರಾದರೂ ಬಂದು ಚಿತ್ರದಲ್ಲಿ ಧೂಮಪಾನ ದೃಶ್ಯದಲ್ಲಿ ನಟಿಸಲು ಕೇಳಿದರೆ, ನಾನು ಆ ಚಿತ್ರವನ್ನು ನಿರಾಕರಿಸುತ್ತೇನೆ. ಅದರ ಹೊರತಾಗಿ, ನಾನು ಸಿಗರೇಟ್ ಸೇದುವುದಿಲ್ಲ ಎಂದು ಹೇಳಿದ್ದರು!



ಹೀಗೆ, ಸ್ಮೋಕ್ ಮಾಡುವಂತ ಸ್ಥಿತಿ ಬಂದ್ರೆ, ಸಿನಿಮಾನೇ ಮಾಡೋದಿಲ್ಲ ಎಂದಿದ್ದ ರಶ್ಮಿಕಾ ಮಂದಣ್ಣ ಇದೀಗ 'ಸಿಗರೇಟ್' ಸೇದುತ್ತಿರೋ ಫೋಟೋ ಸೋಶಿಯಲ್ ಮೀಡಿಯಾ ದಲ್ಲಿ ವೈರಲ್ ಆಗಿದೆ! ಚಲನ ಚಿತ್ರವೊಂದರಲ್ಲಿ ರಶ್ಮಿಕಾ ಸಿಗರೇಟ್ ಸೇದುತ್ತಿರುವ ದೃಶ್ಯವಿದು. ಈ ದೃಶ್ಯವನ್ನು ಮಾಡುವಾಗ ರಶ್ಮಿಕಾ ತಮ್ಮ ಹೇಳಿಕೆಯನ್ನು ನೆನಪಿಸಿಕೊಳ್ಳಲಿಲ್ಲವೇ? ಎಂದು ನೆಟ್ಟಿಗರು ಕೇಳುತ್ತಿದ್ದಾರೆ... ಇನ್ನು ರಶ್ಮಿಕಾ ವೈನ್ ಕುಡಿಯುತ್ತಾರೆ ಎಂಬುದು ಓಪನ್ ಸೀಕ್ರೆಟ್. ಇದನ್ನು ಅವರೇ ಈ ಹಿಂದೆ ಹೇಳಿಕೊಂಡಿದ್ದರು. ತಂದೂರಿ ಹಂದಿಮಾಂಸವನ್ನು ನೆಂಚಿಕೊಂಡು ವೈನ್ ಕುಡಿದರೆ ಸ್ವರ್ಗ... ಎಂದು ಹೇಳಿದ್ದರು!! ಇಂಥ ಓಪನ್ ಹಾರ್ಟೆಡ್ ಹುಡುಗಿ ರಶ್ಮಿಕಾ ಸಿಗರೇಟ್ ವಿಚಾರದಲ್ಲಿ ಹೀಗೇಕೆ ಮಾಡಿದ್ರೋ ಐ ಡೋಂಟ್ ಅಂಡರ್ ಸ್ಟ್ಯಾಂಡ್ ಯಾರ್!!! ☯


# ಪೊಲೀಸ್, ಕೋರ್ಟ್ ಹಾಗೂ ಮಾಧ್ಯಮ ಸಹಾಯವಾಣಿ

- ಗಂಡನಿಂದ ತೊಂದರೆಯೇ? ಪತ್ನಿಯಿಂದ ಕಿರುಕುಳವೇ?
- ಪ್ರೇಮಿಯಿಂದ ಬ್ಲ್ಯಾಕ್‌ಮೇಲ್ ಆಗುತ್ತಿದೆಯೇ?
- ಹೊಸದಾಗಿ ಮದುವೆಯಾಗಿ ಪತಿ ಪತ್ನಿ ಹೊಂದಾಣಿಕೆ ಇಲ್ಲದೆ ನಿಮಗೆ ಕೌನ್ಸಿಲಿಂಗ್ ಅಗತ್ಯವಿದೆಯೇ?
- ಅಣ್ಣ ತಮ್ಮಂದಿರ ನಡುವೆ, ಅಕ್ಕ ತಂಗಿಯರ ನಡುವೆ ಅಥವಾ ದಾಯದಿಗಳ ನಡುವೆ ಜಮೀನು-ಕೋರ್ಟ್ ವ್ಯಾಜ್ಯಗಳಿವೆಯೇ? ಪೊಲೀಸರು ನಿಮ್ಮ ದೂರರ್ಜಿ ತೆಗೆದುಕೊಳ್ಳುತ್ತಿಲ್ಲವೇ? ಅಥವಾ ಅರ್ಜಿಗೆ ಸರಿಯಾಗಿ ಸ್ಪಂಧಿಸುತ್ತಿಲ್ಲವೇ?
- ಪೋಷಕರೇ, ನಿಮ್ಮ ಮಕ್ಕಳು ನಿಮ್ಮ ಆಸ್ತಿ ಪಾಸ್ತಿ ಹೊಡೆದುಕೊಂಡು ಊಟ ಹಾಕದೆ ಮನೆಯಿಂದ ಹೊರ ಹಾಕಿದ್ದಾರೆಯೇ?
- ಅಪರಿಚಿತ ಪುರುಷ/ಮಹಿಳೆ ಯಿಂದ ತೊಂದರೆ (ಬ್ಲ್ಯಾಕ್ ಮೇಲ್) ಆಗುತ್ತಿದೆಯೇ?
- ಮಹಿಳೆಯರೇ/ ಪುರುಷರೇ ಮಹಿಳಾ ಪೊಲೀಸ್ ಠಾಣೆ ಹಾಗೂ ಮಹಿಳಾ ಆಯೋಗದಿಂದ ನಿಮಗೇನಾದರೂ ಸಹಾಯ ಆಗಬೇಕೇ?
- ಹಣ ಕಾಸು ವ್ಯವಹಾರದಲ್ಲಿ ಮೋಸವಾಗಿ ವಸೂಲಿ ಮಾಡಲಾಗದೆ ಪರದಾಡುತ್ತಿದ್ದೀರಾ? ಅಥವಾ ಯಾರಾದರೂ ಸಾಲ ಕೊಟ್ಟು ಬಡ್ಡಿ ಚಕ್ರಬಡ್ಡಿ ವಿಧಿಸಿ ನಿಮ್ಮ ನೆಮ್ಮದಿ ಹಾಳುಗೆಡವಿದ್ದಾರ? ತಾಲೂಕು ಕಚೇರಿ, ನಾಡ ಕಚೇರಿ, ಸಬ್-ರಿಜಿಸ್ಟ್ರಾರ್ ಕಚೇರಿಯಲ್ಲಿ ನಿಮ್ಮ ಜಮೀನಿಗೆ ಸಂಬಂಧಪಟ್ಟ ಕೆಲಸವಾಗಬೇಕೆ?
- ಯಾರಾದರೂ ಪುಂಡ ಪೋಕರಿಗಳಿಂದ, ರೌಡಿಗಳಿಂದ, ರಾಜಕಾರಣಿಗಳಿಂದ ನಿಮಗೆ ತೊಂದರೆ ಇದೆಯೇ?

ಚಿಂತಿಸಬೇಡಿ – ಹೆದರಬೇಡಿ! ಯಾವುದೇ ಸಮಸ್ಯೆ ಇರಲಿ, ಈ ಎಲ್ಲಾ ಸಮಸ್ಯೆಗಳಿಗೆ 'ಕಾನೂನು' ಪರಿಧಿಯೊಳಗೆ ಹೊರಾಡಲು ಮತ್ತು ಗೆಲ್ಲಲು ನಿಮಗೆ ಸಲಹೆ ನೀಡಲು **'ಪೊಲೀಸ್ ನ್ಯೂಸ್ ಸಹಾಯವಾಣಿ'** ಸಿದ್ದವಿದೆ. ಸಂಬಂಧಪಟ್ಟ ಅಧಿಕಾರಿಗಳು/ ವಕೀಲರು/ ವ್ಯಕ್ತಿಗಳು/ಇಲಾಖೆಯೊಂದಿಗೆ ಮಾತನಾಡಿ ನಿಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಕಾನೂನು ಹೋರಾಟ ಮಾಡಲು ಬೇಕಾದ ಅತ್ಯುತ್ತಮ ಸಲಹೆ ಸೂಚನೆಗಳನ್ನು ಇಲ್ಲಿ ಕೊಡಲಾಗುತ್ತದೆ.

ಸಂಪರ್ಕಕ್ಕಾಗಿ

9513892666, 8884452699 policenewsreporter@gmail.com


Vol. 41 No. 05 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com